
ದುಡಿಯುವ ಜನರ ಪ್ರಾಣ ಮಿತ್ರ

# ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 10 | ಮಾರ್ಚ್ 1–7, 2021 | ಪುಟ 16 | ರೂ. 10

https://janash dpress.com e-mail : js_weekly@yahoo.com




## 'ಆತ್ಮ ನಿರ್ಭರ ಭಾರತ'ದ ಹೆಸರಲ್ಲೇ ಭಾರತದ ಲೂಟಿ

## ಕಲ್ಲು ಗಣಿಗಾರಿಕೆ ಕಡಿವಾಣ ಯಾವಾಗ?






## ಕೈಗಾರಿಕಾ ಕ್ರಾಂತಿ 4.0ದಲ್ಲೂ ಹಿಂದೆ?




## ಚೇತರಿಸಿಕೊಳ್ಳದ ಅಸಂಘಟಿತ ಕಾರ್ಮಿಕರು

## 'ಸರ್ವಜ್ಞ ಮೋದಿ' ಬಲೂನ್ ಒಡೆದ ರೈತರ ಹೋರಾಟ






# ಫೆಬ್ರುವರಿ 27: ‘ಮಜ್ದೂರ್ ಕಿಸಾನ್ ಏಕತಾ’ ದಿನಾಚರಣೆ ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಕರೆ



ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಮತ್ತು ಸ್ವತಂತ್ರ ವಲಯವಾರು ಒಕ್ಕೂಟಗಳು ಮತ್ತು ಸಂಘಗಳ ಜಂಟಿ ವೇದಿಕೆ ಕರಾಳ ಕೃಷಿ ಕಾನೂನುಗಳ ರದ್ಧತಿ ಮತ್ತು ವಿದ್ಯುತ್ ಮಸೂದೆಯ ವಾಪಸಾತಿಯನ್ನು ಆಗ್ರಹಿಸಿ ರೈತರು ನಡೆಸುತ್ತಿರುವ ಐಕ್ಯ ಹೋರಾಟಕ್ಕೆ ದೇಶದ ಕಾರ್ಮಿಕರ ಸೌಹಾರ್ದವನ್ನು ಪುನರುಚ್ಚರಿಸುತ್ತ, ಫೆಬ್ರುವರಿ 27ರ ‘ಮಜ್ದೂರ್ ಕಿಸಾನ್ ಏಕತಾ’ ದಿನಾಚರಣೆಯಲ್ಲಿ ದೇಶಾದ್ಯಂತ ಕಾರ್ಮಿಕರು ಮತ್ತು ನೌಕರರು ಭಾಗವಹಿಸಬೇಕು ಎಂದು ಕರೆ ನೀಡಿದೆ. ಸಂಯುಕ್ತ ಕಿಸಾನ್ ಮೋರ್ಚಾ ಚಂದ್ರಶೇಖರ ಆಝಾದ್ ಹುತಾತ್ಮರಾದ ಮತ್ತು ಗುರು ರವಿದಾಸ ಜಯಂತಿಯ ಸಂದರ್ಭದಲ್ಲಿ ಈ ದಿನಾಚರಣೆಗೆ ಕರೆ ನೀಡಿತ್ತು.

ಭಾರತದ ಕಾರ್ಪೊರೇಟ್–ಪರ ಸರಕಾರ ರೈತರ ಬೇಡಿಕೆಗಳ ಬಗ್ಗೆ ಸಂಪೂರ್ಣ ನಕಾರಾತ್ಮಕ ನಿಲುವು ತಳೆದಿದೆ ಎಂದು ಈ ಜಂಟಿ ವೇದಿಕೆ ಖಂಡಿಸಿದೆ. ಈ ಸರಕಾರ ಕಾರ್ಮಿಕರು ಮತ್ತು ಇತರ ದುಡಿಯುವ ಜನ ವಿಭಾಗಗಳತ್ತವೂ ಇದೇ ನಿಲುವನ್ನು ತಳೆದಿದೆ. ಆಡಳಿತದ ಅತ್ಯುನ್ನತ ಸ್ಥಾನದಿಂದಲೇ ರೈತರ ಹೋರಾಟದ ವಿರುದ್ಧ ಒಂದು ದುರುದ್ದೇಶಪೂರ್ಣ ಪ್ರಚಾರವನ್ನು ಹರಿಯ ಬಿಡಲಾಗಿದೆ ಎಂದೂ ಈ ವೇದಿಕೆ ಖಂಡಿಸಿದೆ.

ಸಂಯುಕ್ತ ಕಿಸಾನ್ ಮೋರ್ಚಾ ತನ್ನ ಹೋರಾಟದ ಭಾಗವಾಗಿ ಪ್ರಕಟಿಸಿರುವ ಇತರ ಕಾರ್ಯಕ್ರಮಗಳನ್ನು ಕೂಡ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಮತ್ತು ಸ್ವತಂತ್ರ ವಲಯವಾರು ಒಕ್ಕೂಟಗಳು ಮತ್ತು ಸಂಘಗಳ ಜಂಟಿ ವೇದಿಕೆ ಸಂಪೂರ್ಣವಾಗಿ ಬೆಂಬಲಿಸಿದೆ.

ಸಂಯುಕ್ತ ಕಿಸಾನ್ ಮೋರ್ಚಾ ಫೆಬ್ರುವರಿ 24ನ್ನು ‘ದಮನ–ವಿರೋಧಿ ದಿನ’ವಾಗಿ ಮತ್ತು ಫೆಬ್ರುವರಿ 26ನ್ನು ಯುವ ಕಿಸಾನ್ ದಿನ’ವಾಗಿ ಆಚರಿಸಲು ಕೂಡ ಕರೆ ನೀಡಿದ್ದು ಇವೆಲ್ಲ ಕಾರ್ಯಕ್ರಮಗಳಿಗೂ ಬೆಂಬಲ ವ್ಯಕ್ತಪಡಿಸಿರುವ ಜಂಟಿ ವೇದಿಕೆ ದೇಶಾದ್ಯಂತ ಫೆಬ್ರುವರಿ 27 ರಂದು ಕೆಲಸದ ಸ್ಥಳಗಳಲ್ಲಿ, ಬ್ಲಾಕ್/ಜಿಲ್ಲಾ ಮಟ್ಟಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ರ್‍ಯಾಲಿ ಮುಂತಾದವುಗಳನ್ನು ನಡೆಸಬೇಕು ಎಂದು ಇಡೀ ಕಾರ್ಮಿಕ ಆಂದೋಲನಕ್ಕೆ ಮತ್ತು ದುಡಿಯುವ ಜನಸಮೂಹಗಳಿಗೆ ಕರೆ ನೀಡಿದೆ.

# ಮಹಿಳೆಯರಿಗೆ ನ್ಯಾಯದತ್ತ ಮುನ್ನಡೆಯ ಒಂದು ಹೆಜ್ಜೆ

## ಮಾನ ಹಾನಿ ಪ್ರಕರಣದಲ್ಲಿ ಪ್ರಿಯಾ ರಮಣಿ ಖುಲಾಸೆ ತೀರ್ಪಿಗೆ ಎಐಡಿಡಬ್ಲ್ಯೂಎ ಸ್ವಾಗತ

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (ಎಐಡಿಡಬ್ಲ್ಯೂಎ), ಪತ್ರಕರ್ತೆ ಪ್ರಿಯಾ ರಮಣಿಯವರನ್ನು ಮಾಜಿ ಬಿಜೆಪಿ ಕೇಂದ್ರಮಂತ್ರಿ ಎಂ ಜೆ ಅಕ್ಬರ್ ಹಾಕಿದ ಮಾನಹಾನಿಯ ಮೊಕದ್ದಮೆಯಲ್ಲಿ ಖುಲಾಸೆಗೊಳಿಸಿರುವ ನವದೆಹಲಿಯ ಎಸಿಎಂಎಂ ಶ್ರೀ ರವೀಂದರ್ ಕುಮಾರ್ ಪಾಂಡೆ ಅವರ ನ್ಯಾಯಾಲಯದ ತೀರ್ಪನ್ನು ಸ್ವಾಗತಿಸಿದೆ ಮತ್ತು ಎಂ ಜೆ ಅಕ್ಬರ್ ನಡೆಸಿರುವ ದುಷ್ಟ ಕಾನೂನು ಸಮರವನ್ನು ಪ್ರಿಯಾ ರಮಣಿಯವರು ಕೆಚ್ಚಿನಿಂದ ಎದುರಿಸಿದ್ದಾರೆ ಎಂದು ಪ್ರಶಂಸಿಸಿದೆ.

ಪ್ರಿಯಾ ರಮಣಿ 1998ರಲ್ಲಿ ಮುಂಬೈಯ ಒಂದು ಹೊಟೇಲಿನಲ್ಲಿ ಎಂ ಜೆ ಅಕ್ಬರ್ ಅವರ ಬಳಿ ಸಂದರ್ಶನಕಕ್ಕೆ ಹೋದಾಗ ಅನುಭವಿಸಿದ ಲೈಂಗಿಕ ಕಿರುಕುಳವನ್ನು ಕುರಿತಂತೆ ಮೂರು ಮಾನಹಾನಿಕರ ಪೋಸ್ಟ್‌ಗಳು, ಒಂದು ಲೇಖನ ಮತ್ತು ಎರಡು ಟ್ವೀಟ್‌ಗಳನ್ನು ಎರಡು ದಶಕಗಳ ನಂತರ ಬರೆದಿದ್ದಾರೆ ಎಂಬುದು ಅಕ್ಬರ್ ಅವರ ಆರೋಪವಾಗಿತ್ತು.

ಈ ತೀರ್ಪು ಕೇವಲ ಪ್ರಿಯಾ ರಮಣಿಯವರ ಗೆಲುವಷ್ಟೇ ಅಲ್ಲ, ಲೈಂಗಿಕ ಕಿರುಕುಳಕೋರರ ವಿರುದ್ಧ ಮಾತನಾಡುವ ಮತ್ತು ಮಾತನಾಡುತ್ತಲೇ ಇರುವ ಎಲ್ಲ ಮಹಿಳೆಯರಿಗೂ ಸಿಕ್ಕಿರುವ ಜಯ ಎಂದು ಎಐಡಿಡಬ್ಲ್ಯೂಎ ಹೇಳಿದೆ. ಲೈಂಗಿಕ ಕಿರುಕುಳದ ಅವಮಾನ ಮತ್ತು ದುರುಪಯೋಗಕ್ಕೆ ಆಗಾಗ್ಗೆ ಒಳಗಾಗುವ ದುಡಿಯುವ ಮಹಿಳೆಯರ ಅನುಭವಗಳಿಗೆ ಸ್ಪಂದಿಸುವ ಸಾಮರ್ಥ್ಯ ನ್ಯಾಯಾಂಗಕ್ಕೆ ಇದೆ ಎಂಬ ನಮ್ಮ ನಂಬಿಕೆಯನ್ನು ಈ ತೀರ್ಪು ಸಮರ್ಥಿಸುತ್ತದೆ. ಎಮ್.ಜೆ. ಅಕ್ಬರ್ ಪತ್ರಿಕೋದ್ಯಮದ ಪ್ರಖ್ಯಾತರು ಮತ್ತು ಪ್ರಬಲ ಹಾಗೂ ಪ್ರಭಾವಶಾಲಿ ಸಚಿವರಾಗಿದ್ದವರು ಎಂಬ ಅಂಶವು ನ್ಯಾಯಾಧೀಶರನ್ನು ವಿಚಲಿತಗೊಳಿಸಲಿಲ್ಲ ಎಂದು ಎಐಡಿಡಬ್ಲ್ಯೂಎ ಅಧ್ಯಕ್ಷರಾದ ಮಾಲಿನಿ ಭಟ್ಟಾಚಾರ್ಯ, ಕಾನೂನು ಸಲಹೆಗಾರರಾದ ಕೀರ್ತಿ ಸಿಂಗ್ ಮತ್ತು ಪ್ರಧಾನ ಕಾರ್ಯದರ್ಶಿ ಮರಿಯಮ್ ಧವಳೆಯವರು ನೀಡಿರುವ ಹೇಳಿಕೆ ಸಂತೋಷ ವ್ಯಕ್ತಪಡಿಸಿದೆ. ವ್ಯಕ್ತಿಗಳು ಸಮಾಜದಲ್ಲಿ ಗೌರವಾನ್ವಿತರಾಗಿದ್ದರೂ ಸಹ, “ವೈಯಕ್ತಿಕ ಜೀವನದಲ್ಲಿ ಹೆಂಗಸರಿಗೆ ತೀವ್ರ ಕ್ರೌರ್ಯವನ್ನು ತೋರಿಸಬಹುದು” ಎಂದು ನ್ಯಾಯಾಧೀಶರು ಈ ತೀರ್ಪಿನಲ್ಲಿ ಗಮನಿಸಿದ್ದಾರೆ.

ಮಾತು ಮತ್ತು ಸನ್ನೆಗಳ ಮೂಲಕ ನಡವಳಿಕೆಯಿಂದ ಎಂ.ಜೆ.ಅಕ್ಬರ್ ತನಗೆ ಲೈಂಗಿಕ ಕಿರುಕುಳ ಕೊಟ್ಟಿದ್ದಾರೆ ಎಂದು ಪ್ರಿಯಾ ರಮಣಿ ಹೇಳಿದ್ದರು. ಲೈಂಗಿಕ ಕಿರುಕುಳ ಎಂಬುದು ದೈಹಿಕ ದುರುಪಯೋಗದ ಅಂಶಗಳನ್ನು ಹೊಂದಿರಲೇ ಬೇಕೆಂದೇನಿಲ್ಲ ಎಂಬ ಅಂಶವನ್ನು ಇದು ಒತ್ತಿಹೇಳುತ್ತದೆ. ಈ ತೀರ್ಪು ಪುರುಷರ ಸಾಮಾಜಿಕ ಮತ್ತು ರಾಜಕೀಯ ನಿಲುವನ್ನು ಲೆಕ್ಕಿಸದೆ ದುರುಪಯೋಗ ಮಾಡುವವರ ವಿರುದ್ಧ ದೂರು ನೀಡಬಹುದು ಎಂದು ಮಹಿಳೆಯರು ನಂಬಲು ದಾರಿ ಮಾಡಿಕೊಡುತ್ತದೆ. ಮಹಿಳೆಯರನ್ನು ಬೆದರಿಸಬಹುದು ಮತ್ತು ದೂರುಗಳನ್ನು ನೀಡದಂತೆ ತಡೆಯಬಹುದು ಎಂದು ಭಾವಿಸುವ ಪುರುಷರಿಗೆ ಇದು ಉತ್ತಮ ತಡೆಯಾಗಿದೆ ಎಂದು ಎಐಡಿಡಬ್ಲ್ಯೂಎ ಹೇಳಿದೆ..



ಪ್ರಿಯಾ ರಮಣಿ ತಮ್ಮ ವಕೀಲೆ ರೆಬೆಕಾರವರೊಂದಿಗೆ

ಪ್ರಿಯಾ ರಮಣಿ ತಮ್ಮ ವಿರುದ್ಧ “ಸುಳ್ಳು, ಅವಹೇಳನಕಾರಿ ಮತ್ತು ದುರುದ್ದೇಶಪೂರಿತ ಆರೋಪಗಳನ್ನು” ಮಾಡಿದ್ದಾರೆ ಎಂದು ಎಮ್. ಜೆ. ಅಕ್ಬರ್ ವಾದಿಸಿದ್ದರು, ತಮ್ಮ “ ಪ್ರತಿಷ್ಠೆ ಮತ್ತು ರಾಜಕೀಯ ಸ್ಥಾನಮಾನವನ್ನು ಕೆಡಿಸುವ ಏಕೈಕ ಉದ್ದೇಶದಿಂದ” ಈ ಆರೋಪಗಳನ್ನು ಮಾಡಿದ್ದಾರೆ, ಅವರ ಟ್ವೀಟ್‌ಗಳು ಮತ್ತು ಲೇಖನವು ಇಪ್ಪತ್ತು ವರ್ಷಗಳ ಹಿಂದಿನ ಒಂದು ಘಟನೆಯನ್ನು ಉಲ್ಲೇಖಿಸಿವೆ ಎಂದೂ ಅಕ್ಬರ್ ಹೇಳಿದ್ದರು. ತಾನು ತಾರಾಂಕಿತ ಖ್ಯಾತಿಯ ವ್ಯಕ್ತಿ ಎಂದು ಅವರು ವಾದಿಸಿದ್ದರು. ಘಟನೆಯ ಸಮಯದಲ್ಲಿ ತಾನು ದೂರು ನೀಡಲಿಲ್ಲ, ಸಮಯದಲ್ಲಿ ಲೈಂಗಿಕ ಕಿರುಕುಳದ ದೂರುಗಳನ್ನು ನಿರ್ವಹಿಸುವ ಯಾವುದೇ ಕಾರ್ಯವಿಧಾನಗಳು ಇರಲಿಲ್ಲವಾದ್ದರಿಂದ ಮತ್ತು ಎಂ.ಜೆ. ಅಕ್ಬರ್ ಅವರ ಪ್ರಬಲ ಸಾಮಾಜಿಕ ಸ್ಥಾನಮಾನದಿಂದಾಗಿಯೂ ಅದು ಸಾಧ್ಯವಾಗಿರಲಿಲ್ಲ ಎಂದು ಪ್ರಿಯಾ ರಮಣಿ ವಾದಿಸಿದ್ದರು.

ಈ ಘಟನೆಯ ಬಗ್ಗೆ ಪ್ರಿಯಾ ರಮಣಿಯವರು ನಿಲೌಫರ್ ವೆಂಕಟರಾಮನ್ ಅವರ ಬಳಿ ಹೇಳಿದ್ದರು. ನೀಲೌಫರ್ ಅವರ ಸಾಕ್ಷ್ಯವು ಪ್ರಿಯಾ ರಮಣಿಯವರ ಮಾತನ್ನು ಸಾಬೀತುಪಡಿಸಿದೆ ಎಂದು ನ್ಯಾಯಾಧೀಶರು ಅರಿತುಕೊಂಡರು. ಸಾಕ್ಷ್ಯವು ಸಹ ವಿಶ್ವಾಸಾರ್ಹ ಮತ್ತು ಸತ್ಯವಾಗಿದೆ ಮತ್ತು ರಮಣಿ ಸದ್ಭಾವನೆಯಿಂದಲೇ, ಮತ್ತು ಕೆಲಸದ ಸ್ಥಳದಲ್ಲಿ ಸಾಮಾನ್ಯವಾಗಿರುವ ಲೈಂಗಿಕ ಕಿರುಕುಳದ ಬಗ್ಗೆ ಇತರ ಮಹಿಳೆಯರ ಹಿತದೃಷ್ಟಿಯಿಂದ ಲೇಖನವನ್ನು ಪ್ರಕಟಿಸಿದರು ಮತ್ತು ಟ್ವೀಟ್ ಮಾಡಿದರು. ಮತ್ತು “ಸಾರ್ವಜನಿಕ ಒಳಿತಿಗಾಗಿ” ಮಾಡಿದ ಹೇಳಿಕೆಯಂತೆ, “ಸತ್ಯ” ಎಂಬುದು ಕ್ರಿಮಿನಲ್ ಮಾನಹಾನಿಯ ದಾಳಿಗೆ ಒಂದು ಒಪ್ಪತಕ್ಕ ಪರ್ಯಾಯ ರಕ್ಷಣೆಯಾಗಿದೆ ಎಂದು ಹೇಳಬೇಕಿದೆ ಎಂದಿರುವ ನ್ಯಾಯಾಲಯ ಸದ್ಭಾವನೆಯಿಂದ ಮತ್ತು ಪ್ರಾಮಾಣಿಕತೆಯಿಂದ ಕೂಡಿರುವ ಹೇಳಿಕೆಯು ಕೂಡ ಒಂದು ಒಪ್ಪತಕ್ಕ ರಕ್ಷಣೆಯಾಗಿದೆ. ಪ್ರಿಯಾ ರಮಣಿ ಮತ್ತು ಗಜಾಲಾ ವಹಾಬ್ ಅವರ ಹೇಳಿಕೆಯನ್ನು ಆಧರಿಸಿ, ಅಕ್ಬರ್ ಅವರು ತಾರಾಂಕಿತ ಖ್ಯಾತಿಯ ವ್ಯಕ್ತಿಯೇನಲ್ಲ ಎಂದು ಅಭಿಪ್ರಾಯಪಟ್ಟಿದೆ. ಲೈಂಗಿಕ ಕಿರುಕುಳ ಮತ್ತು ನಿಂದನೆ ಹೇಗೆ ಖಾಸಗಿಯಾಗಿ ನಡೆಯುತ್ತದೆ ಎಂಬುದನ್ನು ನ್ಯಾಯಾಲಯವು ಗಣನೆಗೆ ತೆಗೆದುಕೊಂಡಿತು ಮತ್ತು ವಿಶಾಖಾ ಮಾರ್ಗಸೂಚಿಗಳು ಹಾಗೂ ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳದ ಕಾಯ್ದೆ 2013 ರ ಶಾಸನಕ್ಕೆ ಮುಂಚಿತವಾಗಿ, ಕೆಲಸದ ಸ್ಥಳದಲ್ಲಿ ವ್ಯಾಪಕವಾದ ನಿಂದನೆಯನ್ನು ಪರಿಹರಿಸಲು ಯಾವುದೇ ಕಾರ್ಯವಿಧಾನಗಳಿರಲಿಲ್ಲ ಎಂಬುದನ್ನೂ ನ್ಯಾಯಾಲಯ ಪರಿಗಣನೆಗೆ ತೆಗೆದುಕೊಂಡಿತು. ಸಾಮಾಜಿಕ ಕಳಂಕದ ಭಯದಿಂದಾಗಿ ಜನರು ಹೆಚ್ಚಾಗಿ ಲೈಂಗಿಕ ಕಿರುಕುಳದ ಬಗ್ಗೆ ದೂರು ನೀಡುವುದಿಲ್ಲ ಎಂದು ಅದು ಅಭಿಪ್ರಾಯ ಪಟ್ಟಿದೆ.. ಅಂತಿಮವಾಗಿ, ಮಹಿಳೆಯೊಬ್ಬಳು ತನ್ನ ವಿರುದ್ಧ ಮಾನಹಾನಿಯ ಕ್ರಿಮಿನಲ್ ದೂರು ದಾಖಲಿಸುವ ಮೂಲಕ ಲೈಂಗಿಕ ಕಿರುಕುಳದ ವಿರುದ್ಧ ಧ್ವನಿ ಎತ್ತಿದ್ದಕ್ಕಾಗಿ ಆಕೆಗೆ ಶಿಕ್ಷೆ ವಿಧಿಸಲಾಗದು ಎಂದು ನ್ಯಾಯಾಲಯವು ಅಭಿಪ್ರಾಯಪಟ್ಟಿದೆ. ಏಕೆಂದರೆ ಭಾರತೀಯ ಸಂವಿಧಾನದಲ್ಲಿ 21ನೇ ವಿಧಿ ಖಾತರಿಪಡಿಸಿರುವ ಜೀವನದ ಹಕ್ಕು ಮತ್ತು 14ನೇ ವಿಧಿಯ ಅಡಿಯಲ್ಲಿ ಖಾತರಿಪಡಿಸುವ ಕಾನೂನಿನ ಸಮ್ಮುಖದಲ್ಲಿ ಸಮಾನತೆ ಮತ್ತು ಸಮಾನ ರಕ್ಷಣೆಯ ಹಕ್ಕು ಇವನ್ನು ಬಲಿಗೊಟ್ಟು ಖ್ಯಾತಿಯ ಹಕ್ಕನ್ನು ರಕ್ಷಿಸಲಾಗುವುದಿಲ್ಲ ಎಂದಿರುವ ಈ ತೀರ್ಪು ಘಟನೆ ಸಂಭವಿಸಿದ ದಶಕಗಳ ನಂತರವೂ ತನ್ನ ಆಯ್ಕೆಯ ಯಾವುದೇ ವೇದಿಕೆಯಲ್ಲಿ ಮಹಿಳೆಗೆ ತನ್ನ ಕುಂದುಕೊರತೆಗಳನ್ನು ಮಂಡಿಸುವ ಹಕ್ಕಿದೆ ಎಂದು ಹೇಳಿದೆ.

ಪಿತೃಪ್ರಧಾನ ಮೌಲ್ಯಗಳು ಆಳವಾಗಿರುವ ನಮ್ಮ ಸಮಾಜದಲ್ಲಿ ಮಹಿಳೆಯರಿಗೆ ನ್ಯಾಯ ಎಂಬುದು ಇನ್ನೂ ಬಹಳ ದೂರದ ಸಂಗತಿಯಾಗಿದೆ. ಈ ತೀರ್ಪು ಮುನ್ನಡೆಯ ಒಂದು ಸಣ್ಣ ಹೆಜ್ಜೆಯಾಗಿದೆ ಎನ್ನುತ್ತ, ಇದು ಹೆಚ್ಚು ಹೆಚ್ಚು ಮಹಿಳೆಯರಿಗೆ ಲೈಂಗಿಕ ಕಿರುಕುಳದ ದೂರುಗಳನ್ನು ಹೊರತರಲು ಅನುವು ಮಾಡಿಕೊಡುತ್ತದೆ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಈ ಹೇಳಿಕೆ ಆಶಿಸಿದೆ.




# ...ಲ್ಲಿ ಪೋಲೀಸ್ ಆಯುಕ್ತರನ್ನು ವಜಾ ಮಾಡಬೇಕು –ಎಐಕೆಎಸ್‌ಸಿಸಿ ಆಗ್ರಹ

ದಿಲ್ಲಿಯ ಪಟಿಯಾಲ ಹೌಸ್ ನ್ಯಾಯಾಲಯ 22 ವರ್ಷದ ಹವಾಮಾನ ಕಾರ್ಯಕರ್ತೆ ದಿಶಾ ರವಿಗೆ ರೈತರ ಪ್ರತಿಭಟನಾ ಟೂಲ್‌ಕಿಟ್ ಎಫ್ಐಆರ್ ನಲ್ಲಿ ಜಾಮೀನು ಕೊಟ್ಟಿರುವುದನ್ನು ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿ(ಎಐಕೆಎಸ್‌ಸಿಸಿ) ಸ್ವಾಗತಿಸಿದೆ. ಈ ಹಿನ್ನೆಲೆಯಲ್ಲಿ ದಿಲ್ಲಿ ಪೋಲೀಸ್ ಆಯುಕ್ತ ಎಸ್.ಎನ್. ಶ್ರೀವಾಸ್ತವ ಅವರನ್ನು ಅವರ ಹುದ್ದೆಯಿಂದ ವಜಾಮಾಡಬೇಕು ಹಾಗೂ ಅವರಿಗೆ ಉಳಿದವರಿಗೆ ಉದಾಹರಣೆಯಾಗುವಂತಹ ಶಿಕ್ಷೆಯನ್ನು ವಿಧಿಸಬೇಕು ಎಂದು ಎಐಕೆಎಸ್‌ಸಿಸಿ ಆಗ್ರಹಿಸಿದೆ.

ದೇಶವನ್ನೆಲ್ಲ ಆವರಿಸಿರುವ ರೈತರ ಹೋರಾಟವನ್ನು ಬೆಂಬಲಿಸುವವರನ್ನು ದಮನ ಮಾಡುವ ಕೇಂದ್ರ ಸರಕಾರದ ಹತೋಟಿಯಲ್ಲಿರುವ ದಿಲ್ಲಿ ಪೋಲೀಸ್‌ನ ಪ್ರಯತ್ನದ ಭಾಗವಾಗಿ ಈಕೆಯನ್ನು ಕಾನೂನುಬಾಹಿರವಾಗಿ ದಸ್ತಗಿರಿ ಮಾಡಿ, ದಂಡ ಸಂಹಿತೆಯ ಸೆಕ್ಷನ್ 124ಎ(ರಾಜದ್ರೋಹ) ಮತ್ತು ಸೆಕ್ಷನ್ 153ಎ (ವೈರತ್ವ ಪ್ರಚೋದನೆ)ಯ ಅಡಿಯಲ್ಲಿ ಜೈಲಿಗೆ ಕಳಿಸಿದ್ದು ಆಘಾತಕಾರಿ ಸಂಗತಿ. **ನ್ಯಾಯಾಲಯ ತನ್ನ ಜಾಮೀನು ಆದೇಶದಲ್ಲಿ ದಿಲ್ಲಿ ಪೋಲೀಸ್ ಮತ್ತು ಕೇಂದ್ರ ಸರಕಾರದ ಈ ಕ್ರಮವನ್ನು ಕಟುವಾಗಿ ಟೀಕಿಸಿದೆ, ಪ್ರಭುತ್ವದ ಧೋರಣೆಗಳಿಗೆ ಅಸಮ್ಮತಿ ವ್ಯಕ್ತಪಡಿಸಿದರೆಂಬ ಕಾರಣಕ್ಕೆ ನಾಗರಿಕರನ್ನು ಜೈಲಿಗೆ ಹಾಕಲು ಸಾಧ್ಯವಿಲ್ಲ ಎಂದು ಅದು ಹೇಳಿದೆಯೆಂಬುದು ಗಮನಾರ್ಹ. ಪೋಲೀಸರು ಯಾವುದರ ಬಗ್ಗೆ ಬಹಳಷ್ಟು ಗದ್ದಲವೆಬ್ಬಿಸಿದರೋ, ದಿಶಾ ನಿರ್ಮಿಸಿದರು ಎನ್ನಲಾದ ಆ ಟೂಲ್ ಕಿಟ್ ಯಾವುದೇ ಹಿಂಸಾಚಾರಕ್ಕೆ ಕರೆ ನೀಡಿಲ್ಲ, ಸರಕಾರಗಳ ಘಾಸಿಗೊಂಡ ಅಹಂನ್ನು ತಣಿಸಲು ರಾಜದ್ರೋಹದ ಆರೋಪವನ್ನು ಹಾಕುವಂತಿಲ್ಲ ಎಂದೂ ನ್ಯಾಯಾಲಯ ಹೇಳಿದೆ.**

ದಿಲ್ಲಿಯ ಪೋಲೀಸ್ ಆಯುಕ್ತ ಎಸ್. ಎನ್. ಶ್ರೀವಾಸ್ತವ ದಿಶಾ ರವಿಯವರನ್ನು ರೈತರ ಹೋರಾಟವನ್ನು ಬೆಂಬಲಿಸಿದ್ದಕ್ಕಾಗಿ ಕಾನೂನುಬಾಹಿರವಾಗಿ, ಅನ್ಯಾಯಯುತವಾಗಿ ಬಂಧಿಸಿದ್ದಾರೆಂಬುದು ಎದ್ದು ಕಾಣುತ್ತದೆ. ರೈತರ ಚಳುವಳಿಯನ್ನು ಸಂವಿಧಾನಬಾಹಿರವಾಗಿ ದಮನ ಮಾಡಲು ಕೇಂದ್ರ ಸರಕಾರದ ಪ್ರಯತ್ನಿಸುತ್ತಿದೆ ಎಂದು ಅದರ ವರ್ತನೆಯಿಂದ ಸ್ಪಷ್ಟವಾಗಿ ಕಾಣುತ್ತದೆ. ದಿಲ್ಲಿ ಪೋಲೀಸ್ ಆಯುಕ್ತರು ತಮ್ಮ ಸಂವಿಧಾನಿಕ ಬಾಧ್ಯತೆಗಳನ್ನು ಮರೆತು ಸರಕಾರದ ಈ ಅಪರಾಧಗಳಿಗೆ ನೆರವಾಗಿದ್ದಾರೆ.

ಈ ಆಯುಕ್ತರ ಹತೋಟಿಯಲ್ಲಿ ದಿಲ್ಲಿ ಪೋಲೀಸ್ ನಾಗರಿಕರಿಗೆ ಕಿರುಕುಳ ಕೊಡುವ, ಅರಾಜಕತೆಯ ಸಾಧನವಾಗಿ ಬಿಟ್ಟಿದೆ. ಈ ಮೂಲಕ ಅವರು ಈ ಹುದ್ದೆಗೆ ತಾನು ಅನರ್ಹ ಎಂದು ಸಾಬೀತು ಮಾಡಿದ್ದಾರೆ. ಆದ್ದರಿಂದ ಅವರನ್ನು ತಕ್ಷಣವೇ ಅವರ ಹುದ್ದೆಯಿಂದ ವಜಾಮಾಡಬೇಕು ಹಾಗೂ ನಾಗರಿಕರನ್ನು ರಕ್ಷಿಸುವ ತನ್ನ ಸಂವಿಧಾನಿಕ ಕರ್ತವ್ಯವನ್ನು ಎತ್ತಿಹಿಡಿಯುವಲ್ಲಿ ಮತ್ತು ಕಾನೂನಿನ ಪ್ರಕಾರ ವರ್ತಿಸುವಲ್ಲಿ ವಿಫಲರಾಗಿರುವುದಕ್ಕೆ ಅವರಿಗೆ ಉಳಿದವರಿಗೆ ಉದಾಹರಣೆಯಾಗುವಂತಹ ಶಿಕ್ಷೆಯನ್ನು ವಿಧಿಸಬೇಕು ಎಂದು ಎಐಕೆಎಸ್‌ಸಿಸಿ ಆಗ್ರಹಿಸಿದೆ.

ಸಂಪಾದಕೀಯ

# ಚೇತರಿಸಿಕೊಳ್ಳದ ಅಸಂಘಟಿತ ಕಾರ್ಮಿಕರು

ಕೋವಿಡ್-19 ಮತ್ತು ಅದರೊಂದಿಗೆ ಹೇರಲ್ಪಟ್ಟ ಲಾಕ್‌ಡೌನ್‌ನಿಂದ ಬೆಂಗಳೂರಿನ ಅಸಂಘಟಿತ ವಲಯದ ಕಾರ್ಮಿಕರು ಇನ್ನೂ ಚೇತರಿಸಿಕೊಂಡಿಲ್ಲ ಎಂದು ಇತ್ತೀಚೆಗೆ ನಡೆಸಲಾದ ಒಂದು ಅಧ್ಯಯನದಿಂದ ತಿಳಿದುಬಂದಿದೆ. ಈ ಮಾರಣಾಂತಿಕ ಕಾಯಿಲೆಯಿಂದಾಗಿ ಅಸ್ತವ್ಯಸ್ತಗೊಂಡ ಅವರ ಬದುಕು ಇದುವರೆಗೂ ಹಳಿಯ ಮೇಲೆ ಬಂದಿಲ್ಲ. ಅವರು ಅನುಭವಿಸಿದ ಕಷ್ಟನಷ್ಟಗಳು ಇಲ್ಲಿಯವರೆಗೂ ಪರಿಹಾರ ಕಂಡಿಲ್ಲ.

ಅಜಿತ್ ಪ್ರೇಮ್‌ಜಿ ವಿಶ್ವವಿದ್ಯಾಲಯ ಇತ್ತೀಚೆಗೆ ನಡೆಸಿದ ಅಧ್ಯಯನದಲ್ಲಿ ಅಸಂಘಟಿತ ವಲಯದ 15% ಮಂದಿ ಕಾರ್ಮಿಕರು ತಮ್ಮ ಕೆಲಸ ಕಳೆದುಕೊಂಡ ದಿನದಿಂದ ಇದುವರೆಗೂ ನಿರುದ್ಯೋಗಿಗಳಾಗಿದ್ದಾರೆ. ಸಾಂಕ್ರಾಮಿಕ ಹಾವಳಿಯ ಪರಿಣಾಮವಾಗಿ 23% ರಷ್ಟು ಕಾರ್ಮಿಕರು ಕೆಲಸ ಕಳೆದುಕೊಂಡು ಬೀದಿಪಾಲಾಗಿದ್ದರು. ಸುಮಾರು ಅರ್ಧದಷ್ಟು ಕಾರ್ಮಿಕರು (46%) ಕಡಿಮೆ ಸಂಬಳಕ್ಕೆ ಅದೇ ಕೆಲಸವನ್ನು ಮಾಡುತ್ತಿದ್ದಾರೆ.

ಸಮೀಕ್ಷೆ ನಡೆಸಲಾದ ಸುಮಾರು 75% ರಷ್ಟು ಅಸಂಘಟಿತ ಕಾರ್ಮಿಕರು ಕೋವಿಡ್-19 ಆವರಿಸುವ ಮೊದಲು ಮಾಡುತ್ತಿದ್ದ ಕೆಲಸಗಳನ್ನೇ ಮಾಡುತ್ತಿದ್ದಾರೆ; ಆದರೆ ಕಡಿಮೆ ಸಂಬಳ ಪಡೆಯುತ್ತಿದ್ದಾರೆ. ಅಸಂಘಟಿತ ವಲಯದ 2500 ಕಾರ್ಮಿಕರನ್ನು ಸಮೀಕ್ಷೆಗೆ ಒಳಪಡಿಸಲಾಗಿತ್ತು. ಅವರು ಮುಖ್ಯವಾಗಿ ಸ್ವಯಂ ಉದ್ಯೋಗಿಗಳಾದ ಬಿದಿ ಬದಿಯ ವ್ಯಾಪಾರಸ್ಥರು, ಕಸ ಎತ್ತುವವರು, ಆಟೋರಿಕ್ಷಾ ಚಾಲಕರು, ಮೆಕ್ಯಾನಿಕ್ ಕೆಲಸಗಾರರು, ಅಗಸರು, ಸಣ್ಣ ಕಾರ್ಖಾನೆಗಳ ಮಾಲೀಕರು ಮತ್ತು ಕಾಯಂ ಸಂಬಳವಿಲ್ಲದ ಮನೆಕೆಲಸಗಾರರು, ಲೈಂಗಿಕ ಕಾರ್ಯಕರ್ತರು ಹಾಗೂ ಕಟ್ಟಡ ನಿರ್ಮಾಣ ಕೆಲಸಗಾರರು ಆಗಿದ್ದರು.

ಹೆಚ್ಚು ಭಾಧೆಗೊಳಗಾಗುವ ಗಾರ್ಮೆಂಟ್ ಕೆಲಸಗಾರರು, ಕಾವಲು ಸಿಬ್ಬಂದಿಗಳು, ಚಿಲ್ಲರೆ ವ್ಯಾಪಾರ ಮಾಡುವ ಅಂಗಡಿಗಳಲ್ಲಿ ದುಡಿಯುವವರು ಸಹ ಸಮೀಕ್ಷೆಗೆ ಒಳಪಟ್ಟಿದ್ದರು. ಅವರ ಪ್ರಸ್ತುತ ಮಾಸಿಕ ಸಂಬಳ ಸರಾಸರಿ ರೂ. 6000. ಕೊರೊನಾ ಹಾವಳಿಗಿಂತ ಮೊದಲು ಇವರು ತಿಂಗಳಿಗೆ ರೂ. 8000 ದಿಂದ ರೂ. 12,000 ವರೆಗೆ ಸಂಬಳ ಪಡೆಯುತ್ತಿದ್ದರು.

ಮಹಿಳೆಯರು ಮತ್ತು ವೃದ್ಧರು ಹೆಚ್ಚು ಬಾಧೆಗೊಳಗಾದವರು ಮತ್ತು ಹೆಚ್ಚು ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸಿದ್ದರು. ಪ್ರಸಕ್ತ ಅಧ್ಯಯನದ ಪ್ರಕಾರ ಇವರಿಗೆ ಬದುಕಿನ ನಿರ್ವಹಣೆ ಒಂದು ಸವಾಲಾಗಿದ್ದರೆ ಉದ್ಯೋಗವನ್ನು ದೊರಕಿಸಿಕೊಳ್ಳುವುದು ಇನ್ನೂ ದೊಡ್ಡ ಸಂಕಷ್ಟವಾಗಿತ್ತು. ಸಂಘಟಿತ ವಲಯಕ್ಕೆ ದೊರೆತ ಸೌಕರ್ಯಗಳೂ ಸಹ ಅಸಂಘಟಿತ ವಲಯದ ಕಾರ್ಮಿಕರಿಗೆ ಸಿಗುತ್ತಿರಲಿಲ್ಲ. ಕೋವಿಡ್ ಸಾಂಕ್ರಾಮಿಕದಿಂದ ಅತಿ ಹೆಚ್ಚು ಬಾಧೆಗೆ ಒಳಗಾದವರು ರಾಜ್ಯದೊಳಗೆ ಹಾಗೂ ಪರರಾಜ್ಯಗಳಿಂದ ವಲಸೆ ಬಂದ ಅಸಂಘಟಿತ ಕಾರ್ಮಿಕರು, ಮನೆಗಳಲ್ಲಿ ಕನಿಷ್ಠ ಖರ್ಚು ವೆಚ್ಚಗಳನ್ನು ನೀಗಿಸುವುದು, ಆರೋಗ್ಯ ರಕ್ಷಣೆಗಾಗಿ ಗಮನ ಕೊಡುವುದು, ಮಕ್ಕಳಿಗೆ ಕನಿಷ್ಠ ಆಹಾರವನ್ನು ಒದಗಿಸುವುದು ಬೆಂಗಳೂರಿನಂತಹ ನಗರ ಪ್ರದೇಶಗಳಿಗೆ ವಲಸೆ ಬಂದ ಅಸಂಘಟಿತ ಕಾರ್ಮಿಕರು ಅನುಭವಿಸಿದ ಯಾತನೆ ವಿವರಿಸಲಸಾಧ್ಯವಾದದ್ದು. ಸರ್ಕಾರ ಕೈಗೊಂಡ ಪರಿಹಾರ ಕ್ರಮಗಳು ಭಾಧಿತರಿಗೆ ತಲಪಲೇ ಇಲ್ಲ. ಉಚಿತವಾಗಿ ಬಡವರಿಗೆ ಕೊಡಬೇಕಾದ ಆಹಾರ ಧಾನ್ಯಗಳ ಕಿಟ್‌ಗಳು ಯಾರ್ಯಾರ ಪಾಲಾದವು. ಉಚಿತ ರೇಷನ್ ವ್ಯವಸ್ಥೆ ಸರ್ಕಾರ ಜಾರಿಗೆ ತರಲೇಇಲ್ಲ. ಅಗತ್ಯ ವಸ್ತುಗಳ ಬೆಲೆಗಳು ಏರುತ್ತಿದ್ದರೂ ಸರ್ಕಾ ಕೈಕಟ್ಟಿ ಕುಳಿತಿತ್ತು. ಎಲ್ಲಾ ಬಡ ಕುಟುಂಬಗಳ ಬ್ಯಾಂಕ್ ಖಾತೆಗಳಿಗೆ ಮಾಸಿಕ ರೂ. 7,500 ಗಳನ್ನು ಕನಿಷ್ಠ 6 ತಿಂಗಳವರೆಗೆ ಜಮಾಮಾಡಬೇಕೆಂಬ ಬೇಡಿಕೆಯನ್ನು ಸರ್ಕಾರ ಕಿವಿಯ ಮೇಲೆ ಹಾಕಿಕೊಳ್ಳಲೇ ಇಲ್ಲ. ಮುಖಕ್ಕೆ ಮಾಸ್ಕ ಕಟ್ಟಿ, ಮನೆಯಿಂದ ಹೊರ ಬರಬೇಡಿ ಎಂಬುದೊಂದೇ ಸರ್ಕಾರ ಘೋಷಿಸಿದ ಪರಿಹಾರ. ಪೌಷ್ಠಿಕತೆಯ ಅಭಾವದಿಂದ ನರಳುತ್ತಿರುವವರಿಗೆ ಉಚಿತ, ಒಳ್ಳೆಯ ಗುಣಮಟ್ಟದ ಆಹಾರ ಸಿಗುವಂತೆ ಮಾಡದೆ, ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಉಚಿತ ಔಷದೋಪಚಾರ, ಗುಣಮಟ್ಟದ ಆರೈಕೆ ದೊರಕಿಸದೆ ಬಡವರು ತಮ್ಮ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಸಾಧ್ಯವೇ? ಕೇಂದ್ರ ರಾಜ್ಯ ಸರ್ಕಾರಗಳ ವೈಫಲ್ಯದಿಂದ ದೇಶದಲ್ಲಿ ಒಟ್ಟು 2 ಲಕ್ಷ ಅಮಾಯಕರು ಸಾವನ್ನು ಅಪ್ಪಿದ್ದಾರೆ.

ಈಗಲಾದರು ಯಡಿಯೂರಪ್ಪನವರ ಸರ್ಕಾರ ನಿದ್ದೆಯಿಂದ ಎಚ್ಚೆತ್ತುಕೊಳ್ಳಬೇಕು. ಜನಚಳುವಳಿಯ ಮೂಲಕ ಈ ಕುಂಬಕರ್ಣ ಸರ್ಕಾರವನ್ನು ಎಬ್ಬಿಸಬೇಕು. ಹಿಂದಿನ ಅನಾಹುತದಿಂದ ಪಾಠ ಕಲಿತು ಎಲ್ಲಾ ಬಡವರಿಗೂ ಲಸಿಕೆಗಳನ್ನು ಉಚಿತವಾಗಿ ನೀಡಿ, ಸರ್ಕಾರಿ ಆಸ್ಪತ್ರೆಗಳಲ್ಲಿ ಒಳ್ಳೆಯ ಗುಣಮಟ್ಟದ ವೈದ್ಯಕೀಯ ಸೇವೆಯನ್ನು ಒದಗಿಸಬೇಕೆಂದು ಆಗ್ರಹಿಸೋಣ.

# ಸ್ಥಳೀಯರಿಗೆ ಉದ್ಯೋಗ ಅವಕಾಶಕ್ಕೆ ಒತ್ತಾಯಿಸಿ ಸಚಿವ ನಿರಾಣಿಗೆ ಮನವಿ

ಹಟ್ಟಿ ಚಿನ್ನದ ಗಣಿಯಲ್ಲಿನ ಸ್ಥಳೀಯರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡಲು ಒತ್ತಾಯಿಸಿ, ಇಂದು ಹಟ್ಟಿ ಚಿನ್ನದ ಗಣಿಗೆ ಆಗಮಿಸಿದ್ದ ಗಣಿ ಮತ್ತು ಭೂವಿಜ್ಞಾನ ಸಚಿವ ಮುರುಗೇಶ ನಿರಾಣಿಯವರಿಗೆ ಎಸ್‌ಎಫ್‌ಐ - ಡಿವೈಎಫ್‌ಐ ಸಂಘಟನೆಗಳ ಮುಖಂಡರು ಜಂಟಿಯಾಗಿ ಮನವಿಯನ್ನು ಸಲ್ಲಿಸಿದರು.



ಸ್ಥಳಿಯ ಜನತೆಯ ಹಲವಾರು ಸಮಸ್ಯೆಗಳನ್ನು ಆಲಿಸಿ ಅವರ ಬೇಡಿಕೆಗಳನ್ನು ಈಡೇರಿಸುವಂತೆ ಮನವಿ ಸಲ್ಲಿಸುವಾಗ ಸಚಿವರು ಬೇಜವಾಬ್ದಾರಿತನ ತೋರಿದ್ದಾರೆ. ಮನವಿ ಸ್ವೀಕರಿಸಿ ಕನಿಷ್ಠ ಸೌಜನ್ಯವನ್ನು ತೋರದ ಸಚಿವ ನಿರಾಣಿ ಜೊತೆ ಖಆಖ ಮುಖಂಡರು ಕೆಲ ಕಾಲ ವಾಗ್ವಾದ ನಡೆಸಿದರು.

ಹಟ್ಟಿ ಚಿನ್ನದ ಗಣಿಯಲ್ಲಿ ಸ್ಥಳೀಯರಿಗೆ ಉದ್ಯೋಗ ನೀಡಬೇಕು, ಈ ಭಾಗದ ಜನರಿಗೆ ಉಚಿತ ಆರೋಗ್ಯ ತಪಾಸಣೆ ಮಾಡಬೇಕು ಹಾಗೂ ವ್ಯವಸ್ಥಿತವಾದ ಮಲ್ಟಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಿಸಬೇಕು, ಜಿಲ್ಲೆಯಲ್ಲಿ ಖನಿಜ ಅಧ್ಯಯನ ಕಾಲೇಜು ಸ್ಥಾಪಿಸಬೇಕು, ಜಿಲ್ಲೆಯಲ್ಲಿ ನಡೆಯುವ ಅಕ್ರಮ ಕಲ್ಲು ಗಣಿಗಾರಿಕೆಯನ್ನು ನಿಯಂತ್ರಿಸಬೇಕು, ಖಾಸಗಿ ನಿಯಂತ್ರಣದಲ್ಲಿರುವ ಗಣಿಗಾರಿಕೆಯನ್ನು ನಿಯಂತ್ರಿಸಿ ಪೂರ್ಣ ಖನಿಜ ಸಂಪತ್ತು ಸಾರ್ವಜನಿಕ ಒಡೆತನದಲ್ಲಿರುವಂತೆ ಕ್ರಮ ತೆಗೆದುಕೊಳ್ಳಬೇಕು ಎಂಬುದು ಸೇರಿದಂತೆ ಹಲವು ಪ್ರಮುಖ ಬೇಡಿಕೆಗಳನ್ನು ಈಡೇರಿಸುವಂತೆ ಗಣಿ ಮತ್ತು ಭೂವಿಜ್ಞಾನ ಸಚಿವ ಮುರುಗೇಶ ನಿರಾಣಿಯವರಿಗೆ SFI-DYFI ಮುಖಂಡರು ಆಗ್ರಹಿಸಿದರು.



# ಪೆಟ್ರೋಲ್, ಡೀಸೆಲ್, ಗ್ಯಾಸ್ ಮತ್ತು ಆಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ

ಪೆಟ್ರೋಲ್, ಡೀಸೆಲ್, ಗ್ಯಾಸ್ ಮತ್ತು ಆಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಹಾಗೂ ಕೇಂದ್ರ ಸರ್ಕಾರದ ಜನ ವಿರೋಧಿ ನೀತಿಗಳನ್ನು ಕೈ ಬಿಡಲು ಆಗ್ರಹಿಸಿ ಇಂದು ರಾಯಚೂರಿನ ಜಿಲ್ಲಾಧಿಕಾರಿ ಕಛೇರಿಯ ಮುಂದೆ ಅಕಾಖ ಪಕ್ಷದ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಕಾರ್ಯಕರ್ತರು ಪ್ರತಿಭಟನೆ ನಡೆಸಿ ಪ್ರತಿಭಟನೆಯ ಸಮಯದಲ್ಲಿ ಮೋದಿ ಮತ್ತು ಅಮಿತ್ ಷಾ ರ ಪ್ರತಿಕೃತಿ ದಹನ ಮಾಡಲು ಮುಂದಾದಾಗ ಪೋಲಿಸರು ಪ್ರತಿಕೃತಿ ದಹನ ಮಾಡದಂತೆ ತಡೆಯಲು ಯತ್ನಿಸಿದರು ಈ ಸಂದರ್ಭದಲ್ಲಿ ಹೋರಾಟಗಾರರು ಮತ್ತು ಪೋಲಿಸರ ಮದ್ಯೆ ರಸ್ತೆಯಲ್ಲೆ ಕೆಲ ಹೊತ್ತು ತೀವ್ರ ಘರ್ಷಣೆ ನಡೆಯಿತು ನಂತರ ಪಟ್ಟು ಬಿಡದ ಹೋರಾಟಗಾರರು ಪೋಲಿಸರ ಕಣ್ಣು ತಪ್ಪಿಸಿ ಅಮೀತ್ ಷಾ ಮತ್ತು ಮೋದಿಯವರ ಪ್ರತಿಕೃತಿ ಸುಟ್ಟ ಪ್ರತಿಭಟಿಸಿದರು.

ನಂತರ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿ, ಜಿಲ್ಲಾಧಿಕಾರಿಗಳ ಸ್ಥಾನಿಕ ಅಧಿಕಾರಿಗಳ ಮೂಲಕ ಪ್ರಧಾನಿಗೆ ಬರೆದ ಮನವಿಯನ್ನು ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಿಪಿಐ(ಎಂ) ಪಕ್ಷದ ಜಿಲ್ಲಾ ಕಾರ್ಯದರ್ಶಿ ಕೆ.ಜಿ ವಿರೇಶ, ಮುಖಂಡರಾದ ಕರಿಯಪ್ಪ ಅಚ್ಚೊಳ್ಳಿ ಎಚ್, ಪದ್ಮಾ, ಹಾಗೂ ಶಿವಕುಮಾರ ಮ್ಯಾಗಳಮನಿ, ಲಿಂಗರಾಜ ಕಂದಗಲ್, ಬಸವರಾಜ ದೀನಸಮುದ್ರ, ಜಿಲಾನಿ ಸೇರಿ ಇತರರಿದ್ದರು.




ಸಿಐಟಿಯು ನೇತೃತ್ವದಲ್ಲಿ ಕಾರ್ಮಿಕರ ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ

# "ಶಾಸಕರ ಕಚೇರಿ ಚಲೋ"

ಸಿಐಟಿಯು ರಾಜ್ಯ ಸಮಿತಿಯ ನೇತೃತ್ವದಲ್ಲಿ ಕಾರ್ಮಿಕರ ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಬಜೆಟ್ ಪೂರ್ವ ಮಾರ್ಚ್ 4 ರಂದು ಜರುಗುವ ಕಾರ್ಮಿಕರ "ವಿಧಾನ ಸೌಧ ಚಲೋ ಹೋರಾಟ" ಕಾರ್ಯಕ್ರಮದ ಅಂಗವಾಗಿ ಇಂದು ಬೈಂದೂರು ತಾಲೂಕು ಸಿಐಟಿಯು ನೇತೃತ್ವದಲ್ಲಿ ಕಾರ್ಮಿಕರ ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ, ಕಾರ್ಮಿಕರ ಬೃಹತ್ ಮೆರವಣಿಗೆಯ ಮೂಲಕ "ಬೈಂದೂರು ಶಾಸಕರ ಕಚೇರಿ ಚಲೋ" ಹೋರಾಟ ಕಾರ್ಯಕ್ರಮ ಜರುಗಿತು. ಬೈಂದೂರು ಸಿಐಟಿಯು ಕಚೇರಿಯಿಂದ ಕಾರ್ಮಿಕರ ಪಾದಯಾತ್ರೆಯನ್ನು ಉದ್ಘಾಟಿಸಿದ ಸಿಐಟಿಯು ಉಡುಪಿ ಜಿಲ್ಲಾ ಕಾರ್ಯದರ್ಶಿ ಸುರೇಶ್ ಕಲ್ಲಾಗರ್ ಮಾತನಾಡುತ್ತಾ, ಮಾರ್ಚ್ 4 ರಂದು ಎಲ್ಲಾ ವಿಭಾಗದ ಕಾರ್ಮಿಕರು "ಬಜೆಟ್ ಅಧಿವೇಶನ ಚಲೋ" ನಡೆಸಿ ರಾಜ್ಯದ ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಿ, ಈ ವರ್ಷದ ಬಜೆಟ್ ಅನುದಾನದ ಮೂಲಕ ಹಲವು ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಲಾಗುತ್ತದೆ ಎಂದು ಹೇಳಿದರು. ಬೈಂದೂರು ತಾಲೂಕು ಕೇಂದ್ರಕ್ಕೆ ಮಿನಿ ವಿಧಾನ ಸೌಧ, ಕಾರ್ಮಿಕ ನಿರೀಕ್ಷಕರ ಕಚೇರಿ, ಬೈಂದೂರು ತಾಲೂಕಿನಾದ್ಯಂತ ನದಿಗಳಲ್ಲಿ ಮರಳು ತೆಗೆಯಲು ಪರವಾನಿಗೆ, ಸರಕಾರದ ಎಲ್ಲಾ 24 ಇಲಾಖೆಗಳನ್ನು ತೆರೆಯಬೇಕು, ಬೈಂದೂರು ಸಮುದಾಯ ಆರೋಗ್ಯ ಕೇಂದ್ರ ಮೇಲ್ದರ್ಜೆಗೆ ಏರಿಸುವುದು, ಸ್ಕೀಮ್ ನೌಕರರಾದ ಅಕ್ಷರ ದಾಸೋಹ, ಅಂಗನವಾಡಿ, ಆಶಾ, ಪಂಚಾಯತ್ ನೌಕರರರಿಗೆ ವೇತನ ಹೆಚ್ಚಳ, ಕಟ್ಟಡ ಕಾರ್ಮಿಕರಿಗೆ ಕೊರೊನಾ ಪರಿಹಾರ, ಮದುವೆ, ಪಿಂಚಣಿ, ಮರಣ ಪರಿಹಾರಕ್ಕೆ ಅರ್ಜಿ ಹಾಕುವ ಕಾಲ ಮಿತಿ ರದ್ದತಿಗೆ, ಮನೆ ಕಟ್ಟಲು ರೂಪಾಯಿ 3 ಲಕ್ಷ ಸಹಾಯಧನ ಕೊಡಬೇಕು, ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ತ್ವರಿತವಾಗಿ ಸಂಪೂರ್ಣಗೊಳಿಸಬೇಕು ಇತ್ಯಾದಿ ಸ್ಥಳೀಯ ಬೇಡಿಕೆ ಸಹಿತ ರಾಜ್ಯ ಮಟ್ಟದ 30 ಬೇಡಿಕೆಗಳನ್ನೊಳಗೊಂಡ ಮನವಿ ಪತ್ರವನ್ನು ಶಾಸಕರ ಅನುಪಸ್ಥಿತಿಯಲ್ಲಿ, ಉಪಸ್ಥಿತರಿದ್ದ ಶಾಸಕರ ಆಪ್ತ ಸಹಾಯಕ ಮಹಿಮ್ ಶೆಟ್ಟಿಯವರಿಗೆ ಹಸ್ತಾಂತರಿಸಲಾಯಿತು. ಈ ಸಂದರ್ಭದಲ್ಲಿ ಕಾರ್ಮಿಕ ಮುಖಂಡರಾದ ರೊನಾಲ್ಡ್ ರಾಜೇಶ್ ಕ್ವಾಡ್ರಸ್, ಗಣೇಶ್ ತೊಂಡೆಮಕ್ಕಿ, ಉದಯ ಗಾಣಿಗ ಮೊಗೇರಿ, ರಾಜೀವ ಪಡುಕೋಣೆ, ವಿಜಯ ಕೊಯಾನಗರ, ಅಮ್ಮಯ್ಯ ಪೂಜಾರಿ ಬಿಜೂರು, ಸಿಂಗಾರಿ ನಾವುಂದ, ಜಯಶ್ರೀ ಪಡುವರಿ, ರಾಮ ಕಂಭದಕೋಣೆ, ಮಂಜು ಪಡುವರಿ, ರಾಜು ದೇವಾಡಿಗ ಅರೆಹೊಳೆ, ನಾಗರತ್ನ ನಾಡ, ಮೊದಲಾದವರಿದ್ದರು, ವೆಂಕಟೇಶ್ ಕೋಣಿ ಕಾರ್ಯಕ್ರಮ ನಿರೂಪಿಸಿದರು.

ಉಡುಪಿ ತಾಲೂಕು ಸಮಿತಿಯು 26 ರ ಸಂಜೆ 4.00 ಗಂಟೆಗೆ ಉಡುಪಿಯ ಶಾಸಕರಾದ ರಘುಪತಿ ಭಟ್ ರವರ ಕಛೇರಿಗೆ ಪಾದಯಾತ್ರೆ ಮೂಲಕ ಹೋಗಿ ಶಾಸಕರ ಆಪ್ತ ಕಾರ್ಯದರ್ಶಿ ಮೂಲಕ ಮನವಿ ಸಲ್ಲಿಸಲಾಯಿತು ಸಿಐಟಿಯು ರಾಜ್ಯ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ, ಸಿಐಟಿಯು ಉಡುಪಿ ತಾಲೂಕು ಅಧ್ಯಕ್ಷರಾದ ರಾಮಕರ್ಕಾಡ, ಪ್ರಧಾನ ಕಾರ್ಯದರ್ಶಿ ಕವಿರಾಜ್ ಎಸ್, ಅಂಗನವಾಡಿ ಜಿಲ್ಲಾ ಅಧ್ಯಕ್ಷರಾದ ಭಾರತಿ, ಕಾರ್ಯದರ್ಶಿ ಸುಶೀಲಾ ನಾಡ, ಬಿಸಿಯೂಟ ನೌಕರರ ಸಂಘ ದ ಕಾರ್ಯ ದರ್ಶಿ ಸುನಂದಾ, ಉಡುಪಿ ಜಿಲ್ಲಾ ಕಟ್ಟಡ ಸಂಘ ಅಧ್ಯಕ್ಷರಾದ ಶೇಖರ್ ಬಂಗೇರ, ದಯಾನಂದ, ಮೀನುಗಾರರ ಸಂಘದ ಕಾರ್ಯದರ್ಶಿ ಮಹೇಶ್ ಪೂಜಾರಿ, ಬೀಡಿ ಸಂಘದ ಅಧ್ಯಕ್ಷರಾದ ನಳಿನಿ, ಮೊಹನ್, ವಿದ್ಯಾರಾಜ್, ಗಣೇಶ ನಾಯ್ಕ, ಉಪಸ್ಥಿತರಿದ್ದರು.

ನಾಗಮಂಗಲ ವಿಧಾನ ಸಭಾ ಕ್ಷೇತ್ರದ ಶಾಸಕರಾದ ಸುರೇಶ್ ಗೌಡರವರಿಗೆ ಸಿಐಟಿಯು ನಾಗಮಂಗಲ ತಾಲ್ಲೂಕು ಸಮಿತಿ ವತಿಯಿಂದ ಕಾರ್ಮಿಕರ ಹಕ್ಕೊತ್ತಾಯದ ಮನವಿ ಹಾಗು ಅಂಗನವಾಡಿ ನೌಕರರ ಬೇಡಿಕೆಪಟ್ಟಿಯನ್ನು ಸಲ್ಲಿಸಲಾಯಿತು. ಸಿ. ಕುಮಾರಿ ಪ್ರಧಾನ ಕಾರ್ಯದರ್ಶಿ ಸಿಐಟಿಯು ಮಂಡ್ಯ ಜಿಲ್ಲಾ ಸಮಿತಿ, ಜಯಲಕ್ಷ್ಮಮ್ಮ ಸಂಚಾಲಕರು ಸಿಐಟಿಯು ನಾಗಮಂಗಲ ತಾಲ್ಲೂಕು ಸಮಿತಿ. ಮುಖಂಡರಾದ ಲತಾ, ಕಮಲ, ಜಯಲಕ್ಷ್ಮಮ್ಮ ಇತರರಿದ್ದರು.






# ಅಕ್ರಮ ಕಲ್ಲು ಗಣಿಗಾರಿಕೆಗೆ ಕಡಿವಾಣ ಯಾವಾಗ? ಕಲ್ಲು ಕ್ವಾರಿಯ ಕರಾಳತೆ ಹೇಗಿದೆ?


**ಶಿವಮೊಗ್ಗ ಹಾಗೂ ಚಿಕ್ಕಬಳ್ಳಾಪುರದಲ್ಲಿ ಸಂಭವಿಸಿದ ಜಿಲೆಟಿನ್ ಸ್ಫೋಟ ರಾಜ್ಯದಲ್ಲಿನ ಅಕ್ರಮ ಕಲ್ಲು ಗಣಿಗಾರಿಕೆಯ ಕರಾಳತೆಯನ್ನು ಬಿಚ್ಚಿಟ್ಟಿದೆ. ಕಲ್ಲುಗಣಿಗಾರಿಕೆಯಿಂದ ಏನೆಲ್ಲ ಹಾನಿಯಾಗ್ತಾ ಇದೆ? ಪ್ರಾಣಹಾನಿ ಸಂಭವಿಸುತ್ತಿದ್ದರು ಸರಕಾರ ಯಾಕೆ ಅಕ್ರಮ ಕಲ್ಲು ಗಣಿಗಾರಿಕೆಗೆ ಬ್ರೇಕ್ ಹಾಕುತ್ತಿಲ್ಲ?**

ಚಿಕ್ಕಬಳ್ಳಾಪುರ ತಾಲೂಕಿನ ಹಿರೇನಾಗವೇಲಿಯಲ್ಲಿ ಮಂಗಳವಾರ ಮಧ್ಯರಾತ್ರಿ ಜಿಲೆಟಿನ್ ಕಡ್ಡಿಗಳು ಸ್ಫೋಟಗೊಂಡು 6 ಮಂದಿ ದಾರುಣವಾಗಿ ಮೃತಪಟ್ಟಿರುವ ಘಟನೆಯನ್ನು ಖಂಡಿಸಿ ಚಿಕ್ಕಬಳ್ಳಾಪುರದಲ್ಲಿ ಜನಪರ ಸಂಘಟನೆಗಳಿಂದ ಪ್ರತಿಭಟನೆ ನಡೆಸಲಾಯಿತು.

ಜಿಲೆಟಿನ್ ಸ್ಫೋಟ ಪ್ರಕರಣಕ್ಕೆ ಸಂಬಂಧಪಟ್ಟಂತೆ ಇದೀಗ ಇಬ್ಬರು ಮಾಲೀಖರು ಸೇರಿದಂತೆ ಒಟ್ಟು ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ. ಮತ್ತೊಬ್ಬ ಮಾಲೀಕ ಹಾಗೂ ಪ್ರಮುಖ ಆರೋಪಿ ನಾಗರಾಜ್ ತಲೆ ಮರೆಸಿಕೊಂಡಿದ್ದಾನೆ. ಇತರೆ ಆರೋಪಿಗಳಾದ ರಾಘವೇಂದ್ರ ರೆಡ್ಡಿ, ಪ್ರವೀಣ್, ರಿಯಾಜ್, ಮಧುಸೂದನ್ ರೆಡ್ಡಿ ಬಂಧಿತ ಆರೋಪಿಗಳು. ಆರೋಪಿಗಳನ್ನು ಆಂಧ್ರಪ್ರದೇಶದಲ್ಲಿ ಬಂಧಿಸಲಾಗಿದೆ. ಶ್ರೀ ಶಿರಡಿ ಸಾಯಿ ಎಜೆನ್ಸೀಜ್ ಎನ್ನುವ ಕಲ್ಲು ಕ್ವಾರಿಯು ಅನುಮತಿಯನ್ನು ಪಡೆಯದೆ ಅಕ್ರಮವಾಗಿ ಕಾರ್ಯವನ್ನು ನಿರ್ವಹಿಸುತ್ತಿತ್ತು. ಸರಕಾರ ಹಾಗೂ ಅಧಿಕಾರಿಗಳ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ ಎಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರ ಸಂಘಟನೆಯ ರಾಜ್ಯ ಉಪಾಧ್ಯಕ್ಷರಾದ ಎಂ.ಪಿ ಮುನಿವೆಂಕಟಪ್ಪ ಆಗ್ರಹಿಸಿದ್ದಾರೆ.

ಹಳ್ಳಿಗಳ ಬೆಟ್ಟಗುಡ್ಡಗಳನ್ನೆಲ್ಲ ನುಂಗಿ ಹಾಕುತ್ತಿರುವ ಕಲ್ಲು ಗಣಿಗಾರಿಕೆಯ ಬೇರು ರಾಜ್ಯಾದ್ಯಂತ ವ್ಯಾಪಿಸಿದ್ದು, ಕಳೆದ ನಾಲ್ಕು ವರ್ಷಗಳ ಅವಧಿಯಲ್ಲಿ 2 ಸಾವಿರಕ್ಕೂ ಅಧಿಕ ಅಕ್ರಮ ಗಣಿಗಾರಿಕೆ ಕ್ವಾರಿಗಳು ಪತ್ತೆಯಾಗಿವೆ! ಗಣಿ ಮತ್ತು ಭೂ ವಿಜ್ಞಾನ ಇಲಾಖೆ ನೀಡಿರುವ ಅಂಕಿ–ಅಂಶದ ಪ್ರಕಾರ, 2017–18 ರಲ್ಲಿ ರಾಜ್ಯದಲ್ಲಿ 404 ಅಕ್ರಮ ಕಲ್ಲು ಗಣಿಗಾರಿಕೆ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿತ್ತು. 2019 ರಿಂದ 2021 ರ ನಡುವೆ ಸುಮಾರು 1783 ಅಕ್ರಮ ಕಲ್ಲು ಗಣಿಗಾರಿಕೆ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ. ಅಂದರೆ ರಾಜ್ಯದಲ್ಲಿ 2187 ಅಕ್ರಮ ಕಲ್ಲುಗಣಿಗಾರಿಕೆಗಳು ಇವೆ ಎಂದು ಇಲಾಖೆಯ ದಾಖಲೆಗಳು ಹೇಳುತ್ತಿವೆ.

| ವರ್ಷ | ಅಕ್ರಮ ಕಲ್ಲು ಗಣಿಗಾರಿಕೆ ಪತ್ತೆ | ಮೊಕದ್ದಮೆ | ದಂಡ |
|---|---|---|---|
| 2017 – 18 | | 114 | 6.13 ಕೋಟಿ ರೂ |
| 2018-19 | 413 | 108 | 12.13 ಕೋಟಿ ರೂ |
| 2019-20 | 266 | 117 | 9.08 ಕೋಟಿ ರೂ. |



ಅಕ್ರಮ ಕಲ್ಲು ಕ್ವಾರಿಗಳಿಗೆ ಅಂಕುಶ ಹಾಕುವಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳು ವಿಫಲರಾಗಿದ್ದಾರೆ ಎಂಬ ವಾಸ್ತವಾಂಶವನ್ನು 2019ರ ಸಿಎಜಿ ವರದಿ ಬೊಟ್ಟು ಮಾಡಿ ತೋರಿಸಿತ್ತು. 2018 ರಲ್ಲಿ ಗಣಿ ಮತ್ತು ಭೂ ವಿಜ್ಞಾನ ಹಾಗೂ ಐಐಎಸ್ಸಿ (IISC) ಜಂಟಿ ಸಮೀಕ್ಷೆ ಸಮೀಕ್ಷೆಯನ್ನು ನಡೆಸಿ ಸ್ಯಾಟಲೈಟ್ ಚಿತ್ರಗಳ ಮೂಲಕ ಅಕ್ರಮ ಕಲ್ಲು ಗಣಿಗಾರಿಕೆಯನ್ನು ಪತ್ತೆ ಮಾಡಿದ್ದರು. ಅವರ ವರದಿಯ ಪ್ರಕಾರವೂ 2000 ಕ್ಕೂ ಅಕ್ರಮ ಕಲ್ಲು ಕ್ವಾರಿಗಳಿರುವುದು ಸಾಬೀತಾಗಿದೆ. ಹಾಗಾದ್ರೆ ಅನುಮತಿ ಪಡೆದಿರುವ ಕಲ್ಲು ಕ್ವಾರಿಗಳು ಎಷ್ಟು ಎನ್ನುವ ಪ್ರಶ್ನೆ ಸಹಜವಾಗಿ ಮೂಡುತ್ತೆ? ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಮಾಹಿತಿಯಂತೆ ರಾಜ್ಯದಲ್ಲಿ ಇಲ್ಲಿವರೆಗೆ 450 ಅಲಂಕರಿತ ಕಲ್ಲು ಕ್ವಾರಿಗಳು (ಟೈಲ್ಸ್ ಕಲ್ಲು) ಹಾಗೂ 300 ಸಾಮಾನ್ಯ ಕಲ್ಲು ಕ್ವಾರಿಗಳಿಗೆ ಅನುಮತಿ ನೀಡಲಾಗಿದೆ.

ಅನುಮತಿ ಪಡೆದ ಕಲ್ಲು ಗಣಿ ಗುತ್ತಿಗೆದಾರರು ತಮಗೆ ಮಂಜೂರಾದ ಗುತ್ತಿಗೆ ಪ್ರದೇಶದ ವ್ಯಾಪ್ತಿ ಮೀರಿ ಗಣಿಗಾರಿಕೆ, ಹೊರಗಡೆ ಅಥವಾ ಗುತ್ತಿಗೆ ಅವಧಿ ಮುಗಿದರೂ ಗಣಿಗಾರಿಕೆ ಮಾಡುತ್ತಿರುವುದು ಸಿಎಜಿ ವರದಿ ಮೂಲಕ ಬೆಳಕಿಗೆ ಬಂದಿದೆ. ಸಿಎಜಿ ವರದಿಯಲ್ಲಿನ ಒಂದು ಅಂಕಿಅಂಶವನ್ನು ಗಮನಿಸುವುದಾದರೆ, ಅಂದ್ರೆ ಅಕ್ರಮ ಗಣಿಗಾರಿಕೆ ಎಲ್ಲಿ ಹೆಚ್ಚೆಚ್ಚು ನಡೀತಾ ಇದೆ, ಎನ್ನುವ ಅಂಶವನ್ನು ಸಿಎಜಿ ವರದಿಯಲ್ಲಿ ಬಯಲು ಮಾಡಲಾಗಿದೆ. ದಕ್ಷಿಣ ಕನ್ನಡ, ವಿಜಯಪುರ, ಬೆಳಗಾವಿ, ಬೆಂಗಳೂರು ಗ್ರಾಮಾಂತರ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಇಂಥ ಪ್ರಕರಣಗಳು ಪತ್ತೆಯಾಗಿವೆ. ರಾಜ್ಯದಲ್ಲಿ ಸುಮಾರು 957 ಕೋಟಿ 16 ಲಕ್ಷದ 93 ಸಾವಿರ ಟನ್ ಗ್ರಾನೈಟ್ ಕಲ್ಲು ಖನಿಜ ಇದ್ದು, ಇದರ ವ್ಯಾಪ್ತಿ ಪ್ರದೇಶ ಎಷ್ಟಿದೆ ಅಂದರೆ ಸುಮಾರು 4,200 ಸ್ಕ್ವೇರ್ ಕಿಲೋ ಮೀಟರ್ ನಷ್ಟು ಇದೆ.

ಈ ಅಕ್ರಮ ಕಲ್ಲು ಗಾಣಿಗಾರಿಕೆಯನ್ನು ತಡೆ ಹಿಡಿಯದಿರುವುದಕ್ಕೆ ಕಾರಣವಿದೆ. ಆ ಕಾರಣ ಏನು ಅಂದ್ರೆ, ಅಧಿಕಾರಿಗಳು, ಕಲ್ಲು ಕ್ವಾರಿ ಮಾಲೀಕರು, ಸ್ಫೋಟಕ ಸಾಗಾಟಗಾರರ ನಡುವೆ ಒಂದು ನಂಟಿದೆ. ಈ ನಂಟಿನಿಂದಾಗಿಯೇ ಈ ಅಕ್ರಮ ಗಣಿಗಾರಿಕೆ ಹೆಚ್ಚಾಗುತ್ತಿವೆ ಎಂದು ತಜ್ಞರು ಹೇಳುತ್ತಿದ್ದಾರೆ. ಗಣಿ ಭೂ ವಿಜ್ಞಾನ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ಇರುವ ಕಾರಣ ಈ ಅಕ್ರಮ ಗಣಿಗಾರಿಕೆಗೆ ಲಾಭವಾಗಿದೆ. ಸಿಬ್ಬಂದಿ ಕೊರತೆ ಹಿನ್ನೆಲೆ ಇರುವ ಕಲ್ಲು ಕ್ವಾರಿ, ಗಣಿಗಾರಿಕೆ ಪ್ರದೇಶಗಳಿಗೆ ನಿರಂತರ ತಪಾಸಣೆ ನಡೆಸಲು ಸಾಧ್ಯವಾಗುತ್ತಿಲ್ಲ. ತಪ್ಪಿತಸ್ಥರಿಂದ ಒಂದಷ್ಟು ದಂಡ ವಸೂಲಿ ಬಿಟ್ಟರೆ ಬೇರೆ ಕಾನೂನು ಕ್ರಮ ತೆಗೆದುಕೊಳ್ಳಲು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಪ್ರಬಲ ಕಾನೂನಿನ ಅಸ್ತ್ರ ಇಲ್ಲ ಹಾಗಾಗಿ ಈ ಅಕ್ರಮ ಕಲ್ಲು ಕ್ವಾರಿಗೆ ತಡೆಯನ್ನು ಹಾಕಲಾಗುತ್ತಿಲ್ಲ.

ಅಕ್ರಮ ಕಲ್ಲು ಕ್ವಾರಿಗೆ ಸಂಬಂಧ ಪಟ್ಟಂತೆ 2017 – 18 ರಲ್ಲಿ 114 ಮೊಕದ್ದಮೆಗಳನ್ನು ➜

# ಕೃಷಿ ಕಾರ್ಮಿಕರಿಗೂ ಕಲ್ಯಾಣ ನಿಧಿಯನ್ನು ಸ್ಥಾಪನೆ ಮಾಡುವ ನಿರ್ಧಾರವನ್ನು ಬಜೆಟ್‌ನಲ್ಲಿ ಘೋಷಿಸಲು ಆಗ್ರಹ

ಕೇರಳ, ತ್ರಿಪುರ, ತಮಿಳುನಾಡು ಮಾದರಿಯಲ್ಲಿ ಕೃಷಿಕೂಲಿಕಾರರ ಸಮಗ್ರ ಕಾನೂನನ್ನು ಅಂಗೀಕರಿಸಲು ಮತ್ತು ಕಟ್ಟಡ ಕಾರ್ಮಿಕರು, ಹಮಾಲಿ ಕಾರ್ಮಿಕರಿಗೆ ಇರುವಂತೆ ಕೃಷಿ ಕಾರ್ಮಿಕರಿಗೂ ಒಂದು ಕಲ್ಯಾಣ ನಿಧಿಯನ್ನು ಸ್ಥಾಪನೆ ಮಾಡುವ ನಿರ್ಧಾರವನ್ನು ಬಜೆಟ್‌ನಲ್ಲಿ ಘೋಷಿಸಲು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘವು 25 ಫೆಬ್ರವರಿ 2021 ರಂದು ಹುಮ್ನಾಬಾದ್, ಚಿಟ್ಟಗುಪ್ಪಿ, ಸವದತ್ತಿ, ಸಿರುಗುಪ್ಪ, ಕಲಬುರಗಿ, ಕೊಪ್ಪಳ, ಕಾರಟಗಿ, ಕನಕಗಿರಿ, ಗಂಗಾವತಿ, ಬಾಗೇಪಲ್ಲಿ, ಮುಂಡಗೋಡ, ಶಹಾಪುರ, ಸುರುಪುರ, ರಾಯಚೂರು, ಸಿಂಧನೂರು, ಕುಂದಾಪುರ, ಹರಪನಹಳ್ಳಿ, ಮಂಡ್ಯ ಸೇರಿದಂತೆ ರಾಜ್ಯಾದಾದ್ಯಂತ ಪ್ರತಿಭಟನೆ ನಡೆಸಿ ತಹಶಿಲ್ದಾರ್ ಮತ್ತು ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯಮಂತ್ರಿಗಳಿಗೆ ಮನವಿಯನ್ನು ಸಲ್ಲಿಸಿದೆ.

ಕಳೆದ ಕೆಲವು ವರ್ಷಗಳಿಂದ ನಿರಂತರವಾಗಿ ಬಜೆಟ್ ಪೂರ್ವದಲ್ಲಿ ರ್‍ಯಾಲಿ ನಡೆಸಿ ಸರ್ಕಾರಕ್ಕೆ ಮನವಿ ಸಲ್ಲಿಸುತ್ತಾ ಬಂದರು ರಾಜ್ಯದ ಒಟ್ಟು ಜನಸಂಖ್ಯೆಯ 20% ರಷ್ಟಿರುವ ಕೃಷಿ ಕೂಲಿಕಾರರು ಮತ್ತು ಗ್ರಾಮೀಣ ಕೆಲಸಗಾರರು ರಾಜ್ಯದ ಬಜೆಟ್‌ನಲ್ಲಿ ತಮ್ಮನ್ನು ಕಡೆಗಣಿಸಬಾರದೆಂದೂ ವಿನಂತಿಸುತ್ತಾ ಬಂದಿದ್ದಾರೆ. ಆದರೆ ಪ್ರತಿ ಸಲವೂ ಬಜೆಟ್ ಪೂರ್ವದಲ್ಲಿ ಸರ್ಕಾರ ನಡೆಸುವ ಸಮಾಲೋಚನಾ ಸಭೆಯಲ್ಲಿ ರಾಜ್ಯ ಕೃಷಿ ಕೂಲಿಕಾರರ ಸಂಘದ ಪ್ರತಿನಿಧಿಗಳನ್ನೂ ಆಹ್ವಾನಿಸದಿರುವುದು ಖಂಡನೀಯ.

ಕೃಷಿ ಕೂಲಿಕಾರರು ಆರ್ಥಿಕವಾಗಿಯೂ ಸಾಮಾಜಿಕವಾಗಿಯೂ ತುಳಿತಕ್ಕೆ ಒಳಪಟ್ಟವರು, ಕೃಷಿ ಬಿಕ್ಕಟ್ಟು ತೀವ್ರವಾಗುತ್ತಾ ಇದ್ದು ಇವರಿಗೆ ಹಳ್ಳಿಗಳಲ್ಲಿ ಮೊದಲಿನಂತೆ ಕೆಲಸ ಸಿಗುತ್ತಿಲ್ಲ. ಉದ್ಯೋಗ ಖಾತ್ರಿ ಯೋಜನೆಯೂ ಸರಿಯಾಗಿ ಜಾರಿಯಾಗುತ್ತಿಲ್ಲ, ಅಗತ್ಯ ವಸ್ತುಗಳ ಬೆಲೆ ಏರಿಕೆ ಇವರನ್ನು ತೀವ್ರವಾಗಿ ಕಾಡುತ್ತಿರುತ್ತದೆ. ಪ್ರಸಕ್ತ ಪಡಿತರ ವ್ಯವಸ್ಥೆ ಅವರ ನೆರವಿಗೆ ಬರುತ್ತಿಲ್ಲ. ಈ ಹಿನ್ನೆಲೆಯಲ್ಲಿ ನಗರಗಳತ್ತ ಅವರ ವಲಸೆ ಹೆಚ್ಚಾಗಿದೆ.



ಕೃಷಿ ಕೂಲಿಕಾರರಿಗೆ ಕಾಯಂ ಕೆಲಸದ ಭರವಸೆ ಇಲ್ಲ. ಖಚಿತ ಆದಾಯವಿಲ್ಲ. ವಾಸಕ್ಕೆ ಮನೆ, ಭವಿಷ್ಯ ನಿಧಿ, ಆರೋಗ್ಯ ಸೇವೆ, ನಿವೃತ್ತಿ ವೇತನ, ಮಕ್ಕಳಿಗೆ ಶಿಕ್ಷಣ ಮೊದಲಾದವುಗಳನ್ನು ಖಚಿತ ಪಡಿಸುವ ಯಾವ ಕಾನೂನು ಸಹ ಇದುವರೆಗೆ ಬಂದಿಲ್ಲ.

ಬೇರೆ ಕೆಲವು ರಾಜ್ಯಗಳಲ್ಲಿ ಇರುವಂತೆ ಕೃಷಿ ಕೂಲಿಕಾರರ ಸಮಗ್ರ ಕಲ್ಯಾಣ ಕಾಯ್ದೆ, ಅದಕ್ಕಾಗಿ ಒಂದು ಕಲ್ಯಾಣ ನಿಧಿ ಸ್ಥಾಪನೆಯನ್ನು ಈ ಸಲದ ಬಜೆಟ್‌ನಲ್ಲಿ ಘೋಷಿಸುವ ಮೂಲಕ ಒಂದು ಇತಿಹಾಸ ನಿರ್ಮಾಣ ಮಾಡಬೇಕು. ತೀರಾ ನಿರ್ಲಕ್ಷಕ್ಕೆ ಒಳಪಟ್ಟ ಕೃಷಿ ಕೂಲಿಕಾರರ ಕೆಲವು ಹಕ್ಕೊತ್ತಾಯಗಳನ್ನು ಈ ಸಲದ ಬಜೆಟ್‌ನಲ್ಲಿ ಪ್ರಸ್ತಾಪಿಸಲು ಸಾಧ್ಯವಾಗಬೇಕು.

**ಹಕ್ಕೊತ್ತಾಯಗಳು**

1. ಕೇರಳ, ತ್ರಿಪುರ, ತಮಿಳುನಾಡು ಮೊದಲಾದ ರಾಜ್ಯಗಳ ಮಾದರಿಯಲ್ಲಿ ರಾಜ್ಯದ ಕೃಷಿ ಕೂಲಿಕಾರರಿಗೆ ಮತ್ತು ಗ್ರಾಮೀಣ ಕೆಲಸಗಾರರಿಗೆ ಕನಿಷ್ಠ ವೇತನ, ತುಟ್ಟಿ ಭತ್ಯೆ ಅಲ್ಲದೆ ಭವಿಷ್ಯ ನಿಧಿ (ಫಿ.ಎಫ್.), ಇ.ಎಸ್.ಐ., ನಿವೃತ್ತಿ ವೇತನ ಮುಂತಾದ ಸಾಮಾಜಿಕ ಭದ್ರತೆಯ ಸೌಲಭ್ಯಗಳನ್ನು ಖಾತರಿಪಡಿಸುವ ಸಮಗ್ರ ಶಾಸನವೊಂದನ್ನು ರೂಪಿಸುವ ವಾಗ್ದಾನವನ್ನು 2021–22 ರ ಬಜೆಟ್‌ಬಲ್ಲಿ ಘೋಷಿಸಬೇಕು.
2. ಕಟ್ಟಡ ನಿರ್ಮಾಣ ಕಾರ್ಮಿಕರು, ಹಮಾಲಿ ಕಾರ್ಮಿಕರು, ಬೀಡಿ ಕಾರ್ಮಿಕರು ಮೊದಲಾದ ಅಸಂಘಟಿತ ಕಾರ್ಮಿಕ ವಿಭಾಗಗಳಿಗೆ ರೂಪಿಸಿರುವಂತೆ ಕೃಷಿ ಕೂಲಿಕಾರರಿಗಾಗಿ ಕಲ್ಯಾಣ ನಿಧಿಯೊಂದನ್ನು ಸ್ಥಾಪಿಸಿ ಕಲ್ಯಾಣ ಮಂಡಳಿಯ ಮೂಲಕ ಅದರ ನಿರ್ವಹಣೆ ಮಾಡುವುದಾಗಿ ಈ ಸಲದ ಬಜೆಟ್‌ನಲ್ಲಿ ಪ್ರಕಟಿಸಬೇಕು. ಅಲ್ಲಿಯ ವರೆಗೆ ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ನೀಡುವ ಸೌಲಭ್ಯಗಳನ್ನು ಕೃಷಿ ಕೂಲಿಕಾರರಿಗೂ ನೀಡಬೇಕು.
3. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಎಲ್ಲಾ ಗ್ರಾಮಗಳಿಗೆ ವಿಸ್ತರಿಸಿ ಭ್ರಷ್ಟಾಚಾರ ಮುಕ್ತವಾಗಿ ಕಟ್ಟುನಿಟ್ಟಾಗಿ ಅನುಷ್ಟಾನಗೊಳಿಸಬೇಕು. ಮಾಡಿದ ಕೆಲಸಕ್ಕೆ ವಾರಕ್ಕೊಮ್ಮೆ ತಪ್ಪದೆ ವೇತನ ನೀಡಬೇಕು. ನಮೂನೆ 6 ರಲ್ಲಿ ಕೆಲಸಕ್ಕಾಗಿ ಅರ್ಜಿಸಲ್ಲಿಸಿದ ತಕ್ಷಣ ಕೆಲಸ ಕೊಡಬೇಕು. ಕೆಲಸ ಕೊಡಲಾಗದ ದಿನಗಳಿಗೆ ತಪ್ಪದೆ ನಿರುದ್ಯೋಗ ಭತ್ಯೆ ನೀಡಬೇಕು. ವರ್ಷದಲ್ಲಿ 200 ದಿನ ಕೆಲಸ ಕೊಡಬೇಕು. ದಿನವೊಂದಕ್ಕೆ ರೂ. 600 ವೇತನ ನೀಡಬೇಕು. ಬಾಕಿ ವೇತನ ಪಾವತಿ ಮಾಡಬೇಕು. ಯೋಜನೆಯನ್ನು ಪಟ್ಟಣ ಪ್ರದೇಶಕ್ಕೂ ವಿಸ್ತರಿಸಬೇಕು.
4. ಎಲ್ಲಾ ವಸತಿರಹಿತ ಕೂಲಿಕಾರ ಕುಟುಂಬಗಳಿಗೆ ಮನೆನಿವೇಶನಗಳನ್ನು ಒದಗಿಸಲು ಅಗತ್ಯವಿರುವ ಭೂಮಿಯನ್ನು ಸ್ವಾಧಿನಪಡಿಸಿಕೊಳ್ಳಲು ಬಜೆಟ್‌ನಲ್ಲಿ ಗರಿಷ್ಠ ಪ್ರಮಾಣದ ಮೊತ್ತವನ್ನು ಮೀಸಲಿಡಬೇಕು, ಬಡವರು ಸರ್ಕಾರಿ ಜಾಗದಲ್ಲಿ ಕಟ್ಟಿದ ಮನೆಗಳನ್ನು ಸಕ್ರಮಗೊಳಿಸುವ ಪ್ರಕ್ರಿಯೆಯನ್ನು ತೀವ್ರಗೊಳಿಸಬೇಕು.
5. ಎಲ್ಲ ಕೃಷಿ ಕೂಲಿಕಾರರ ಕುಟುಂಬಗಳಿಗೆ ಯಾವುದೇ ಷರತ್ತು ವಿಧಿಸದೆ ಬಿಪಿಎಲ್ ರೇಷನ್ ಕಾರ್ಡ್ ವಿತರಿಸಬೇಕು. ಯೂನಿಟ್ ಪದ್ಧತಿಯನ್ನು ಕೈಬಿಟ್ಟು ಮೊದಲಿನಂತೆ ಕೆ.ಜಿ.ಗೆ. ಒಂದು ರೂ. ದರದಲ್ಲಿ ಕನಿಷ್ಠ 30 ಕೆಜಿ ಅಕ್ಕಿಯನ್ನು ವಿತರಿಸಬೇಕು. ಬೇಳೆ, ಎಣ್ಣೆ, ಸಕ್ಕರೆ ಮೊದಲಾದ ಅಗತ್ಯ ವಸ್ತುಗಳನ್ನು ಗರಿಷ್ಠ ರಿಯಾಯ್ತಿಯಲ್ಲಿ ಮಾರಾಟ ಮಾಡಬೇಕು. ಅಕ್ಕಿ ಜೊತೆಯಲ್ಲಿ ಜೋಳ, ರಾಗಿಯನ್ನು ವಿತರಿಸಬೇಕು. ಸೀಮೆ ಎಣ್ಣೆ ನೀಡಬೇಕು.
6. ಕೃಷಿ ಕೂಲಿಕಾರರಿಗೆ ಉಪಕಸುಬುಗಳನ್ನು ಕೈಗೊಳ್ಳಲು ಸಬ್ಸಿಡಿ ಸಹಿತದ ಸಾಲವನ್ನು ಶೇಕಡ 1 ರ ಬಡ್ಡಿದರದಲ್ಲಿ ಒದಗಿಸಬೇಕು.
7. ಕೃಷಿ ಕೂಲಿಕಾರರ ಮನೆಗಳಿಗೆ ಉಚಿತ ವಿದ್ಯುತ್ ಪೂರೈಕೆ ಮಾಡಬೇಕು.
8. 60 ವರ್ಷ ದಾಟಿದ ಎಲ್ಲ ಕೃಷಿ ಕೂಲಿಕಾರರಿಗೆ ರೂ. 1000 ದರದಲ್ಲಿ ಮಾಸಿಕ ನಿವೃತ್ತಿ ವೇತನ ನೀಡಬೇಕು.
9. ವಲಸೆ ಕಾರ್ಮಿಕರ ಕಾಯ್ದೆಯನ್ನು ಪರಿಷ್ಕರಿಸಿ ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ಅವರಿಗೆ ಅರೋಗ್ಯಕರ ಪರಿಸರದಲ್ಲಿ ವಾಸಕ್ಕೆ ಮನೆಗಳನ್ನು ಒದಗಿಸಬೇಕು. ಸೂಕ್ತ ರಕ್ಷಣೆ ಒದಗಿಸಬೇಕು.
10. ಬಡವರ ಬಗರ್ ಹುಕುಂ ಸಾಗುವಳಿ ಪ್ರಕರಣಗಳನ್ನು ಸಕ್ರಮಗೊಳಿಸುವ ಕ್ರಮವನ್ನು ವೇಗವಾಗಿ ಜಾರಿಗೊಳಿಸಬೇಕು. 5 ಎಕರೆ ಒಳಗಿನ ಭೂರಹಿತ ಬಗರ್ ಹುಕುಂ ಸಾಗುವಳಿದಾರರನ್ನು ಕಂದಾಯ ಅಥವ ಅರಣ್ಯ ಭೂಮಿಯಿಂದ ಒಕ್ಕಲೆಬ್ಬಿಸಬಾರದು.
11. ಕೃಷಿ ಮಾಡಲು ಬಯಸುವ ದಲಿತರಿಗೆ ಹಾಗೂ ದೇವದಾಸಿ ಮಹಿಳೆಯರಿಗೆ ತಲಾ 2 ಎಕರೆ ಕೃಷಿ ಭೂಮಿಯನ್ನು ನೀಡಬೇಕು. ಅವರ ಸ್ಮಶಾನಗಳಿಗೆ ಭೂಮಿಯನ್ನು ಒದಗಿಸಬೇಕು.
12. ಕೃಷಿ ಕೂಲಿಕಾರರಿಗೆ ಕೊರೊನಾ ಲಸಿಕೆಯನ್ನು ಹಾಗೂ ಅಗತ್ಯ ವೈದ್ಯಕೀಯ ಚಿಕಿತ್ಸೆಯನ್ನು ಉಚಿತವಾಗಿ ಒದಗಿಸಬೇಕು. ಕೊರೋನಾ ಹಾವಳಿಯಿಂದ ಬಡಕುಟುಂಬಗಳು ಚೇತರಿಸದೆ ಇರುವದರಿಂದ ಅವರ ಬ್ಯಾಂಕ್ ಖಾತೆಗಳಿಗೆ ಮುಂದಿನ 6 ತಿಂಗಳ ಕಾಲ ರೂ. 7500 ಆರ್ಥಿಕ ನೆರವು ಜಮಾ ಮಾಡಬೇಕು
13. ಸರ್ಕಾರಿ ವಿದ್ಯಾರ್ಥಿ ನಿಲಯಗಳಲ್ಲಿ ಮಕ್ಕಳಿಗೆ ಆರೋಗ್ಯ ರಕ್ಷಣೆ ಒದಗಿಸಬೇಕು. ಎಲ್ಲಾ ಕೂಲಿಕಾರ ಮಕ್ಕಳಿಗೆ ಪ್ರವೇಶ ಸಾಧ್ಯವಾಗುವಂತೆ ಹಾಸ್ಟೆಲುಗಳ ಸಂಖ್ಯೆಯನ್ನು ಗರಿಷ್ಠ ಪ್ರಮಾಣದಲ್ಲಿ ಹೆಚ್ಚಿಸಬೇಕು. ■

---

➘ ದಾಖಲಿಸಲಾಗಿತ್ತು. 6.13 ಕೋಟಿ ರೂ. ದಂಡವನ್ನು ವಸೂಲಿ ಮಾಡಲಾಗಿತ್ತು.

2018–19ರಲ್ಲಿ 413 ಅಕ್ರಮ ಕಲ್ಲು ಗಣಿಗಾರಿಕೆ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿತ್ತು. ಈ ಸಂಬಂಧ 108 ಮೊಕದ್ದಮೆಗಳನ್ನು ದಾಖಲಿಸಲಾಗಿತ್ತು. ಒಟ್ಟು 12.13 ಕೋಟಿ ರೂ. ದಂಡ ವಸೂಲಿ ಮಾಡಲಾಗಿತ್ತು. ಇನ್ನು 2019–20ರಲ್ಲಿ 266 ಅಕ್ರಮ ಕಲ್ಲು ಗಣಿಗಾರಿಕೆಯನ್ನು ಪತ್ತೆ ಹಚ್ಚಲಾಗಿತ್ತು. ಈ ಸಂಬಂಧ 117 ಮೊಕದ್ದಮೆಗಳನ್ನು ದಾಖಲಿಸಲಾಗಿತ್ತು. 9.08 ಕೋಟಿ ರೂ. ದಂಡ ವಸೂಲಿ ಮಾಡಲಾಗಿತ್ತು. ಜೊತೆಗೆ ರಾಜಕಾರಣಿಗಳ ಪ್ರಭಾವ ಬಳಸಿ ಅಕ್ರಮವಾಗಿ ಕಲ್ಲು ಗಣಿಗಾರಿಕೆ ನಡೆಸುತ್ತಿರುವುದು ಸಾಮಾನ್ಯವಾಗಿದೆ. ಹೀಗಾಗಿ ಅಕ್ರಮ ಕಲ್ಲು ಗಣಿಗಾರಿಕೆಗೆ ಅಂಕುಶ ಹಾಕುವವರು ಯಾರು ಎಂಬ ಪ್ರಶ್ನೆಗೆ ಸರಕಾರವೇ ಉತ್ತರ ನೀಡಬೇಕಿದೆ.

ಇನ್ನೂ ಕಲ್ಲುಕ್ವಾರಿಗೆ ಬಳಸುವ ಜಿಲೆಟಿನ್ ಸ್ಟಿಕ್ ಸಾಗಾಟ, ಬಳಕೆ ಹೇಗೆ? ಎಂಬುದರ ಬಗ್ಗೆ ತಿಳೀತಾ ಹೋಗೋಣ, ಕಲ್ಲು ಕ್ವಾರಿಯಲ್ಲಿ ಸ್ಫೋಟಕ್ಕಾಗಿ ಜಿಲೆಟಿನ್ ಸ್ಟಿಕ್‌ಗಳನ್ನು ಬಳಸಲಾಗುತ್ತದೆ. ಈ ಜಿಲೆಟಿನ್ ಬಳಕೆ ಮತ್ತು ಸಾಗಾಟಕ್ಕೆ ಪರವಾನಗಿ ಪಡೆಯುವುದು ಅಗತ್ಯವಾಗಿದೆ. ಖನಿಜ ಮತ್ತು ಗಣಿಗಾರಿಕೆ (ಸ್ಫೋಟಕ) ನಿಯಂತ್ರಣ ಕಾಯ್ದೆ 2012 ರಡಿ ನಿರ್ವಹಣಾ ಪರವಾನಗಿ ಪಡೆಯಬೇಕು. ಪರವಾನಗಿ ಒಂದು ವರ್ಷದ ಅವಧಿಗೆ ಮಾತ್ರ ಸೀಮಿತವಾಗಿರುತ್ತದೆ. ಪ್ರತಿ ವರ್ಷ ಪರವಾನಗಿ ನವೀಕರಣ ಮಾಡಬೇಕಾಗುತ್ತದೆ. ಸ್ಫೋಟಕಗಳ ಖರೀದಿ, ಸಂಗ್ರಹ ಮತ್ತು ಸಾಗಣಿಕೆಗೆ ಪ್ರತ್ಯೇಕವಾಗಿ ಪರವಾನಗಿ ಪಡೆಯಬೇಕು. ಈ ಎಲ್ಲದಕ್ಕೂ ಪರವಾನಗಿ ಪಡೆದಿದ್ದರೆ ಮಾತ್ರ ಸ್ಫೋಟಕಗಳನ್ನು ನಿರ್ವಹಣೆ ಮಾಡಬಹುದಾಗಿದೆ. ಕಲ್ಲು ಗಣಿಗಾರಿಕೆಯ ಪರವಾನಗಿಯನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ನಿರ್ದೇಶಕರು, ಜಂಟಿ ನಿರ್ದೇಶಕರು, ಹಿರಿಯ ಭೂ ವಿಜ್ಞಾನಿಗಳು ಮಾತ್ರ ನೀಡಬಹುದಾಗಿದೆ. ಇವರ ಅನುಮತಿಯನ್ನು ಪಡೆಯದೆ ನಡೆಯುವ ಕಲ್ಲು ಕ್ವಾರಿಗಳು ಕಾನೂನು ಬಾಹಿರವಾಗಿರುತ್ತವೆ.

ರಾಜ್ಯದಲ್ಲಿ ಸಂಭವಿಸಿದ ಕಲ್ಲು ಕ್ವಾರಿ ಅವಘಡಗಳ ಕಡೆ ಒಂದಿಷ್ಟು ಕಣ್ಣನ್ನು ಹಾಯಿಸೋಣ, ಶಿವಮೊಗ್ಗದಲ್ಲಿ ಜ. 21ರಂದು ನಡೆದ ಡೈನಮೈಟ್ ಸ್ಫೋಟ ರಾಜ್ಯದಲ್ಲಿ ಸಂಭವಿಸಿದ ಅತಿ ದೊಡ್ಡ ಕಲ್ಲು ಕ್ವಾರಿ ಅವಘಡವಾಗಿದೆ. ಸುಮಾರು 7 ಮಂದಿ ಸಾವನಪ್ಪಿದ್ದು, ಸ್ಫೋಟದ ವ್ಯಾಪ್ತಿ ಸುತ್ತಮುತ್ತಲಿನ ಹಳ್ಳಿ, ಜಿಲ್ಲೆಗಳನ್ನೂ ಆವರಿಸಿತ್ತು. ಇದಾದ ಬಳಿಕ ಈಗ ಚಿಕ್ಕಬಳ್ಳಾಪುರದಲ್ಲಿ ನಡೆದ ಜಿಲೆಟಿನ್ ಸ್ಫೋಟ ಮತ್ತೊಂದು ಅತಿ ದೊಡ್ಡ ಕ್ವಾರಿ ಅವಘಡವಾಗಿದೆ. ಈ ಅವಘಡದಲ್ಲಿ ಈವರೆಗೆ ಒಟ್ಟು 6 ಮಂದಿ ಸಾವನ್ನಪ್ಪಿದ್ದಾರೆ. ಉಳಿದಂತೆ ಕಳೆದ ಕೆಲ ವರ್ಷಗಳಿಂದ ರಾಜ್ಯದ ವಿವಿಧೆಡೆ ಕಲ್ಲು ಕ್ವಾರಿ ಅವಘಡಗಳು ನಡೆದಿರುವ ಪ್ರಕರಣಗಳು ವರದಿಯಾಗಿವೆ. ಆದರೆ, ಸಣ್ಣ ಪುಟ್ಟ ಗಾಯಗಳಾಗಿರುವುದು ವರದಿಯಾಗಿದ್ದು ಬಿಟ್ಟರೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಅವಘಡ ಸಂಭವಿಸಿರಲಿಲ್ಲ.

ರಾಜ್ಯದಲ್ಲಿ ಪ್ರಸ್ತುತ ಗುತ್ತಿಗೆ ಆಧಾರದ ಮೇಲೆ 2802 ಕಲ್ಲು ಗಣಿಗಾರಿಕೆಗಳು ಕಾರ್ಯ ನಿರ್ವಹಿಸುತ್ತಿವೆ. ರಾಜ್ಯ ಸರ್ಕಾರಕ್ಕೆ 1500 ಕೋಟಿ ರೂ. ವಾರ್ಷಿಕ ಆದಾಯ ಬರುತ್ತಿದೆ. 1 ಟನ್ ಕಲ್ಲಿಗೆ 650 ರೂ.ನಿಂದ 700 ರೂ.ವರೆಗೆ ದರ ನಿಗದಿ ಮಾಡಲಾಗಿದೆ. ಕಿ.ಮೀ ಆಧಾರದ ಮೇಲೆ ಸಾಗಾಣಿಕ ವೆಚ್ಚವನ್ನು ತೆಗೆದುಕೊಳ್ಳಲಾಗುತ್ತಿದೆ. 60 ರೂ. ರಾಜಧನ, 30 ರೂ. ಜಿಲ್ಲಾ ನಿರ್ವಹಣೆ ನಿಧಿ ಮತ್ತು ಇನ್ನಿತರ ಸೇರಿ ಪ್ರತಿ ಟನ್ ಕಲ್ಲಿಗೆ ಒಟ್ಟು 107 ರೂ. ಶುಲ್ಕವನ್ನು ಸರ್ಕಾರಕ್ಕೆ ಕಟ್ಟಲಾ ಗುತ್ತಿದೆ. ವಾರ್ಷಿಕ ಸಾವಿರಾರು ಮಿಲಿಯನ್ ಮೆಟ್ರಿಕ್ ಟನ್ ಕಲ್ಲು ತೆಗೆಯಲಾಗುತ್ತಿದೆ.

ಈ ಕಲ್ಲು ಕ್ವಾರಿಯಿಂದ ಏನೆಲ್ಲ ಹಾನಿಯಾಗುತ್ತೆ, ಪರಿಸರದ ಮೇಲೆ, ಮನುಷ್ಯನ ಮೇಲೆ ಅದು ಹೇಗೆ ಪರಿಣಾಮ ಬೀರುತ್ತೆ ಅನ್ನೋದನ್ನಾ ತಿಳಿತಾ ಹೋಗೋಣ?: ಪರಿಸರಕ್ಕೆ ಹಾನಿ ಉಂಟುಮಾಡುವ ಅಧಿಕೃತ ಮತ್ತು ಅನಧಿಕೃತ ಕಲ್ಲು ಗಣಿಕಾರಿಕೆಯನ್ನು ಸಂಪೂರ್ಣವಾಗಿ ರದ್ದು ಮಾಡಬೇಕೆಂದು ಪರಿಸರವಾದಿಗಳು, ರೈತರು ಸೇರಿ ನಾನಾ ಸಂಘಟನೆಗಳು ಈಗಾಗಲೇ ಸಾಕಷ್ಟು ಬಾರಿ ಹೋರಾಟ ನಡೆಸಿದ್ದರೂ ಸರ್ಕಾರ ಸುರಕ್ಷತಾ ಕ್ರಮಕೈಗೊಂಡಿಲ್ಲ. ಜಲ್ಲಿ, ಸೈಜುಗಲ್ಲು, ಬೋಲ್ಡರ್ಸ್, ದಿಂಡುಗಲ್ಲು, ಕಲ್ಲುಪುಡಿ, ಅಲಂಕಾರಿಕ ಶಿಲೆ ಮತ್ತು ಗ್ರಾನೈಟ್ ಗಣಿಗಾರಿಕೆಯಿಂದಾಗಿ ಪರಿಸರಕ್ಕೆ ಅಪಾರ ಹಾನಿಯಾಗುತ್ತದೆ. ಕ್ವಾರಿಗಳಿಂದ ಬರುವ ಧೂಳು ಹಾಗೂ ಸ್ಫೋಟಕ ವಸ್ತು ಬಳಕೆಯಿಂದ ಸ್ಥಳೀಯರಿಗೆ ತೊಂದರೆಯಾಗುತ್ತದೆ. ಆದ್ದರಿಂದ ರಾಜ್ಯದಲ್ಲಿ ಗಣಿಗಾರಿಕೆಯನ್ನು ಸಂಪೂರ್ಣ ನಿಲ್ಲಿಸಬೇಕೆಂಬುದು ಪರಿಸರವಾದಿಗಳ ಆಗ್ರಹವಾಗಿದೆ.

ಅಕ್ರಮ ಕಲ್ಲು ಗಣಿಗಾರಿಕೆಗೆ ಸ್ಥಳೀಯ ರಾಜಕಾರಣಿಗಳ ಕೃಪಾಕಟಾಕ್ಷವಿದೆ ಎಂಬ ಆರೋಪಗಳಿವೆ. ಚುನಾವಣೆ ಸಂದರ್ಭದಲ್ಲಿ ಸೋಲು–ಗೆಲುವಿನ ಲೆಕ್ಕಾಚಾರದಲ್ಲಿ ಗಣಿ ಮಾಲೀಕರ ಪಾತ್ರ ಪ್ರಮುಖವಾಗಿರುತ್ತದೆ. ಹೀಗಾಗಿ ಗಣಿಗಾರಿಕೆಗೆ ಅನುಮತಿ ಕೊಡಿಸುವುದರಲ್ಲಿ ಹಾಗೂ ಅಕ್ರಮ ಗಣಿಗಾರಿಕೆ ನಡೆಸುವುದರಲ್ಲಿ ಸ್ಥಳೀಯ ಮುಖಂಡರ ಕೈವಾಡವಿರುತ್ತದೆ ಎಂಬ ಆರೋಪಗಳು ಕೋಡಾ ಕೇಳಿ ಬರುತ್ತಿವೆ. ದುರ್ಘಟನೆ ನಡೆದಾಗ ಟ್ವೀಟ್, ಫೆಸ್ಬುಕ್, ಮೂಲಕ ಸರಕಾರ ಮತ್ತು ಅಧಿಕಾರಿಗಳು ಸಂತಾಪ ಸೂಚಿಸಿ, ಕ್ರಮವನ್ನು ಕೈಗೊಳ್ಳುವುದಾಗಿ ಹೇಳಿ ಸುಮ್ಮನಾಗುತ್ತಾರೆ. ದುರ್ಘಟನೆಯಲ್ಲಿ ಸಾವೀಗೀಡಾದ ಕುಟುಂಬಗಳಿಗೂ ಸರಿಯಾದ ಪರಿಹಾರವನ್ನು ಇನ್ನೂ ನೀಡುತ್ತಿಲ್ಲ. ಆ ಪರಿಹಾರವನ್ನು ಪಡೆಯುವುದಕ್ಕೆ ಕುಟುಂಬಗಳು ಇಲಾಖೆಯಿಂದ ಇಲಾಖೆಗೆ ಓಡಾಡುವ ಪರಿಸ್ಥಿತಿ ಇದೆ. ಎಲ್ಲದಕ್ಕಿಂತ ಮುಖ್ಯವಾಗಿ ಇಂತಹ ದುರ್ಘಟನೆಗಳು ನಡೆಯದಂತೆ ಸರಕಾರ ಎಚ್ಚರಿಕೆ ವಹಿಸಬೇಕಿದೆ. ಅಕ್ರಮ ಕಲ್ಲುಗಣಿಗಾರಿಕೆಗೆ ಬ್ರೆಕ್ ಹಾಕಲು ಮುಂದಾಗಬೇಕಿದೆ. ■

# ಕನ್ನಡ ಸಿನಿಮಾ ದುರ್ಗತಿಯೂ ನಾಯಕ ನಟರ ಭ್ರಮೆಯೂ



**ಬ್ರಾಹ್ಮಣ್ಯವನ್ನು, ಬ್ರಾಹ್ಮಣರ ಅಂಧಶ್ರದ್ಧೆಯನ್ನು, ಅಸ್ಪೃಶ್ಯತೆ ಮತ್ತು ಜಾತಿ ದೌರ್ಜನ್ಯವನ್ನು ಬಿಂಬಿಸುವ ಅನೇಕ ಚಿತ್ರಗಳಲ್ಲಿ ಅಸ್ಪೃಶ್ಯ ಸಮುದಾಯವನ್ನು ಅಪಮಾನಿಸುವ ದೃಶ್ಯಗಳು ಹೇರಳವಾಗಿವೆ. ಸಮಾಜಕ್ಕೆ ಒಂದು ಸತ್ ಸಂದೇಶ ನೀಡಲು ಬಾಯಿಂದ ಮಾತನಾಡಿದರೂ ಸಾಕಲ್ಲವೇ? ಆದರೆ ಪೊಗರು ನಾಯಕ ಕಾಲಿನಿಂದ ಮಾತನಾಡುತ್ತಾನೆ. ಈ ದೃಶ್ಯವನ್ನು ಹಿಂದೂ ಧರ್ಮಕ್ಕೆ ಅವಮಾನ ಮಾಡಿದಂತೆ ಎಂದು ಯೋಚಿಸುವ ಬದಲು, ಮಾನವ ಸಂವೇದನೆಯನ್ನು ಅವಮಾನಿಸಿದಂತೆ ಎಂದು ಯೋಚಿಸುವುದು ಪ್ರಬುದ್ಧತೆ. ಈ ಪ್ರಬುದ್ಧತೆ ಪಡೆಯಲು ಅಸ್ಪೃಶ್ಯ ಜಾತಿಗಳನ್ನು, ಅಲ್ಪಸಂಖ್ಯಾತ ಸಮುದಾಯವನ್ನು, ಮಹಿಳೆಯರನ್ನು, ಶೋಷಿತರನ್ನು ಇನ್ನೂ ಕ್ರೂರ ಮಾದರಿಯಲ್ಲಿ ಅವಮಾನಿಸಿರುವ ಚಿತ್ರಗಳ ಬಗ್ಗೆಯೂ ದನಿ ಎತ್ತಬೇಕಲ್ಲವೇ? ಇದೇ ಸಂದರ್ಭದಲ್ಲಿ ಜಗ್ಗೇಶ್ ಮತ್ತು ದರ್ಶನ್ ವಿವಾದವನ್ನೂ ಗಮನಿಸಬಹುದು. ಇಬ್ಬರು ನಟರ ನಡುವಿನ ಸಂಘರ್ಷ ನಾಡಿನ ಅಸ್ಮಿತೆಯೊಡನೆ ಸಮೀಕರಿಸಲ್ಪಡುವುದು ಅಪಾಯಕಾರಿಯಷ್ಟೇ ಅಲ್ಲ, ಅಸಹ್ಯಕರ ಬೆಳವಣಿಗೆ. ತಮ್ಮದೇ ಆದ ರಾಜಕೀಯ ಅಸ್ತಿತ್ವ ಮತ್ತು ಪರದೆಯ ಮೇಲಿನ ಇಮೇಜ್ ಕಾಪಾಡಿಕೊಳ್ಳಲು ಆಗಾಗ್ಗೆ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಈ ನಾಯಕ ನಟರಲ್ಲಿ ಸಮಷ್ಟಿ ಪ್ರಜ್ಞೆಯೇ ಇಲ್ಲ ಎನ್ನುವುದಕ್ಕೆ ಸಾಕ್ಷ್ಯಾಧಾರಗಳೇನೂ ಬೇಕಿಲ್ಲ.**

**ನಾ ದಿವಾಕರ**

ಸಿನಿಮಾ ರಂಗ ಎರಡು ನೆಲೆಗಳಲ್ಲಿ ಕೆಲಸ ಮಾಡುತ್ತದೆ. ಮೊದಲನೆಯದು ಶುದ್ಧ ಮನರಂಜನೆ, ಅಂದರೆ ಪ್ರೇಕ್ಷಕರನ್ನು ರಂಜಿಸುವ ಒಂದು ಮಾಧ್ಯಮವಾಗಿ, ಜನಸಾಮಾನ್ಯರು ಜೀವನದ ಜಂಜಾಟಗಳಿಂದ ಕೆಲ ಕಾಲ ಹೊರಬರಲು ರಜತ ಪರದೆ ನೆರವಾಗುತ್ತದೆ. ಶೇ 90ಕ್ಕೂ ಹೆಚ್ಚು ಸಿನಿಮಾಗಳು ಈ ವರ್ಗಕ್ಕೆ ಸೇರಿರುತ್ತವೆ. ಎರಡನೆಯ ನೆಲೆ ಎಂದರೆ ಸಮಾಜದ ಅಂಕು ಡೊಂಕುಗಳನ್ನು, ಓರೆಕೋರೆಗಳನ್ನು ಪರದೆಯ ಮೇಲೆ ಬಿತ್ತರಿಸುವ ಮೂಲಕ ಸಾಮಾಜಿಕ ಜಾಗೃತಿ ಮೂಡಿಸುವ ಕೆಲಸವನ್ನೂ ಸಿನಿಮಾ ಮಾಡಲು ಸಾಧ್ಯವಿದೆ. ಇದನ್ನು ಸಿನಿಮಾ ಪರಿಭಾಷೆಯಲ್ಲಿ ಕಲಾತ್ಮಕ ಅಥವಾ ಹೊಸ ಅಲೆಯ ಚಿತ್ರಗಳು ಎಂದು ಕರೆಯಲಾಗುತ್ತದೆ.

ಕಲಾತ್ಮಕ ಚಿತ್ರಗಳಿಗೂ ಸಹ ತನ್ನದೇ ಆದ ಇತಿಹಾಸವಿದೆ. ಕಮರ್ಷಿಯಲ್ ಎಂದು ಹೇಳಲಾಗುವ ಅನೇಕ ಚಲನ ಚಿತ್ರಗಳೂ ಸಹ ಸಾಮಾಜಿಕ ಸಂದೇಶವನ್ನು ಹೊತ್ತು ಬಂದು, ಜನಮಾನಸದಲ್ಲಿ ಶಾಶ್ವತವಾಗಿ ಉಳಿದಿರುವುದನ್ನು ಕಂಡಿದ್ದೇವೆ. ಭಾರತದಲ್ಲಿ ಸಿನಿಮಾ ಎಂದರೆ ವಿಸ್ತೃತ ನಾಟಕಗಳಂತೆಯೇ ಮೂಡಿಬರುತ್ತಿದ್ದುದು ಸಾಮಾನ್ಯವಾಗಿತ್ತು. ಮೂಕಿ ಸಿನಿಮಾ ಕಾಲದಿಂದಲೂ ಸಾಂಪ್ರದಾಯಿಕ ರಂಗಭೂಮಿಯ ಪ್ರಯೋಗಗಳನ್ನೇ ಸಿನಿಮಾ ಪರದೆಯ ಮೇಲೆ ಸಹ ಮಾಡುವ ಪ್ರಯತ್ನಗಳು ಯಶಸ್ವಿಯಾಗುತ್ತಿದ್ದವು. ಹಿಂದಿ ಚಿತ್ರರಂಗದ ಗುರುದತ್, ಬಸು ಭಟ್ಟಾಚಾರ್ಯ, ರಾಜಕಪೂರ್, ಹೃಷಿಕೇಷ್ ಮುಖರ್ಜಿ, ಶ್ಯಾಂ ಬೆನಗಲ್, ಬಂಗಾಲದ ಸತ್ಯಜಿತ್ ರೇ, ಮೃಣಾಲ್ ಸೆನ್, ಋತ್ವಿಕ್ ಘಟಕ್, ಮಲಯಾಳದ ಅಡೂರ್ ಗೋಪಾಲಕೃಷ್ಣನ್ ಹೀಗೆ ಹಲವು ನಿರ್ದೇಶಕರು ಚಲನಚಿತ್ರ ನಿರ್ಮಾಣಕ್ಕೆ ಹೊಸ ಸ್ಪರ್ಶ ನೀಡುವುದರಲ್ಲಿ ಯಶಸ್ವಿಯಾಗಿದ್ದರು.

ಕನ್ನಡದಲ್ಲಿ 1960ರ ದಶಕದವರೆಗೂ ಇಡೀ ಚಿತ್ರರಂಗವನ್ನು ಆವರಿಸಿಕೊಂಡಿದ್ದ ಪೌರಾಣಿಕ ಕಥನಗಳಿಂದ ಹೊರಬಂದು ಸಾಮಾಜಿಕ ಕಥಾವಸ್ತುವಿನ ಚಿತ್ರ ನಿರ್ಮಾಣ ಆರಂಭವಾದದ್ದು 1970ರ ಆಸುಪಾಸಿನಲ್ಲಿ. ಕೌಟುಂಬಿಕ ಕಥಾವಸ್ತುವಿನ ಹಿನ್ನೆಲೆಯಲ್ಲೇ ಒಂದು ಉತ್ತಮ ಸಾಮಾಜಿಕ ಸಂದೇಶವನ್ನು ಸಾರುವ ಚಿತ್ರಕಥೆಗಳು ಹಲವು ದಶಕಗಳ ಕಾಲ ಕನ್ನಡ ಚಿತ್ರರಂಗವನ್ನು ಬೆಳೆಸಿವೆ. ಹಲವು ಕಾದಂಬರಿ ಆಧರಿತ ಚಿತ್ರಗಳು ಕನ್ನಡ ಚಿತ್ರರಂಗವನ್ನು ವಿಶ್ವಮಟ್ಟದಲ್ಲಿ ಖ್ಯಾತಿಪಡೆಯುವಂತೆ ಮಾಡಿವೆ. ನಾಂದಿ, ಉಯ್ಯಾಲೆ, ಚಕ್ರತೀರ್ಥ, ಹಣ್ಣೆಲೆ ಚಿಗುರಿದಾಗ, ಬಂಗಾರದಹೂವು, ಚಂದವಳ್ಳಿಯ ತೋಟ, ಸಂಧ್ಯಾರಾಗ, ನಂದಾದೀಪ, ಗೆಜ್ಜೆಪೂಜೆ, ಶರಪಂಜರ ಫಣಿಯಮ್ಮ, ಸಂಸ್ಕಾರ, ಹೀಗೆ ಹಲವು ಚಿತ್ರಗಳು ನಮ್ಮ ಸಮಾಜವನ್ನು ಇಂದಿಗೂ ಕಾಡುತ್ತಿರುವ ಜ್ವಲಂತ ಸಮಸ್ಯೆಗಳ ಬಗ್ಗೆ, ಮೂಢನಂಬಿಕೆಗಳ ವಿರುದ್ಧ, ಸಾಮಾಜಿಕ ಅನಿಷ್ಟಗಳ ವಿರುದ್ಧ ಬೆಳಕು ಚೆಲ್ಲಿವೆ.

ಪೌರಾಣಿಕ, ಐತಿಹಾಸಿಕ ಮತ್ತು ಭಕ್ತಿರಸ ಪ್ರಧಾನ ಚಿತ್ರಗಳ ಪರಂಪರೆಯಲ್ಲೂ ಕನ್ನಡ ಚಿತ್ರರಂಗ ತನ್ನದೇ ಆದ ಛಾಪು ಮೂಡಿಸಿದ್ದರೆ ಅದರ ಹಿಂದೆ ಡಾ ರಾಜಕುಮಾರ್ ಅವರ ಅಭಿನಯ ಸಾಮರ್ಥ್ಯ ಮತ್ತು ಕಲಾಪ್ರೌಢಿಮೆ ಇತ್ತು ಎನ್ನುವುದು ಸುಸ್ಪಷ್ಟ. ಬಹುಶಃ ಡಾ ರಾಜ್ ಅವರ ಮೇರು ನಟನೆಯನ್ನು ಹೊರಗಿಟ್ಟು ಈ ಸರಣಿಯ ಹಲವಾರು ಚಿತ್ರಗಳನ್ನು ಪರದೆಯ ಮೇಲೆ ಊಹಿಸಿಕೊಳ್ಳುವುದೂ ಕಷ್ಟ. ರಣಧೀರ ಕಂಠೀರವದಿಂದ ಮಯೂರ ಚಿತ್ರದವರೆಗೆ, ಹರಿಭಕ್ತ ಚಿತ್ರದಿಂದ ಭಕ್ತಕುಂಬಾರದವರೆಗೆ, ಮಹಿಷಾಸುರ ಮರ್ಧಿನಿಯಿಂದ ಭಬ್ರುವಾಹನನವರೆಗೆ ಡಾ ರಾಜ್ ಈ ಚಾರಿತ್ರಿಕ, ಕಾಲ್ಪನಿಕ ಪಾತ್ರಗಳಿಗೆ ಜೀವ ತುಂಬಿದ್ದರು. 1960ರ ದಶಕದ ಉತ್ತರಾರ್ಧದಲ್ಲಿ ಡಾ ರಾಜ್ ಸಾಮಾಜಿಕ ಕಥಾವಸ್ತು ಇರುವ ಚಿತ್ರಗಳೆಡೆಗೆ ಹೆಚ್ಚು ವಾಲಿದ್ದರು.

1960 ರಿಂದ 1980ರವರೆಗೆ ಕನ್ನಡ ಚಿತ್ರಗಳಲ್ಲಿ ನಾಯಕ ಒಂದು ನಿರ್ದಿಷ್ಟ ಕಥಾವಸ್ತುವಿನ ನಾಯಕನಾಗಿರುತ್ತಿದ್ದ. ಒಂದು ನಿರ್ದಿಷ್ಟ ಊರು, ಅಲ್ಲಿನ ಪರಿಸರದಲ್ಲಿನ ಸಾಮಾಜಿಕ ಸ್ಥಿತ್ಯಂತರಗಳು, ಅಲ್ಲಿನ ಕೌಟುಂಬಿಕ ಜೀವನ ಮತ್ತು ಜೀವನೋಪಾಯ, ಸಾಮಾಜಿಕ, ಸಾಂಸ್ಕೃತಿಕ ಸಮಸ್ಯೆಗಳು ಮತ್ತು ಸಾಮಾಜಿಕ ಜೀವನದ ಮೇಲೆ ಪ್ರಭಾವ ಬೀರುವ ಊಳಿಗಮಾನ್ಯ ಧೋರಣೆ, ಜಾತಿ ವ್ಯವಸ್ಥೆ, ಭೂಮಾಲೀಕರ ಶೋಷಣೆ, ಜಾತಿ ತಾರತಮ್ಯ ಹೀಗೆ ಒಂದು ನಿರ್ದಿಷ್ಟ ಚೌಕಟ್ಟಿನಲ್ಲಿ ರೂಪುಗೊಳ್ಳುತ್ತಿದ್ದ ಕಥೆಗಳು ಒಂದು ಕುಟುಂಬ ಮತ್ತು ಆ ಕುಟುಂಬ ಸದಸ್ಯರ ಜೀವನದ ಸುತ್ತ ಹೆಣೆದುಕೊಳ್ಳುತ್ತಿದ್ದವು. ಇಲ್ಲಿ ನಾಯಕನ ವೈಭವೀಕರಣ ಸಹಜವಾಗಿಯೇ ಇರುತ್ತಿತ್ತು. ಆದರೆ ನಾಯಕನ ಸುತ್ತ ಪ್ರಭಾವಳಿ ಇರುತ್ತಿರಲಿಲ್ಲ. ಬಂಗಾರದ ಮನುಷ್ಯದಂತಹ ಸಂದೇಶ ಪ್ರಧಾನ ಚಿತ್ರದಲ್ಲೂ ಸಹ ನಾಯಕ ನಟ ಒಂದು ರೂಪಕವಾಗಿಯೇ ಕಂಡುಬರುತ್ತಾನೆ.

ಹಾಗಾಗಿ ಈ ಕಾಲಘಟ್ಟದ ಚಲನಚಿತ್ರಗಳನ್ನು ನೋಡಿ ಚಿತ್ರಮಂದಿರಗಳಿಂದ ಹೊರಬರುವಾಗ ಪಾತ್ರಗಳು ಮನದಲ್ಲಿ ಉಳಿಯುತ್ತಿದ್ದವು, ಹೀರೋ ಅಥವಾ ಹೀರೋಯಿನ್ ಅಲ್ಲ. ಬಂಗಾರದ ಮನುಷ್ಯದ ರಾಜೀವ, ಶರಪಂಜರದ ಕಾವೇರಿ, ಸಾಕ್ಷಾತ್ಕಾರದ ಮಹೇಶ, ಹಂಸಗೀತೆಯ ಭೈರವಿ ವೆಂಕಟಸುಬ್ಬಯ್ಯ, ನಾಗರಹಾವು ಚಿತ್ರದ ರಾಮಾಚಾರಿ ಹೀಗೆ ನಾಯಕ/ನಾಯಕಿ ನಟನಟಿಯರು ನಿರ್ವಹಿಸುತ್ತಿದ್ದ ಪಾತ್ರಗಳು ಅಚ್ಚಳಿಯದೆ ಉಳಿಯುತ್ತಿದ್ದವು. ಬಹುಪಾಲು ಕಮರ್ಷಿಯಲ್ ಚಿತ್ರಗಳಲ್ಲೂ ಸಹ ನಾಯಕ ನಟನ ಪ್ರಭಾವಳಿ ಕಥಾಹಂದರವನ್ನು ಮೀರಿ ಹೋಗುತ್ತಿರಲಿಲ್ಲ, ಕಥೆಯ ಪ್ರಾದೇಶಿಕ ವಿಸ್ತಾರವನ್ನೂ ದಾಟಿ ಹೋಗುತ್ತಿರಲಿಲ್ಲ. ನಂದಗೋಕುಲ, ಬಯಲುದಾರಿ, ನಮ್ಮ ಸಂಸಾರ, ನಾಗರಹಾವು ಹೀಗೆ ನೂರಾರು ಚಿತ್ರಗಳ ನಾಯಕರು ಆ ಚಿತ್ರದ ಕಥಾವಸ್ತುವಿಗಷ್ಟೇ ಸೀಮಿತವಾಗಿ ವೈಭವೀಕರಣಕ್ಕೊಳಪಡುತ್ತಿದ್ದರು. ರಜತ ಪರದೆಯ ಹೊರಗೆ ತಮ್ಮದೇ ಆದ ಅಭಿಮಾನಿ ವೃಂದವನ್ನು ಹೊಂದಿದ್ದುದೂ ಹೌದು. ಪರದೆಯ ಮೇಲಾಗಲೀ, ಪರದೆಯಿಂದಾಚೆಗಿನ ಸಾರ್ವಜನಿಕ ಬದುಕಿನಲ್ಲಾಗಲೀ ಈ ಕಾಲಘಟ್ಟದ ನಾಯಕನಟರು ತಮ್ಮನ್ನು ಸಮಸ್ತ ಕನ್ನಡಿಗರ ಅಸ್ಮಿತೆಯೊಡನೆ ಸಮೀಕರಿಸಿಕೊಳ್ಳುತ್ತಿರಲಿಲ್ಲ.

ಈ ಪರಂಪರೆ ಕೊನೆಯಾದದ್ದು 1980ರ ದಶಕದ ಆಸುಪಾಸಿನಲ್ಲಿ. ವ್ಯವಸ್ಥೆಯ ವಿರುದ್ಧ ಬಂಡಾಯ ಹೂಡುವ, ಪ್ರತಿರೋಧದ ದನಿಯಾಗಿ ನಾಯಕ ಪಾತ್ರಧಾರಿಗಳು ಪರದೆಯ ಮೇಲೆ ವಿಜೃಂಭಿಸಲು ಆರಂಭವಾದ ಕಾಲಘಟ್ಟ ಇದು. ವ್ಯವಸ್ಥೆಯ ವಿರುದ್ಧ ಸಿಡಿದೇಳುವ ನಾಯಕನ ಸುತ್ತ ಹೆಣೆದ ಕಥಾವಸ್ತುಗಳು 40 ವರ್ಷಗಳು ಕಳೆದರೂ ಇಂದಿಗೂ ಪರದೆಯ ಮೇಲೆ ಕಾಣುತ್ತಲೇ ಇವೆ. ಹಿಂದಿ ಚಿತ್ರರಂಗದಲ್ಲಿ ದಕ್ಷಿಣ ರಾಜ್ಯಗಳಂತೆ ಸಿನಿಮಾ ನಟರನ್ನು ಆರಾಧ್ಯ ದೈವದಂತೆ ಕಾಣುವ ಪರಂಪರೆ ಇಲ್ಲವಾದ್ದರಿಂದ "ವ್ಯವಸ್ಥೆಯ ವಿರುದ್ಧ ಸಿಡಿದೇಳುವ" ನಾಯಕ ಪಾತ್ರಗಳು ಪರದೆಯಿಂದಾಚೆ ಪ್ರಭಾವಳಿ ಸೃಷ್ಟಿಸಲಿಲ್ಲ. ಅಮಿತಾಬ್ ಇಂತಹ ಸಾಕಷ್ಟು ಚಿತ್ರಗಳಲ್ಲಿ ನಟಿಸಿದ್ದರೂ, ತನ್ನನ್ನು ಸಮಸ್ತ ಮರಾಠಿಗರ/ಹಿಂದಿ ಭಾಷಿಕರ ಪ್ರತಿನಿಧಿ ಎಂದು ಬಿಂಬಿಸುವಂತಹ ಪಾತ್ರ ನಿರ್ವಹಿಸಲಿಲ್ಲ.



ದಕ್ಷಿಣದಲ್ಲಿ ಆದದ್ದೇ ಬೇರೆ. ಇಲ್ಲಿ ಸಿನಿಮಾದಲ್ಲಿನ ನಾಯಕ, ಆ ಚಿತ್ರದ ಕಥಾವಸ್ತುವಿನಿಂದ ಒಮ್ಮೆಲೆ ಜಿಗಿದು ಸಮಸ್ತ ಕನ್ನಡಿಗರ ನಡುವೆ ಪ್ರತಿಷ್ಠಾಪನೆಯಾಗಿಬಿಟ್ಟ. ಡಾ ರಾಜ್ ಸಹ ಈ ಬದಲಾವಣೆಗೆ ಹೊಂದಿಕೊಂಡಿದ್ದನ್ನು ಪರಶುರಾಮ್, ಶಬ್ದವೇಧಿ, ಧ್ರುವತಾರೆ ಮುಂತಾದ ಚಿತ್ರಗಳಲ್ಲಿ ಗಮನಿಸಬಹುದು. ಆದರೆ ಸಿನಿಮಾ ಚಿತ್ರಕಥೆಯ ನಾಯಕನನ್ನು ಸಮಸ್ತ ಜನತೆಯ ಪ್ರತಿನಿಧಿಯನ್ನಾಗಿ, ಅಸ್ಮಿತೆಯನ್ನಾಗಿ ಮಾಡುವ ಪರಂಪರೆಗೆ ನಾಂದಿ ಹಾಡಿದ್ದು ವಿಷ್ಣುವರ್ಧನ್ ಮತ್ತು ಅಂಬರೀಷ್. ಇದನ್ನು ಮುಂದುವರೆಸಿದವರು ರವಿಚಂದ್ರನ್, ಉಪೇಂದ್ರ ಮತ್ತು ಇತ್ತೀಚಿನ ಪೊಗರುವರೆಗಿನ ನಾಯಕ ನಟರು. ನಾಯಕ ನಟನ ವೈಭವೀಕರಣ ರೋಚಕತೆ ಪಡೆಯುತ್ತಿದ್ದಂತೆಲ್ಲಾ ಚಿತ್ರಗಳಲ್ಲಿ ಹಿಂಸಾತ್ಮಕ ದೃಶ್ಯಗಳೂ ಹೆಚ್ಚಾಗತೊಡಗಿದವು.

ದೇಶದಲ್ಲಿ ಬದಲಾಗುತ್ತಿದ್ದ ರಾಜಕೀಯ ಸನ್ನಿವೇಶಗಳು, ಸಾಂಸ್ಕೃತಿಕ ರಾಜಕಾರಣ ಸೃಷ್ಟಿಸಿದ್ದ ಅನ್ಯಮತೀಯ ದ್ವೇಷ ಮತ್ತು ಭಯೋತ್ಪಾದನೆಯ ಹೆಚ್ಚಳದಿಂದ ಸೃಷ್ಟಿಯಾದ ಭೂಗತ ಲೋಕದ ಚಿತ್ರಣ ಇವೆಲ್ಲವೂ ಸಿನಿಮಾ ನಾಯಕನನ್ನು ಸರ್ವವ್ಯಾಪಿ, ಸರ್ವಶಕ್ತ, ಸರ್ವಾಂತರ್ಯಾಮಿಯನ್ನಾಗಿ ಮಾಡಿಬಿಟ್ಟಿತು. ಸಕಲ ಸದ್ಗುಣ ಸಂಪನ್ನ ಎನ್ನಬಹುದಾದ ಡಾ ರಾಜ್ ನಿರ್ಮಿಸಿದ್ದ ನಾಯಕನ ಛಾಯೆ ಕ್ರಮೇಣ ಮರೆಯಾಗಿಬಿಟ್ಟಿತು. ಸಮಾಜದ ಮತ್ತು ವ್ಯವಸ್ಥೆಯ ಓರೆಕೋರೆಗಳನ್ನು ಸರಿಪಡಿಸಲು ನಾಯಕ "ದುಷ್ಟ ಶಿಕ್ಷಕ ಶಿಷ್ಟ ರಕ್ಷಕ" ನ ಪಾತ್ರ ನಿರ್ವಹಿಸುತ್ತಲೇ ಎಲ್ಲವನ್ನೂ ಸದೆಬಡಿಯುವ ಒಂದು ವಿಶಿಷ್ಟ ಪರಂಪರೆ ಚಿತ್ರರಂಗವನ್ನು ಆವರಿಸಿತ್ತು.

ಇಲ್ಲಿ ಪುರುಷ ಪ್ರಧಾನ ಮೌಲ್ಯಗಳೂ ಅಷ್ಟೇ ಪರಿಣಾಮಕಾರಿಯಾಗಿದ್ದುದರಿಂದ ಕನ್ನಡ ಚಿತ್ರರಂಗ ಪ್ರಬುದ್ಧ ನಟಿ ಎನ್ನಬಹುದಾದ ಒಬ್ಬ ನಾಯಕ ನಟಿಯನ್ನೂ 1990ರ ನಂತರ ಸೃಷ್ಟಿಸಲಾಗಲಿಲ್ಲ. ಬೆರಳೆಣಿಕೆಯಷ್ಟು ನಟಿಯರು ಇದ್ದರೂ ಅವಕಾಶವಂಚಿತರಾಗಿ ನೇಪಥ್ಯಕ್ಕೆ ಸರಿಯಬೇಕಾಯಿತು. ತಮ್ಮ ಇಮೇಜ್ ಉಳಿಸಿಕೊಳ್ಳಲು ನಟಿ ಮಾಲಾಶ್ರೀ ಇದೇ ಸಿದ್ಧಮಾದರಿಯ ನಾಯಕ ನಟನ ಸ್ಥಾನ ಅಲಂಕರಿಸಬೇಕಾಯಿತು. ಈ ಪರಂಪರೆಯಲ್ಲಿ ಪೊಲೀಸ್ ಪಾತ್ರಗಳೂ ಸಹ ಕಾನೂನು ಚೌಕಟ್ಟುಗಳನ್ನು ಮೀರಿ ಸರ್ವಶಕ್ತ ನಾಯಕನ ಪ್ರಭಾವಳಿಗೆ ಒಳಗಾದವು. ಇತ್ತೀಚಿನ ಇನಪೆಕ್ಟರ್ ವಿಕ್ರಂ ಚಿತ್ರದಲ್ಲಿ (ಧೈರ್ಯವಿದ್ದವರು ನೋಡಬಹುದು) ಸಮವಸ್ತ್ರವಿಲ್ಲದೆಯೇ ಶತ್ರುಪಾಳಯವನ್ನು ಸದೆಬಡಿಯುವ ದೃಶ್ಯಗಳೇ ಹೆಚ್ಚಾಗಿರುವುದನ್ನು ನೋಡಿದರೆ, ಈ ಬೆಳವಣಿಗೆಯ ಮತ್ತೊಂದು ಆಯಾಮವೂ ಪರಿಚಯವಾಗುತ್ತದೆ.

ಸರ್ವಶಕ್ತ ನಾಯಕ ವಿಜೃಂಭಿಸಬೇಕೆಂದರೆ ಅನ್ಯಾಯಗಳು ಕ್ರೂರ ಸ್ವರೂಪದಲ್ಲಿ ವ್ಯಕ್ತವಾಗಬೇಕು. ನಾಯಕನಲ್ಲಿ ಆಕ್ರೋಶ ಹೆಚ್ಚಾಗಬೇಕೆಂದರೆ ಅವನ ಸುತ್ತಮುತ್ತಲಿನ ಜನರು ಕ್ರೂರ ಚಿತ್ರಹಿಂಸೆಗೊಳಪಡಬೇಕು. ನಾಯಕ ನೂರಡಿ ದೂರದಲ್ಲಿ ನಿಂತು ಮುಷ್ಟಿ ಬಿಗಿದರೆ ಹತ್ತಾರು ಖಳನಾಯಕನ ಭಂಟರು ಗಗನದೆತ್ತರಕ್ಕೆ ಎಗರಿ ಧೊಪ್ಪೆಂದು ಕೆಳಕ್ಕೆ ಬೀಳುವ ದೃಶ್ಯಗಳು ಈ ಸರ್ವಶಕ್ತ, ಸರ್ವಾಂತರ್ಯಾಮಿ ನಾಯಕ ನಟನನ್ನು ಮೆರೆಸಲು ನೆರವಾದವು. ಅಭಿನಯ ಕೌಶಲ್ಯಗಳು ನೇಪಥ್ಯಕ್ಕೆ ಸರಿದು ಹಾವಭಾವಗಳು ಮುನ್ನೆಲೆಗೆ ಬಂದ ಈ ಬೆಳವಣಿಗೆಯ ನಡುವೆ, ನಟನೆಯಲ್ಲಿ ಪ್ರಬುದ್ಧತೆ ಕಳೆದುಹೋಗಿದ್ದು ನಮ್ಮ ಗಮನಕ್ಕೇ ಬರಲಿಲ್ಲ. ಹಾಗೆಯೇ ಪರದೆಯ ಮೇಲೆ ಎಲ್ಲವನ್ನೂ ಮೆಟ್ಟಿನಿಲ್ಲುವ ನಾಯಕ ನಟನ ಇಮೇಜ್ ಕಾಪಾಡಲು ಕಾಲಿನಿಂದ ಎದೆಗೆ ಒದೆಯುವ ದೃಶ್ಯಗಳು ಹೆಚ್ಚು ಶಿಳ್ಳೆ, ಚಪ್ಪಾಳೆ ಗಿಟ್ಟಿಸಿದವು.

ಚಲನ ಚಿತ್ರದ ನಾಯಕ ಅನ್ಯಾಯವನ್ನು ಮೆಟ್ಟಿನಿಲ್ಲುವುದು ಜನಪ್ರಿಯ ಸಿದ್ಧಸೂತ್ರ. ಆದರೆ ಸರ್ವಶಕ್ತ ನಾಯಕ ತನ್ನ ವಿರುದ್ಧ ನಿಲ್ಲುವ ಎಲ್ಲರನ್ನೂ ವಸ್ತುಶಃ ಮೆಟ್ಟಿನಿಲ್ಲುವುದು ವಿಕೃತ ಕ್ರೌರ್ಯದ ಸಂಕೇತ. ಖಳನಾಯಕನನ್ನು ಮತ್ತು ಖಳನ ಭಂಟರನ್ನು ಕಾಲಿನಿಂದಲೇ ಹೊಸಕಿಹಾಕುವುದು, ನಾಯಕ ಗಾಳಿಯಲ್ಲಿ ವಾನರನಂತೆ ಹಾರಿಬಂದು ಖಳನ ಎದೆಗೆ ಕಾಲಿನಿಂದ ಒದೆಯುವುದು ಇದು ಹೀರೋನ ಇಮೇಜ್ ಹೆಚ್ಚಿಸಲು ನೆರವಾಗಿದ್ದೇನೋ ಹೌದು, ಆದರೆ ಈ ಅಸಹಜತೆಯ ಹೊರತುಪಡಿಸಿ ನೋಡಿದಾಗ, ಇಂತಹ ದೃಶ್ಯಗಳು ಸಮಾಜಕ್ಕೆ ವಿಕೃತ ಸಂದೇಶವನ್ನು ರವಾನಿಸುವುದನ್ನು ಅಲ್ಲಗಳೆಯಲಾಗುವುದಿಲ್ಲ.

ಪೊಗರು ಚಿತ್ರದ ದೃಶ್ಯವನ್ನು ಈ ಹಿನ್ನೆಲೆಯಲ್ಲಿ ನೋಡಬೇಕು. ಬ್ರಾಹ್ಮಣ್ಯವನ್ನು, ಬ್ರಾಹ್ಮಣರ ಅಂಧಶ್ರದ್ಧೆಯನ್ನು, ಅಸ್ಪೃಶ್ಯತೆ ಮತ್ತು ಜಾತಿ ದೌರ್ಜನ್ಯವನ್ನು ಬಿಂಬಿಸುವ ಅನೇಕ ಚಿತ್ರಗಳಲ್ಲಿ ಅಸ್ಪೃಶ್ಯ ಸಮುದಾಯವನ್ನು ಅಪಮಾನಿಸುವ ದೃಶ್ಯಗಳು ಹೇರಳವಾಗಿವೆ. ಕರ್ಮಠ ಬ್ರಾಹ್ಮಣ್ಯದ ಮೌಢ್ಯ, ಅಂಧವಿಶ್ವಾಸ ಮತ್ತು ಸಾಂಪ್ರದಾಯಿಕ ಮಡಿವಂತಿಕೆಯನ್ನು ಲೇವಡಿ ಮಾಡುವ ದೃಶ್ಯಗಳೂ ಹೇರಳವಾಗಿವೆ. ಉದಯಕುಮಾರ್ ನಟಿಸಿದ ಹೇಮಾವತಿ ಚಿತ್ರದಲ್ಲಿ ಬ್ರಾಹ್ಮಣ್ಯದ ವಿಕೃತಿಗಳನ್ನು ಅದ್ಭುತವಾಗಿ ಚಿತ್ರಿಸಲಾಗಿದೆ. ಆದರೆ ಸಮಾಜಕ್ಕೆ ಒಂದು ಸತ್ ಸಂದೇಶ ನೀಡಲು ಬಾಯಿಂದ ಮಾತನಾಡಿದರೂ ಸಾಕಲ್ಲವೇ? ಪೊಗರು ನಾಯಕ ಕಾಲಿನಿಂದ ಮಾತನಾಡುತ್ತಾನೆ.

ಇದನ್ನು ಸೃಜನಶೀಲತೆ ಎನ್ನಲಾಗುವುದಿಲ್ಲ. ಈ ದೃಶ್ಯವನ್ನು ಹಿಂದೂ ಧರ್ಮಕ್ಕೆ ಅವಮಾನ ಮಾಡಿದಂತೆ ಎಂದು ಯೋಚಿಸುವ ಬದಲು, ಮಾನವ ಸಂವೇದನೆಯನ್ನು ಅವಮಾನಿಸಿದಂತೆ ಎಂದು ಯೋಚಿಸುವುದು ಪ್ರಬುದ್ಧತೆ. ಈ ಪ್ರಬುದ್ಧತೆ ಪಡೆಯಲು ಅಸ್ಪೃಶ್ಯ ಜಾತಿಗಳನ್ನು, ಅಲ್ಪಸಂಖ್ಯಾತ ಸಮುದಾಯವನ್ನು, ಮಹಿಳೆಯರನ್ನು, ಶೋಷಿತರನ್ನು ಇನ್ನೂ ಕ್ರೂರ ಮಾದರಿಯಲ್ಲಿ ಅವಮಾನಿಸಿರುವ ಚಿತ್ರಗಳ ಬಗ್ಗೆಯೂ ದನಿ ಎತ್ತಬೇಕಲ್ಲವೇ? "ಶೂದ್ರ ಮುಂಡೇದೇ" ಎಂದು ಹೀಗಳೆಯುವ ದೃಶ್ಯಗಳು ಎಷ್ಟು ಚಿತ್ರಗಳಲ್ಲಿವೆ ಅಲ್ಲವೇ? ಇದು ಒಂದೆಡೆ ಶೂದ್ರ/ಅಸ್ಪೃಶ್ಯರನ್ನು ಮತ್ತೊಂದೆಡೆ ಹೆಣ್ತನವನ್ನು ಅಪಮಾನಿಸುವುದೇ ಅಲ್ಲವೇ? ಈ ಸೂಕ್ಷ್ಮಗಳನ್ನು ಅರಿತು ಚಲನ ಚಿತ್ರ ನಿರ್ಮಿಸುವ ಪರಂಪರೆಯಿಂದ ಕನ್ನಡ ಚಿತ್ರರಂಗ ಎಂದೋ

ಪುಟ 10 ಕ್ಕೆ




### ಸಾರ್ವಜನಿಕ ಆಸ್ತಿಗಳ ಮಾರಾಟಕ್ಕೆ ಮೋದಿ ಸರ್ಕಾರದ ಧಾವಂತ

# ‘ಆತ್ಮನಿರ್ಭರ ಭಾರತ’ದ ಹೆಸರಲ್ಲೇ ದೇಶದ ಲೂಟಿ

* ಪ್ರಕಾಶ್ ಕಾರಟ್

ಮೋದಿ ಆಡಳಿತದ ಎರಡನೇ ಅವಧಿಯಲ್ಲಿ ಸಾರ್ವಜನಿಕ ವಲಯವನ್ನು ಕಳಚಿ ಹಾಕಿಬಿಡುವುದೇ ಹೊಸ ನೀತಿಯ ಅರ್ಥವಾಗಿದೆ. ಅಂದರೆ ಸಾರ್ವಜನಿಕ ಹಣದಿಂದ ಕಟ್ಟಲಾದ ಬಹುಮೂಲ್ಯ ಸಾರ್ವಜನಿಕ ಆಸ್ತಿಗಳ ಮಾರಾಟ. ಹಣಕಾಸು ಪರಿಸ್ಥಿತಿ ತೀವ್ರವಾಗಿ ಮುಗ್ಗರಿಸಿ ಆಸ್ತಿಗಳ ಬೆಲೆಗಳು ತೀರಾ ಕುಸಿತ ಕಂಡಿರುವಾಗ ಈ ಆಸ್ತಿಗಳನ್ನು ಸರ್ಕಾರ ತೀರಾ ಅಗ್ಗ ದರಗಳಲ್ಲಿ ಮಾರಲಿದ್ದು ದೇಶೀ– ವಿದೇಶಿ ಬಂಡವಳಿಗರಿಗೆ ಹಬ್ಬದೂಟವಾಗಿದೆ. ಇದೆಲ್ಲವನ್ನು ‘ಆತ್ಮ ನಿರ್ಭರ’ ಭಾರತದ ಹೆಸರಿನಲ್ಲಿ ಮಾಡಲಾಗುತ್ತಿರುವುದು ಒಂದು ಕ್ರೂರ ವಂಚನೆ. ಸಾರ್ವಜನಿಕ ರಂಗದ ವಿರುದ್ಧ ಸರ್ಕಾರ ಸಾರಿರುವ ಈ ಯುದ್ಧವನ್ನು ಸೋಲಿಸಲು ಆದಷ್ಟು ಹೆಚ್ಚು ಜನ ವಿಭಾಗಗಳನ್ನು ಒಗ್ಗೂಡಿಸಲು ಕಾರ್ಮಿಕ ಸಂಘಟನೆಗಳು ಮತ್ತು ಎಡ ಶಕ್ತಿಗಳು ಶ್ರಮಿಸಬೇಕು.

ಸಾರ್ವಜನಿಕ ಕ್ಷೇತ್ರದ ಉದ್ಯಮಗಳ (ಪಿಎಸ್‌ಇ) ಖಾಸಗೀಕರಣ ಕುರಿತು 2021–22ನೇ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಪ್ರಕಟಿಸಿರುವ ನೀತಿಯನ್ನು ಕಾರ್ಪೊರೇಟ್ ಮಾಧ್ಯಮಗಳು ಮತ್ತು ಬಲಪಂಥೀಯ ಅರ್ಥಶಾಸ್ತ್ರಜ್ಞರು ಭಾರಿ ಸಂಭ್ರಮದಿಂದ ಸ್ವಾಗತಿಸಿದ್ದಾರೆ. “ಮೋದಿ ಬದಲಾಯಿಸಿದ್ದಾರೆ”, “ಅಸಾಧಾರಣ ದಿಟ್ಟತನ”, “ಕೊನೆಗೂ ನಿಜವಾದ ಸುಧಾರಣೆ” ಎಂಬಿತ್ಯಾದಿ ಟಿಪ್ಪಣಿಗಳನ್ನು ಈ ವಲಯಗಳು ಮಾಡಿವೆ.

ದೊಡ್ಡ ಉದ್ಯಮಪತಿಗಳು ಮತ್ತು ಹಣಕಾಸು ಸಟ್ಟಾಕೋರರಲ್ಲಿ ಇಂಥ ಹುರುಪು ಮೂಡಲು ಕಾರಣವೇನು?. ಬಜೆಟ್‌ನಲ್ಲಿ ಪ್ರಕಟಿಸಿದ್ದು ಏನೆಂಬುದನ್ನು ಈಗ ವಿತ್ತ ಸಚಿವಾಲಯದಡಿ ಬರುವ ಬಂಡವಾಳ ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣೆ ಇಲಾಖೆ ಬಹಿರಂಗಪಡಿಸಿದೆ. “ಆತ್ಮನಿರ್ಭರ ಭಾರತಕ್ಕೆ ಹೊಸ ಸಾರ್ವಜನಿಕ ವಲಯದ ಉದ್ಯಮ ನೀತಿ” ಎಂಬ ದಾಖಲೆಯಲ್ಲಿ ಅದನ್ನು ವಿವರಿಸಲಾಗಿದೆ. ಆಯಕಟ್ಟಿನ ಹಾಗೂ ಆಯಕಟ್ಟೇತರ ಕ್ಷೇತ್ರಗಳೆಂದು ಪಿಎಸ್‌ಇಗಳನ್ನು ಅದರಲ್ಲಿ ವರ್ಗೀಕರಿಸಲಾಗಿದೆ.

**‘ಬಂಡವಾಳ ಹಿಂತೆಗೆತ’ದಿಂದ ಕಳಚಿ ಹಾಕುವ ವರೆಗೆ**

ನಾಲ್ಕು ಆಯಕಟ್ಟಿನ ಕ್ಷೇತ್ರಗಳಿವು: 1. ಅಣು ಇಂಧನ, ಬಾಹ್ಯಾಕಾಶ ಮತ್ತು ರಕ್ಷಣೆ. 2. ಸಾರಿಗೆ ಮತ್ತು ದೂರಸಂಪರ್ಕ. 3. ಇಂಧನ, ಪೆಟ್ರೋಲಿಯಂ ಮತ್ತು ಕಲ್ಲಿದ್ದಲು. 4. ಬ್ಯಾಂಕಿಂಗ್, ವಿಮೆ ಹಾಗೂ ಹಣಕಾಸು ಸೇವೆಗಳು. ಈ ನಾಲ್ಕು ಕ್ಷೇತ್ರಗಳಲ್ಲಿ ಹಾಲಿ ಅಸ್ತಿತ್ವದಲ್ಲಿರುವ ಪಿಎಸ್‌ಇಗಳ ‘ಕನಿಷ್ಠ ಇರವು ಮಾತ್ರ ಇರುತ್ತದೆ’. ಉಳಿದೆಲ್ಲ ಸಂಸ್ಥೆಗಳನ್ನು ಖಾಸಗೀಕರಿಸಲಾಗುತ್ತದೆ, ವಿಲೀನಗೊಳಿಸಲಾಗುತ್ತದೆ ಅಥವಾ ಮುಚ್ಚಲಾಗುತ್ತದೆ.

ಆಯಕಟ್ಟೇತರ ವಲಯದಲ್ಲಿ, ಎಲ್ಲ ಪಿಎಸ್‌ಇಗಳ ಖಾಸಗೀಕರಣವನ್ನು ಪರಿಶೀಲಿಸಲಾಗುತ್ತದೆ. ಇಲ್ಲವೇ ಅವುಗಳನ್ನು ಮುಚ್ಚಲಾಗುತ್ತದೆ.

ಪಿಎಸ್‌ಇಗಳ ಈ ದೂರಗಾಮಿ ಪರಿಣಾಮಗಳುಳ್ಳ ಖಾಸಗೀಕರಣ ಯೋಜನೆಯೇ ಭಾರತೀಯ ಮತ್ತು ವಿದೇಶಿ ದೊಡ್ಡ ಬಂಡವಾಳಶಾಹಿಗಳು ಜೊಲ್ಲು ಸುರಿಸುವಂತೆ ಮಾಡಿರುವುದು.

ಪಿ.ವಿ. ನರಸಿಂಹ ರಾವ್ ದಿನಗಳಿಂದಲೂ ಖಾಸಗೀಕರಣದ ಹೆಜ್ಜೆಗಳಿಗೆ ‘ಬಂಡವಾಳ ಹಿಂತೆಗೆತ’ ಎಂಬ ಮುಸುಕನ್ನು ಹಾಕಲಾಗಿತ್ತು. ಇದುವರೆಗೂ ಈ ಪದ ಚಾಲ್ತಿಯಲ್ಲಿದೆ. ಪಿಎಸ್‌ಇಗಳ ಷೇರುಗಳ ಆಯಕಟ್ಟಿನ ಮಾರಾಟವು ಆರಂಭವಾದದ್ದು ವಾಜಪೇಯಿ ಅವಧಿಯಲ್ಲಿ. ಅದು ಖಾಸಗೀಕರಣವಲ್ಲದೆ ಬೇರೇನೂ ಅಲ್ಲ.

ಈಗ ಮೋದಿ ಆಡಳಿತದ ಎರಡನೇ ಅವಧಿಯಲ್ಲಿ ಸಾರ್ವಜನಿಕ ವಲಯವನ್ನು ಕಳಚಿ ಹಾಕಿಬಿಡುವುದೇ ಹೊಸ ನೀತಿಯ ಅರ್ಥವಾಗಿದೆ. ಯಾಕೆಂದರೆ, ನಾಲ್ಕು ಆಯಕಟ್ಟಿನ ಕ್ಷೇತ್ರಗಳಲ್ಲಿನ ಬಹುತೇಕ ಪಿಎಸ್‌ಇಗಳನ್ನು, ಅವುಗಳಲ್ಲಿ ಬಹುತೇಕ ಲಾಭದಲ್ಲಿ ನಡೆಯುತ್ತಿದ್ದರೂ, ಮಾರಾಟ ಮಾಡಲಾಗುತ್ತದೆ. ಅಂದರೆ ಸಾರ್ವಜನಿಕ ಹಣದಿಂದ ಕಟ್ಟಲಾದ ಬಹುಮೂಲ್ಯ ಸಾರ್ವಜನಿಕ ಆಸ್ತಿಗಳ ಮಾರಾಟ.

ತಥಾಕಥಿತ ಆಯಕಟ್ಟಿನ ವಲಯಗಳ ಅನೇಕ ಪಿಎಸ್‌ಇಗಳನ್ನು ಸರ್ಕಾರ ಉದ್ದೇಶಪೂರ್ವಕವಾಗಿ ಸಂಕಷ್ಟಕ್ಕೆ ತಳ್ಳಿ ಖಾಸಗೀಕರಣಕ್ಕೆ ಹಾದಿ ಮಾಡಲಾಗಿದೆ. ಒಎನ್‌ಜಿಸಿ, ಬಿಎಚ್‌ಇಎಲ್, ಬಿಎಸ್‌ಎನ್‌ಎಲ್ ಇವೆಲ್ಲವೂ ಸರ್ಕಾರದ ಸಾರ್ವಜನಿಕ ವಲಯ–ವಿರೋಧಿ ಧೋರಣೆಗೆ ಬಲಿಯಾದವುಗಳು.

**ಏಕೆ ಈ ಖಾಸಗೀಕರಣದ ಧಾವಂತ?**

ನವ ಉದಾರವಾದಿ ಸರ್ಕಾರಗಳಿಗೆ, ಹಣಕಾಸು ಬಿಕ್ಕಟ್ಟು ಬಿಗಡಾಯಿಸಿದಂತೆ ಖಾಸಗೀಕರಣದ ಆದಾಯಗಳ ಮೇಲಿನ ಅವಲಂಬನೆ ಹೆಚ್ಚುತ್ತದೆ. ರೆವಿನ್ಯೂ ಆದಾಯಗಳಲ್ಲಿ ತೀವ್ರ ಕುಸಿತವಾಗಿರುವುದನ್ನು ಈ ಸಾಲಿನ ಕೇಂದ್ರ ಬಜೆಟ್ ತೋರಿಸಿದೆ. ಲಾಭದಾಯಕ ಆದಾಯ ತರುವ ಸಾರ್ವಜನಿಕ ಆಸ್ತಿಗಳನ್ನು ಮಾರಿ ಈ ಸಮಸ್ಯೆಯನ್ನು ಎದುರಿಸುವುದು ಸರ್ಕಾರದ ಉದ್ದೇಶವಾಗಿದೆ.

ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ಬಂಡವಾಳ ಹಿಂತೆಗೆತದ ಮೂಲಕ 2.10 ಲಕ್ಷ ಕೋಟಿ ರೂಪಾಯಿ ಸಂಗ್ರಹಿಸುವುದು 2020–21ನೇ ಸಾಲಿನ ಬಜೆಟಿನ ಗುರಿಯಾಗಿದ್ದರೆ 1.75 ಲಕ್ಷ ಕೋಟಿ ರೂಪಾಯಿ ವರಮಾನದ ಗುರಿಯನ್ನು ಪ್ರಸಕ್ತ ಬಜೆಟ್ ನಿಗದಿಪಡಿಸಿದೆ. ನಿಗದಿತ ಗುರಿ ತಲುಪಲು ಸಾಧ್ಯವಾಗದೆ ಕೊರತೆ ಆದರೂ ಸರ್ಕಾರ ಅದರಿಂದ ಪಾಠ ಕಲಿತಿಲ್ಲ. ಅದಕ್ಕೆ ಬದಲು ಇನ್ನಷ್ಟು ಆಕ್ರಮಣಕಾರಿ ರೀತಿಯಲ್ಲಿ ಖಾಸಗೀಕರಣಕ್ಕೆ ಮುಂದಾಗಿದೆ.

**ಬಂಡವಳಿಗರಿಗೆ ಹಬ್ಬದೂಟ**

ಹಣಕಾಸು ಪರಿಸ್ಥಿತಿ ತೀವ್ರ ಮುಗ್ಗರಿಸಿರುವಾಗ ಆಸ್ತಿಗಳ ಬೆಲೆಗಳು ತೀರಾ ಕುಸಿತ ಕಂಡಿವೆ. ಈ ಆಸ್ತಿಗಳನ್ನು ಸರ್ಕಾರ ತೀವ್ರ ಕಡಿತದ ದರದಲ್ಲಿ ಮಾರಲಿದ್ದು ದೇಶೀಯ ಹಾಗೂ ವಿದೇಶಿ ಬಂಡವಳಿಗರಿಗೆ ಹಬ್ಬದೂಟವಾಗಿದೆ.

ಹಣಕಾಸು ಕ್ಷೇತ್ರದ ಖಾಸಗೀಕರಣದ ಉದ್ದೇಶ ಬಟಾಬಯಲಾಗಿದೆ. ಬಜೆಟ್‌ನಲ್ಲಿ ಇದೇ ಮೊದಲ ಬಾರಿಗೆ ಎರಡು ಸಾರ್ವಜನಿಕ ವಲಯದ ಬ್ಯಾಂಕ್‌ಗಳು ಹಾಗೂ ಒಂದು ಸಾಮಾನ್ಯ ವಿಮಾ ಕಂಪೆನಿಯನ್ನು ಖಾಸಗೀಕರಿಸುವ ಪ್ರಕಟಣೆ ಮಾಡಲಾಗಿದೆ. ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಷೇರುಗಳನ್ನು ಕೂಡ ಹಿಂಪಡೆಯಲಾಗುತ್ತದೆ. ಖಾಸಗೀಕರಿಸಲು ಆಯ್ಕೆ ಮಾಡಲಾಗುವ ಎರಡು ಬ್ಯಾಂಕ್‌ಗಳು ಖಂಡಿತವಾಗಿಯೂ ಲಾಭದಾಯಕ ಬ್ಯಾಂಕ್‌ಗಳಾಗಿರುತ್ತವೆ ಎನ್ನುವಲ್ಲಿ ಅನುಮಾನವಿಲ್ಲ. ಬ್ಯಾಂಕಿಂಗ್ ಕ್ಷೇತ್ರಕ್ಕೆ ಕಾರ್ಪೊರೇಟ್ ವಲಯದ ಪ್ರವೇಶಕ್ಕೆ ಇದು ಮುನ್ನುಡಿ ಬರೆಯಲಿದೆ.

ಹಣಕಾಸು ಕ್ಷೇತ್ರವು ಖಾಸಗೀಕರಣವಾಯಿತೆಂದರೆ ಇಡೀ ಆರ್ಥಿಕತೆಯ ಬಾಗಿಲು ಬಂಡವಾಳ ಹರಿವಿನ ಏರಿಳಿತಗಳಿಗೆ ಒಳಗಾಗುತ್ತದೆ. ಅಂತಾರಾಷ್ಟ್ರೀಯ ಹಣಕಾಸು ಬಂಡವಾಳವು ಷರತ್ತುಗಳನ್ನು ವಿಧಿಸಲು ಸಮರ್ಥವಾಗುತ್ತದೆ. ಇದೀಗ ಆತ್ಮನಿರ್ಭರತೆ!

ಲಾಭದಲ್ಲಿ ನಡೆಯುತ್ತಿರುವ ಪಿಎಸ್‌ಇಗಳ ನಿವ್ವಳ ಲಾಭಗಳು 1.6 ಲಕ್ಷ ಕೋಟಿ ರೂಪಾಯಿ. ಸರ್ಕಾರಕ್ಕೆ ಅವುಗಳಿಂದ ಸಿಗುವ ಡಿವಿಡೆಂಡ್(ಲಾಭಾಂಶ) 77,000 ಕೋಟಿ ರೂಪಾಯಿ. ಈ ಆಸ್ತಿಗಳ ಮಾರಾಟ ಸರ್ಕಾರದ ಹಾಲಿ ಹಾಗೂ ಭವಿಷ್ಯದ ಆದಾಯ ಹರಿವುಗಳು.

**ರಾಷ್ಟ್ರೀಯ ಭದ್ರತೆ–ಸಾರ್ವಭೌಮತೆಗೆ ಅಪಾಯ**

ಇದೆಲ್ಲವನ್ನು ‘ಆತ್ಮ ನಿರ್ಭರ’ ಭಾರತದ ಹೆಸರಿನಲ್ಲಿ ಮಾಡಲಾಗುತ್ತಿರುವುದು ಒಂದು ಕ್ರೂರ ವಂಚನೆ. ಎರಡನೇ ಅತಿ ದೊಡ್ಡ ತೈಲ ಕಂಪೆನಿಯಾದ ಬಿಪಿಸಿಎಲ್‌ನ್ನು ಮಾರಾಟಕ್ಕೆ ಇಡಲಾಗಿದೆ. ಈ ಕಂಪೆನಿಯ ಗಾತ್ರವನ್ನು ನೋಡಿದರೆ ಅದನ್ನು ಖಂಡಿತವಾಗಿಯೂ ಒಂದು ವಿದೇಶಿ ತೈಲ ಕಂಪೆನಿಯ ಕೈಗೆ ಇಡುವ ಸಂಭವ ಜಾಸ್ತಿಯಿದೆ. ಇದು ಮಹತ್ವದ ಇಂಧನ ಸರಬರಾಜಿನ ಮೇಲೆ ನಿಯಂತ್ರಣದ ವಿಚಾರದಲ್ಲಿ ರಾಷ್ಟ್ರೀಯ ಸಾರ್ವಭೌಮತ್ವವನ್ನು ದುರ್ಬಲಗೊಳಿಸುತ್ತದೆ.

ರಕ್ಷಣಾ ವಲಯದಲ್ಲಿನ ಖಾಸಗೀಕರಣದ ಧಾವಂತದಿಂದಾಗಿ ಭಾರತೀಯ ಕಾರ್ಪೊರೇಟ್ ಕ್ಷೇತ್ರದ ಕೆಲವೇ ಆಯ್ದ ಕಂಪೆನಿಗಳು ವಿದೇಶಿ ಶಸ್ತ್ರಾಸ್ತ್ರ ತಯಾರಕರೊಂದಿಗೆ ಕೈಜೋಡಿಸಲು ಮುಂದಾಗುತ್ತವೆ. ಅಮೆರಿಕದೊಂದಿಗಿನ ಬೆಳೆಯುತ್ತಿರುವ ಮಿಲಿಟರಿ ಬಾಂಧವ್ಯವನ್ನು ಪರಿಗಣಿಸಿದರೆ ಅಮೆರಿಕದ ಬಹುರಾಷ್ಟ್ರೀಯ ಶಸ್ತ್ರಾಸ್ತ್ರ ಕಂಪೆನಿಗಳು ರಕ್ಷಣಾ ಉತ್ಪಾದನೆಯ ಪ್ರಮುಖ ಕ್ಷೇತ್ರಗಳಲ್ಲಿ ಪ್ರಾಬಲ್ಯ ಸಾಧಿಸುವ ಅಪಾಯವಿದೆ. ಅಂದರೆ ರಾಷ್ಟ್ರೀಯ ಭದ್ರತೆ ಮತ್ತು ಸಾರ್ವಭೌಮತೆಗೆ ಕೂಡ ಅಷ್ಟೇ ಅಪಾಯವಿದೆ.

ಖಾಸಗೀಕರಣದ ಧಾವಂತ, ವಿಶೇಷವಾಗಿ ಖನಿಜಗಳು ಮತ್ತು ಪ್ರಾಕೃತಿಕ ಸಂಪನ್ಮೂಲಗಳ ಖಾಸಗೀಕರಣವು ಸಾಂವಿಧಾನಿಕ ಆಶಯಕ್ಕೆ ವಿರುದ್ಧವಾಗಿದೆ. ಭೌತಿಕ ಸಂಪನ್ಮೂಲಗಳ ಮಾಲಿಕತ್ವ ಮತ್ತು ನಿಯಂತ್ರಣವು ಅಂತಿಮವಾಗಿ ಜನಸಾಮಾನ್ಯರ ಕಲ್ಯಾಣಕ್ಕೆ ಬಳಕೆಯಾಗಬೇಕು ಎಂದು ಸಂವಿಧಾನದ 39 (ಬಿ) ವಿಧಿ ಪ್ರಭುತ್ವಕ್ಕೆ ನಿರ್ದೇಶಿಸುತ್ತದೆ. ಆದರೆ ವಾಸ್ತವದಲ್ಲಿ ಸಾರ್ವಜನಿಕ ಕಲ್ಯಾಣಕ್ಕೆ ಬದಲು ಖಾಸಗೀಕರಣವು ಪ್ರಾಕೃತಿಕ ಸಂಪನ್ಮೂಲಗಳನ್ನು ಕೊಳ್ಳೆ ಹೊಡೆಯಲು ಖಾಸಗಿ ಕಂಪೆನಿಗಳಿಗೆ ಹೆಬ್ಬಾಗಿಲು ತೆರೆದಿದೆ.

**ಸುದೀರ್ಘ ಹೋರಾಟಕ್ಕೆ ಸಜ್ಜು**

ಆರ್ಥಿಕ ಉದ್ದಿಮೆಗಳಲ್ಲದೆ ಶಿಕ್ಷಣ, ಆರೋಗ್ಯ ಸೇವೆ, ಸಾರಿಗೆ ಮತ್ತು ವಿದ್ಯುತ್ ಸರಬರಾಜು ಮುಂತಾದ ಕ್ಷೇತ್ರಗಳಲ್ಲೂ ಖಾಸಗೀಕರಣದ ಕಬಂಧ ಬಾಹು ಚಾಚಿದೆ. ಇದು ಜನರ ಶಿಕ್ಷಣ, ಆರೋಗ್ಯ ಮತ್ತು ಮೂಲ ಸೇವೆಗಳ ಹಕ್ಕುಗಳ ಮೇಲಿನ ನೇರ ದಾಳಿಯಾಗಿದೆ. ಈ ಖಾಸಗೀಕರಣದ ಧಾವಂತದ ವಿರುದ್ಧ ಸಾಧ್ಯವಾದಷ್ಟು ವ್ಯಾಪಕ ಜನವಿಭಾಗಗಳನ್ನು ಸೇರಿಸಿಕೊಂಡು ಹೋರಾಟ ನಡೆಸಬೇಕಿದೆ. ವಿಶಾಖಪಟ್ಟಣಂ ಉಕ್ಕು ಸ್ಥಾವರದ ಶೇಕಡ 100 ಷೇರುಗಳನ್ನು ಮಾರಾಟ ಮಾಡುವ ಪ್ರಸ್ತಾಪನೆಗೆ ಈಗಾಗಲೇ ಭಾರಿ ಆಕ್ರೋಶ ವ್ಯಕ್ತವಾಗಿದೆ. ಅದರ ವಿರುದ್ಧ ಆಂಧ್ರ ಪ್ರದೇಶದಲ್ಲಿ ಜನರನ್ನು ಅಣಿನೆರೆಸುವ ಕಾರ್ಯ ಸಾಗಿದೆ. ದುಡಿಯುವ ವರ್ಗ ಈ ಹೋರಾಟದ ಕೇಂದ್ರದಲ್ಲಿದ್ದು ಇದು ಜನ ಸಮುದಾಯದ ಪ್ರಶ್ನೆಯಾಗಿ ಹೊರ ಹೊಮ್ಮಿದೆ.

ಬ್ಯಾಂಕ್‌ಗಳ ಖಾಸಗೀಕರಣ ಪ್ರಸ್ತಾಪನೆಯ ವಿರುದ್ಧ ಮಾರ್ಚ್ 15 ಮತ್ತು 16ರಂದು ಮುಷ್ಕರ ನಡೆಸಲು ಬ್ಯಾಂಕ್ ನೌಕರರ ಸಂಘಗಳ ಸಂಯುಕ್ತ ವೇದಿಕೆ ಕರೆ ನೀಡಿದೆ. ವಿಮಾ ನೌಕರರು ಕೂಡ ಸುದೀರ್ಘ ಚಳವಳಿಗೆ ಸಜ್ಜಾಗುತ್ತಿದ್ದಾರೆ. ಎಲ್ಲ ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳ ನೌಕರರು ಮತ್ತು ಕಾರ್ಮಿಕರ ಸಂಯೋಜಿತ ಪ್ರತಿರೋಧವನ್ನು ಕಟ್ಟಿ ಬೆಳೆಸುವುದು ಅಗತ್ಯವಾಗಿದೆ.

ಸಾರ್ವಜನಿಕ ರಂಗದ ವಿರುದ್ಧ ಸರ್ಕಾರ ಸಾರಿರುವ ಯುದ್ಧವನ್ನು ಸೋಲಿಸಲು ಆದಷ್ಟು ಹೆಚ್ಚು ಜನ ವಿಭಾಗಗಳನ್ನು ಒಗ್ಗೂಡಿಸಲು ಕಾಮಿಕ ಸಂಘಟನೆಗಳು ಮತ್ತು ಎಡ ಶಕ್ತಿಗಳು ಶ್ರಮಿಸಬೇಕು.

**ಅನು: ವಿಶ್ವ**



ವಾವ್! ನೀವು ಕೇವಲ ಬಾಗಿಲು ತೆರೆಯುತ್ತೀರಿ ಎಂದು ಭಾವಿಸಿದ್ದೆ!
**ವ್ಯಂಗ್ಯಚಿತ್ರ: ಸುಭಾನಿ, ಡೆಕ್ಕನ್ ಕ್ರಾನಿಕಲ್**



**ವ್ಯಂಗ್ಯಚಿತ್ರ ಕೃಪೆ: ಪಿ. ಮಹಮ್ಮದ್, ವಾರ್ತಾಭಾರತಿ**

ಸಂಸದೀಯ ನಿಯಮಗಳಿಗೆ ಮತ್ತು ಸಂವಿಧಾನಕ್ಕೆ ವಿರುದ್ಧವಾಗಿ ರೈತ–ವಿರೋಧಿ ಕಾಯ್ದೆಗಳ ಹೇರಿಕೆ ಮತ್ತು ಅವುಗಳ ಸಂವಿಧಾನಾತ್ಮಕ ಸಿಂಧುತ್ವವನ್ನು ಪರಾಮರ್ಶೆಗೆ ಒಳಪಡಿಸಲು ನ್ಯಾಯಾಂಗದ ವಿಳಂಬ ಇವನ್ನು ಬೀದಿಗಳಲ್ಲಿ ಎದುರಿಸಬೇಕಾದ ಅನಿವಾರ್ಯತೆಯನ್ನು ಸೃಷ್ಟಿ ಮಾಡಿತು. 250ಕ್ಕೂ ಹೆಚ್ಚು ರೈತ ಸಂಘಟನೆಗಳ ವೇದಿಕೆಯಾದ ಎ.ಐ.ಕೆ.ಎಸ್.ಸಿ.ಸಿ. ಕರೆಯಂತೆ ನವೆಂಬರ್ 26, 2020 ರಂದು ದೆಹಲಿ ಚಲೋದಿಂದ ಆರಂಭವಾದ ಈ ಹೋರಾಟ ಈಗ 500ಕ್ಕೂ ಹೆಚ್ಚು ರೈತ ಸಂಘಟನೆಗಳ ವೇದಿಕೆಯಾದ ಸಂಯುಕ್ತ ಕಿಸಾನ್ ಮೋರ್ಚಾದ ನೇತೃತ್ವದಲ್ಲಿ ಭಾರತದ ಎಲ್ಲಾ ವಿಭಾಗಗಳ ರೈತರನ್ನು ಮಾತ್ರವಲ್ಲ, ಎಲ್ಲ ಪ್ರಜಾಪ್ರಭುತ್ವವಾದಿ ಜನವಿಭಾಗಗಳನ್ನು ಆಕರ್ಷಿಸುತ್ತಿರುವ ಹಾಗೂ ದೇಶದಾದ್ಯಂತ ಚಳುವಳಿಗಿಳಿಸುವ ಒಂದು ಸ್ಪೂರ್ತಿಯ ಕೇಂದ್ರವಾಗಿ ರೂಪುಗೊಂಡಿದೆ.

ಟಿ.ಯಶವಂತ




# ಮೂರು ತಿಂಗಳು ದಾಟಿದ ಅನನ್ಯ ರೈತ ಹೋರಾಟ

ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ಕೃಷಿ ಕಾಯ್ದೆಗಳ ವಿರುದ್ಧದ ದೆಹಲಿ ಗಡಿಗಳಲ್ಲಿ ನಡೆಯುತ್ತಿರುವ ಹೋರಾಟ ಫೆಬ್ರುವರಿ 26ರಂದು ಮೂರು ತಿಂಗಳುಗಳನ್ನು ಪೂರೈಸಿದೆ, ಕೆಲವೇ ದಿನಗಳಲ್ಲಿ ನೂರು ದಿನ ದಾಟಲಿದೆ.

ಇಷ್ಟು ದೊಡ್ಡ ಸಂಖ್ಯೆಯಲ್ಲಿ, ಇಷ್ಟು ದೀರ್ಘಕಾಲದ ವರೆಗೂ ನಡೆಯುತ್ತಿರುವ ರೈತ ಹೋರಾಟ ಸ್ವಾತಂತ್ರ್ಯ ನಂತರದ ಭಾರತದಲ್ಲಿ ಇದುವರೆಗೂ ನಡೆದಿರಲಿಲ್ಲ. ದೀರ್ಘ ಮತ್ತು ವಿಶಾಲ ಹೋರಾಟದ ಕಾರಣಕ್ಕಾಗಿ ಈ ಭಾರತದ ರೈತ ಹೋರಾಟವನ್ನು ವಿಶ್ವದಲ್ಲೇ ಅನನ್ಯ ಹಾಗೂ ಅಪರೂಪದ್ದು ಎಂದು ಗುರುತಿಸಲಾಗುತ್ತಿದೆ.

ಸರ್ಕಾರ ನಡೆಸಿದ ಎಲ್ಲಾ ರೀತಿಯ ಗರಿಷ್ಠ ಪ್ರಮಾಣದ ದೌರ್ಜನ್ಯ ವನ್ನು ಎದುರಿಸಿ ರೈತ ಹೋರಾಟ ನಡೆಯುತ್ತಿರುವುದನ್ನು ಗಮನಿಸುತ್ತಿರುವಂತೆಯೇ, ಚಳುವಳಿಗಳ ಬೇಡಿಕೆಗಳಾದ ಕೃಷಿ ಕಾಯಿದೆ ರದ್ದು, ವಿದ್ಯುತ್ ಮಸೂದೆ 2020 ವಾಪಸ್ಸಾತಿ, ರೈತರ ಉತ್ಪನ್ನಗಳಿಗೆ ಖಾತರಿ ಕನಿಷ್ಠ ಬೆಂಬಲ ಬೆಲೆಗೆ ಕಾನೂನಿನ ರಕ್ಷಣೆ ಯನ್ನು ಒಪ್ಪಲು ಸರ್ಕಾರದ ನಿರಾಕರಣೆಯ ಮೋದಿ ಸರ್ಕಾರದ ಮೊಂಡುತನವನ್ನು ಇಡೀ ಜಗತ್ತು ಗಮನಿಸುತ್ತಿದೆ.

**ಸಮಸ್ತ ರೈತಾಪಿಗಳ ಹೋರಾಟ**

500 ಕ್ಕೂ ಹೆಚ್ಚು ರೈತ ಸಂಘಟನೆಗಳನ್ನು ಒಳಗೊಂಡ ಸಂಯುಕ್ತ ಕಿಸಾನ್ ಮೋರ್ಚಾ ನೇತೃತ್ವದಲ್ಲಿ ನಡೆಯುತ್ತಿರುವ ಮೋದಿ ಸರ್ಕಾರದ ಎಲ್ಲ ಅಪಪ್ರಚಾರ,ದಾಳಿಗಳನ್ನು ಹಿಮ್ಮೆಟ್ಟಿಸಿ ಮುನ್ನಡೆಯುತ್ತಿದೆ. ಅದು ಮೊದಲ ಸುತ್ತಿನ ಮಾತುಕತೆಗಳಲ್ಲಿ ಸರಕಾರದ ಪ್ರಸ್ತಾವಗಳಿಗೆ ಪ್ರತಿಯಾಗಿ ರೂಪಿಸಿದ **"ಸರ್ಕಾರ್ ಕೀ ಅಸ್ಲಿ ಮಜ್ಬೂರಿ, ಅಂಬಾನಿ, ಅದಾನಿ ಔರ್ ಜಮಾಖೋರಿ"**(ಸರಕಾರದ ನಿಜವಾದ ಅಸಹಾಯಕಕತೆ ಎಂದರೆ ಅಂಬಾನಿ, ಅದಾನಿ ಮತ್ತು ದಾಸ್ತಾನುಕೋರತನ) ಎಂಬ ಘೋಷಣೆ ಈ ಹೋರಾಟದ ಸಾರವನ್ನು ಬಿಂಬಿಸುತ್ತದೆ. ಈ ಮೂಲಕ ಇದು ಭಾರತದ ಎಲ್ಲಾ ವಿಭಾಗಗಳ ರೈತರನ್ನು ಆಕರ್ಷಿಸುತ್ತಿರುವ ಹಾಗೂ ದೇಶದಾದ್ಯಂತ ಚಳುವಳಿಗಿಳಿಸುವ ಒಂದು ಸ್ಪೂರ್ತಿಯ ಕೇಂದ್ರವಾಗಿ ರೂಪುಗೊಂಡಿದೆ.

ಪಂಜಾಬ್ ಹಾಗೂ ಹರ್ಯಾಣದಲ್ಲಿ ಮಾತ್ರವೇ ಅಲ್ಲದೇ ಉತ್ತರ ಪ್ರದೇಶ, ರಾಜಾಸ್ಥಾನ ಮುಂತಾದ ರಾಜ್ಯಗಳಲ್ಲೂ ಕೂಡ ದೆಹಲಿ ಹೋರಾಟ ಬೆಂಬಲಿಸುವ ಸಂಯುಕ್ತ ಕಿಸಾನ್ ಮೋರ್ಚಾ ಕರೆಗೆ ಲಕ್ಷಾಂತರ ರೈತರು ಸೇರುತ್ತಿದ್ದಾರೆ.ಇದರಿಂದ ಧೃತಿಗೆಟ್ಟಿರುವ ನರೇಂದ್ರ ಮೋದಿ ಸಂಸತ್ತಿನಲ್ಲೇ 'ಆಂದೋಲನ ಜೀವಿಗಳು' ಹಾಗೂ ವಿದೇಶಿ ವಿಧ್ವಂಸಕ ಸಿದ್ಧಾಂತ (ಎಫ್‌ಡಿಐ) ಎಂದು ತಮ್ಮ ಫ್ಯಾಸಿಸ್ಟ್ ತೆರನ ಅಸಹನೆಯನ್ನು ಹೊರ ಹಾಕಿದ್ದಾರೆ. ಖಾಸಗಿ ವಲಯದ ಟೀಕೆ ಬೇಡ ಎಂದೂ ಹೇಳಿದ್ದಾರೆ!

ಮೂರು ಸುಗ್ರೀವಾಜ್ಞೆಗಳು ಹೊರಬರುತ್ತಿದ್ದಂತೆಯೇ ಆರಂಭವಾಗಿರುವ ಈ ಹೋರಾಟ ಇಷ್ಟು ದೀರ್ಘವಾಗಿ ನಡೆಯುತ್ತಿರುವುದು ರೈತರು ಎಷ್ಟು ಕಷ್ಟದಲ್ಲಿದ್ದಾರೆ, ಬೇಸಾಯದ ವೆಚ್ಚ ಕೂಡ ಪಡೆಯಲಾರದೇ ಎಷ್ಟು ಸಂಕಷ್ಟವನ್ನು ಎದುರಿಸುತ್ತಿದ್ದಾರೆ, ಕೃಷಿ ಬಿಕ್ಕಟ್ಟಿನ ಕಾರಣದಿಂದ ಎಷ್ಟು ಅಪಾರ ಯಾತನೆ ಅನುಭವಿಸುತ್ತಿದ್ದಾರೆ ಎಂಬುದನ್ನು ತೋರಿಸುತ್ತದೆ.

ಸ್ವಾತಂತ್ರ್ಯ ನಂತರದ ಆರಂಭದ ವರ್ಷಗಳಲ್ಲಿ ಅನುಸರಿಸಿದ ಸರ್ಕಾರದ ಧೋರಣೆಗಳು ಕೃಷಿಯಲ್ಲಿ ಸಾರ್ವಜನಿಕ ಹೂಡಿಕೆಯನ್ನು ನಿರಂತರವಾಗಿ ಹೆಚ್ಚಿಸುತ್ತಾ ಹಸಿರು ಕ್ರಾಂತಿಯ ಸಂದರ್ಭದಲ್ಲಿ ಉತ್ಪಾದನೆ ಹಾಗೂ ಉತ್ಪಾದಕತೆ ಯ ಹೆಚ್ಚಳದ ಗುರಿ ಮುಟ್ಟುವಲ್ಲಿ ಸಫಲವಾದವು.ಆದರೆ ಅದೇ ಸಂದರ್ಭದಲ್ಲಿ ಅರ್ಥಪೂರ್ಣ ಭೂಸುಧಾರಣೆ ಯಂತಹ ಕ್ರಮಗಳು ಆಗದೇ ಇದ್ದುದರಿಂದ ಇದರ ಫಲ ಬಹಳ ದೊಡ್ಡ ಸಂಖ್ಯೆಯ ರೈತರಿಗೆ ಸಿಗಲಿಲ್ಲ. ಇಂತಹ ಕೃಷಿ ಬಿಕ್ಕಟ್ಟಿನ ಪರಿಸ್ಥಿತಿಯ ರೈತ ಜೀವನದ ಮೇಲೆ 1990 ರ ದಶಕದಲ್ಲಿ ಅಂತರಾಷ್ಟ್ರೀಯ ಹಣಕಾಸು ನಿರ್ದೇಶಿತ ನವ ಉದಾರೀಕರಣ ಆರ್ಥಿಕ ಧೋರಣೆಗಳನ್ನು ಹೇರಲಾಯಿತು. ಇದು ಈ ಕೃಷಿ ಬಿಕ್ಕಟ್ಟನ್ನು ಮತ್ತಷ್ಟು ಉಲ್ಬಣಿಸಿ ರೈತ ಆತ್ಮಹತ್ಯೆ–ಹತಾಶ ವಲಸೆಗಳನ್ನು ಕಾಣುವಂತಾಯಿತು.

ದೇಶದ ಜಿಡಿಪಿ ಯಲ್ಲಿ ಶೇ 14 ರಷ್ಟು ಇರುವ ಕೃಷಿ ಕ್ಷೇತ್ರ ದ ಮೇಲೆ ನಮ್ಮ ಒಟ್ಟು ಜನಸಂಖ್ಯೆಯ ಸುಮಾರು ಶೇ 60 ರಷ್ಟು ಜನರು ಅವಲಂಬಿತರಾಗಿದ್ದಾರೆ ಎನ್ನುವುದೇ ಕೃಷಿ ಬಿಕ್ಕಟ್ಟಿನ ಶೋಚನೀಯ ದುಸ್ಥಿತಿಯನ್ನು ವಿವರಿಸುತ್ತದೆ. ಸರ್ಕಾರ ಹೇಳುವಂತೆ ಈ ಹೋರಾಟ ಕೇವಲ ಶ್ರೀಮಂತ ರೈತರು ನಡೆಸುತ್ತಿರುವ ಹೋರಾಟ ಅಲ್ಲ. ಶ್ರೀಮಂತ ರೈತರೂ ಕೂಡ ಗಣನೀಯವಾಗಿ ಭಾಗವಹಿಸಿರುವ ಇಡೀ ರೈತಾಪಿ ಸಮುದಾಯದ ಒಂದು ವರ್ಗ ಹೋರಾಟ. ಈ ಹೋರಾಟದ ಹಿಂದೆ ಇರುವ ಪ್ರೇರಕ ಶಕ್ತಿ ನರೇಂದ್ರ ಮೋದಿ ಹೇಳುತ್ತಿರುವಂತೆ ವಿದೇಶಿ ವಿಧ್ವಂಸಕ ಸಿದ್ಧಾಂತ ಅಲ್ಲ; ಬದಲಾಗಿ ವಿಶ್ವ ವಾಣಿಜ್ಯ ಸಂಸ್ಥೆ (ಡಬ್ಲ್ಯುಟಿಒ) ಒಪ್ಪಂದಗಳಿಂದಾದ ಉದಾರೀಕರಣ ಧೋರಣೆಗಳು ಉಂಟು ಮಾಡಿದ ಇಡೀ ಗ್ರಾಮೀಣ ಜೀವನವನ್ನೇ ದಿವಾಳಿಗೆ ನೂಕಿರುವ ಅಸಹನೀಯ ಜೀವನ ಮತ್ತು ಕೃಷಿ ಪರಿಸ್ಥಿತಿ.

**ಕೃಷಿ ಕಾಯ್ದೆಗಳ ಗುರಿ ಏನು?**

2008 ರಿಂದ ಇಡೀ ಜಗತ್ತು ಒಂದು ಬಹುದೊಡ್ಡ ಆರ್ಥಿಕ ಬಿಕ್ಕಟ್ಟಿನಲ್ಲಿ ಇದೆ. ಭಾರತದಂತಹ ಅಭಿವೃದ್ಧಿ ಶೀಲ ದೇಶಗಳ ಮೇಲೆ ಆರ್ಥಿಕ ಬಿಕ್ಕಟ್ಟು ಬಹಳ ತೀವ್ರವಾದ ದುಷ್ಪರಿಣಾಮಗಳನ್ನು ಉಂಟು ಮಾಡುತ್ತಿದೆ. ಇಂತಹ ಒಂದು ಜಾಗತಿಕ ಸನ್ನಿವೇಶದಲ್ಲಿ ಭಾರತದ ದುಡಿಯುವ ಜನತೆಯ ಹಿತ ಕಾಪಾಡುವ, ಅವರ ಉದ್ಯೋಗ ಮತ್ತು ಜೀವನ ರಕ್ಷಿಸುವ ಬೇಡಿಕೆ ಕೇಂದ್ರಿತ ಆರ್ಥಿಕ ಚೇತರಿಕೆ ಕ್ರಮಗಳನ್ನು ಕೈಗೊಳ್ಳುವ ಬದಲು ಕೇವಲ ಕಾರ್ಪೊರೇಟ್ ಹಿತಗಳನ್ನು ರಕ್ಷಿಸುವ ಹೂಡಿಕೆ ಕೇಂದ್ರಿತ ಆರ್ಥಿಕ ಚೇತರಿಕೆ ಕ್ರಮಗಳನ್ನು ಮೋದಿ ಸರ್ಕಾರ ಅನುಸರಿಸುತ್ತಿದೆ. ಇದರ ಪರಿಣಾಮವಾಗಿ ಈಗ ಎಲ್ಲೆಡೆ 'ಕರೋನಾ ವೈರಸ್ ' ಗಿಂತ 'ಅಸಮಾನತೆ ವೈರಸ್' ಎಂಬುದು ಬಹಳ ಭೀಕರವಾಗಿದೆ ಎಂದೇ ವರ್ಣಿಸಲಾಗುತ್ತಿದೆ.

2008 ರ ಮೊದಲು ಖಾಸಗಿ ಕಾರ್ಪೊರೇಟ್ ಹೂಡಿಕೆ ಜಿಡಿಪಿ ಯ 6.2% ನಿಂದ 16.8% ವರೆಗೆ ಏರಿಕೆ ಆಗಿತ್ತು. 2008 ರ ನಂತರದ ಕೇವಲ 5 ವರ್ಷದಲ್ಲಿ ಹೂಡಿಕೆ ನಿಂತಲ್ಲೇ ನಿಂತು ಗಿರಕಿ ಸುತ್ತುತ್ತಿದೆ. ಒಟ್ಟಾರೆ ಬೇಡಿಕೆಯಲ್ಲಿ ಆದ ಕುಸಿತವು ಹೂಡಿಕೆಯನ್ನು ನಿಧಾನಗೊಳಿಸಿದೆ. ಖಾಸಗಿ ಕಾರ್ಪೊರೇಟ್ ಹೂಡಿಕೆ 2015–16 ರಲ್ಲಿ ಜಿಡಿಪಿ ಯ 11.6% ಇದ್ದುದ್ದು 2018–19 ರಲ್ಲಿ 10.3% ಕ್ಕೆ ಕುಸಿದಿದೆ.ಕೋವಿಡ್ ಗಿಂತ ಮೊದಲೇ ಮತ್ತಷ್ಟು ಕುಸಿಯುವುದನ್ನು ತಡೆಯುವ ಆರ್ಥಿಕ ಪುನಶ್ಚೇತನ ಕ್ರಮಗಳನ್ನು ಅನುಸರಿಸಲೇಬೇಕಾದ ಪರಿಸ್ಥಿತಿ ಇತ್ತು.

ಕೋವಿಡ್ ನ ಸಂದರ್ಭದಲ್ಲಿ ಅಗತ್ಯ ಪರಿಹಾರ ಮತ್ತು ಉದ್ಯೋಗ ಉಳಿಸುವ ಆರ್ಥಿಕ ಚೇತರಿಕೆಯ ಕ್ರಮಗಳಿಲ್ಲದೇ ಈ ಪರಿಸ್ಥಿತಿ ಮತ್ತಷ್ಟು ಉಲ್ಬಣಗೊಂಡಿದೆ. ಒಂದು ಕಡೆ ಕಾರ್ಪೊರೇಟ್ ಗಳಿಗೆ ಬೃಹತ್ ಪ್ರಮಾಣದಲ್ಲಿ ನೀಡುತ್ತಿರುವ ತೆರಿಗೆ ವಿನಾಯಿತಿ ಹಾಗೂ ಹಣಕಾಸು ಬೆಂಬಲ ಆರ್ಥಿಕತೆಯನ್ನು ನುಚ್ಚು ನೂರು ಮಾಡಿದ್ದರೆ, ಇನ್ನೊಂದು ಕಡೆ ತೆರಿಗೆ ಸಂಗ್ರಹದ ಗುರಿ ತಲುಪುವಲ್ಲಿ ಕೂಡ ಗಣನೀಯ ವೈಫಲ್ಯ ಕಾಣುತ್ತಿದೆ. ಹಾಗಾಗಿಯೇ ಖಾಸಗಿ ಕಾರ್ಪೊರೇಟ್ ಹೂಡಿಕೆ ಉತ್ತೇಜಿಸುವ ಮೋದಿ 'ಮಂತ್ರದಂಡ' ಕೆಲಸ ಮಾಡುತ್ತಿಲ್ಲ.ಇಂತಹ ಸನ್ನಿವೇಶದ ಹಿನ್ನೆಲೆಯಲ್ಲಿ ದೊಡ್ಡ ಬಂಡವಾಳದಾರ ಕಾರ್ಪೊರೇಟ್ ಹಿತಾಸಕ್ತಿ ಕಾಯ್ದುಕೊಳ್ಳಲು ಸಾರ್ವಜನಿಕ ಸ್ವತ್ತು ಗಳನ್ನೇ ಹಸ್ತಾಂತರ ಮಾಡುತ್ತಿದೆ.

ಕರೋನ ಪರಿಸ್ಥಿತಿ ಯನ್ನು ಕಾರ್ಪೊರೇಟ್ ಪರವಾದ ಧೋರಣೆ ಅನುಸರಿಸಲು ಸುಸಂದರ್ಭ

ಪುಟ 12 ನೋಡಿ

## ಮಾದರಿ ಎಂ.ಎಸ್.ಪಿ. ಮಸೂದೆಯನ್ನು ಪ್ರಸ್ತುತಪಡಿಸಿದ ಅಖಿಲ ಭಾರತ ಕಿಸಾನ್ ಸಭಾ

**ಬೆಳೆಗಳ ಕನಿಷ್ಠ ಬೆಂಬಲ ಬೆಲೆ (ಎಂ.ಎಸ್.ಪಿ.) ಕುರಿತಂತೆ ಒಂದು ಕಾನೂನು ಬೇಕೆಂಬ ರೈತರ ಆಗ್ರಹವನ್ನು ಅಖಿಲ ಭಾರತ ಕಿಸಾನ್ ಸಭಾ(ಎ.ಐ.ಕೆ.ಎಸ್.) ಒಂದು ಹೆಜ್ಜೆ ಮುಂದಕ್ಕೆ ಒಯ್ದಿದೆ. ಫೆಬ್ರುವರಿ 19ರಂದು ಪತ್ರಿಕಾಗೋಷ್ಠಿಯಲ್ಲಿ ಅದು ಸ್ವಾಮಿನಾಥನ್ ಆಯೋಗದ. ಶಿಫಾರಸುಗಳಿಗೆ ಅನುಗುಣವಾಗಿ ಉತ್ಪಾದನಾ ವೆಚ್ಚಕ್ಕಿಂತ 50% ಹೆಚ್ಚುವರಿಯನ್ನು ಖಚಿತಪಡಿಸುವ ಮತ್ತು ಎಂ.ಎಸ್.ಪಿ ಉಲ್ಲಂಘನೆಯನ್ನು ಅಪರಾಧವನ್ನಾಗಿ ಮಾಡುವ ಒಂದು ಮಾದರಿ ಎಂಎಸ್‌ಪಿ ಮಸೂದೆಯನ್ನು ಬಿಡುಗಡೆ ಮಾಡಿದೆ.**

ಮೂರು ಕೃಷಿ ಕಾಯ್ದೆಗಳ ವಿರುದ್ಧ ಮತ್ತು ಎಂಎಸ್‌ಪಿಯ ಕಾನೂನು ಖಾತರಿಯ ಬೇಡಿಕೆಯೊಂದಿಗೆ ಸುಮಾರು ಮೂರು ತಿಂಗಳಿಂದ ದಿಲ್ಲಿಯ ಗಡಿಗಳಿಂದ ರೈತರು ನಡೆಸಿರುವ ಆಂದೋಲನದ ನಡುವೆ ಪ್ರಸ್ತುತ ಪಡಿಸಿರುವ ಈ ಮಸೂದೆಯು ಕೃಷಿ ಉತ್ಪನ್ನಗಳಿಗೆ ನ್ಯಾಯಯುತ ಮತ್ತು ಫಲದಾಯಕ ಬೆಲೆಯನ್ನು ಖಚಿತಪಡಿಸುತ್ತದೆ. ಇದು ಎಂ.ಎಸ್.ಪಿ.ಯನ್ನು ಸಮಗ್ರ ವೆಚ್ಚ (ಸಿ 2) ಕ್ಕೆ 50% ವನ್ನು ಸೇರಿಸುತ್ತದೆ. ಡಾ. ಎಂ.ಎಸ್. ಸ್ವಾಮಿನಾಥನ್ ನೇತೃತ್ವದ ರೈತರ ರಾಷ್ಟ್ರೀಯ ಆಯೋಗವು ಎಂ.ಎಸ್.ಪಿ. ಗೆ ಸಿ 2 + 50% ಸೂತ್ರವನ್ನು ಶಿಫಾರಸು ಮಾಡಿತ್ತು. ಇಲ್ಲಿ, ಸಿ 2 ಕುಟುಂಬ ಶ್ರಮ, ಸ್ವಂತ ಜಮೀನಿನ ಬಾಡಿಗೆ ಮತ್ತು ಸ್ವಂತ ಬಂಡವಾಳದ ಮೇಲಿನ ಬಡ್ಡಿಯ ಅಂಶಗಳನ್ನು ಒಳಗೊಂಡಿದೆ.

ಪ್ರಸಕ್ತ ಬಜೆಟ್ ಅಧಿವೇಶನದ ಎರಡನೇ ಭಾಗದಲ್ಲಿ ಮಸೂದೆಯನ್ನು ಖಾಸಗಿ ಸದಸ್ಯರ ಮಸೂದೆಯಾಗಿ ಸಂಸತ್ತಿನಲ್ಲಿ ಮಂಡಿಸಬೇಕೆಂದಿದ್ದೇವೆ ಎಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತ ಎ.ಐ.ಕೆ.ಎಸ್. ಮುಖಂಡರು ತಿಳಿಸಿದ್ದಾರೆ.

**ಪ್ರಧಾನಿಗಳಿಂದ ದಾರಿ ತಪ್ಪಿಸುವ ಪ್ರಯತ್ನ**

ರಾಜ್ಯಸಭೆ ಮತ್ತು ಲೋಕಸಭೆ ಎರಡರಲ್ಲೂ ಮಾತನಾಡಿದ ಪ್ರಧಾನಿ, ಪ್ರತಿಭಟನಾ ನಿರತ ರೈತರು ಸುಧಾರಣೆಗೆ ಸಿದ್ಧರಿಲ್ಲ ಮತ್ತು ಯಥಾಸ್ಥಿತಿ ಕಾಯ್ದುಕೊಳ್ಳ ಬಯಸುತ್ತಿದ್ದಾರೆ ಎಂದು ಆರೋಪಿಸಿದ್ದರು. ಇದಕ್ಕಿಂತ



ಸತ್ಯದೂರವಾದ ಮಾತು ಇನ್ನೇನೂ ಇರಲಿಕ್ಕಿಲ್ಲ ಎಂದಿರುವ ಈ ಸಂದರ್ಭದಲ್ಲಿ ಎ.ಐ.ಕೆ.ಎಸ್. ಪ್ರಕಟಿಸಿರುವ ಪತ್ರಿಕಾ ಹೇಳಿಕೆ, ರೈತರು ವಿರೋಧಿಸುತ್ತಿರುವುದು ಕಾರ್ಪೊರೇಟ್ ಪರ ಸುಧಾರಣೆ ಗಳನ್ನೇ ಹೊರತು ಒಟ್ಟು ಕೃಷಿ ಸುಧಾರಣೆ ಗಳನ್ನಲ್ಲ ಎಂದು ಸ್ಪಷ್ಟಪಡಿಸಿದೆ. ಕಾರ್ಪೊರೇಟ್ ಪರವಾದ ಪಕ್ಷಪಾತದಿಂದಾಗಿ ಪ್ರಧಾನಿ ಉದ್ದೇಶಪೂರ್ವಕವಾಗಿ ಜನರನ್ನು ದಾರಿ ತಪ್ಪಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಅದು ಹೇಳಿದೆ.

ಜನರನ್ನು ದಾರಿ ತಪ್ಪಿಸುವ ಉದ್ದೇಶಪೂರ್ವಕ ಅಭಿಯಾನದ ಒಂದು ಭಾಗ. **'ಎಂ.ಎಸ್.ಪಿ.ಇತ್ತು, ಇದೆ ಮತ್ತು ಇರುತ್ತದೆ'** ಎಂದು ಪ್ರಧಾನ ಮಂತ್ರಿಗಳು ಟಿಪ್ಪಣಿ ಮಾಡಿದ್ದರು. ನರೇಂದ್ರ ಮೋದಿ ಮತ್ತು ಬಿಜೆಪಿ 2014 ರ ಲೋಕಸಭಾ ಚುನಾವಣಾ ಪ್ರಣಾಳಿಕೆಯಲ್ಲಿ ಉತ್ಪಾದನಾ

ಪುಟ 14 ನೋಡಿ

## ವಿಜ್ಞಾನ, ತಂತ್ರಜ್ಞಾನ ಮತ್ತು ಹೊಸಶೋಧ ನೀತಿ (STIP 2020)




# ಕೈಗಾರಿಕಾ ಕ್ರಾಂತಿಯ ನಾಲ್ಕನೇ ಅಲೆಯಲ್ಲಿ ಸಹ ಭಾರತ ಹಿಂದೆ ಬೀಳುತ್ತಾ?

**ಭಾರತ ಕೈಗಾರಿಕಾ ಕ್ರಾಂತಿಯ ಮೂರನೇ ಅಲೆಯ ಸೃಷ್ಟಿಯಲ್ಲಿ ಕೆಲವು ಅಪವಾದಗಳನ್ನು ಬಿಟ್ಟರೆ, ದೊಡ್ಡ ಪ್ರಮಾಣದಲ್ಲಿ ಭಾಗವಹಿಸಲಿಲ್ಲ. ದೊಡ್ಡ ರೀತಿಯಲ್ಲಿ ಅದರ ಭಾಗವಾಗಲಿಲ್ಲ. ಮೂರನೇ ಅಲೆಯ ಭಾಗವಾಗಲು, ಭಾಗವಹಿಸಲು ಭಾರತ ಸಾಕಷ್ಟು ಪ್ರಯತ್ನ ಮಾಡಿದರೂ ಯಾಕೆ ವಿಫಲವಾಯ್ತು ಎಂಬುದರ ಕುರಿತು ವಿಶ್ಲೇಷಣೆ ಮಾಡುವುದು ಈ ನೀತಿಯ ಪ್ರಮುಖ ಭಾಗವಾಗಬೇಕಿತ್ತು. ಇದರ ಆಧಾರದ ಮೇಲೆ ಈಗ ಆರಂಭವಾಗಿರುವ ಕೈಗಾರಿಕಾ ಕ್ರಾಂತಿಯ (5G ಮೊಬೈಲ್ ಜಾಲ-AI ಕೃತಕ ಬುದ್ಧಿಮತ್ತೆ-IoT ಉಪಕರಣಗಳ ಅಂತರ್ಜಾಲ, ಸ್ವಯಂ-ಚಾಲಿತ ವಿದ್ಯುತ್ ವಾಹನಗಳು ಇತ್ಯಾದಿಗಳ) ನಾಲ್ಕನೇ ಅಲೆ'ಯ ಸೃಷ್ಟಿಯಲ್ಲಿ ಪ್ರಮುಖ ಪಾತ್ರ ವಹಿಸುವುದು ಮತ್ತು ಅದರ ಭಾಗವಾಗುವುದು ಹೇಗೆ? ನಾಲ್ಕನೆಯ ಅಲೆಯಲ್ಲಿ ಸಹ ಭಾರತವು ಬೈ ಪಾಸ್ ಆಗದಂತೆ ಮಾಡುವುದು ಹೇಗೆ? ಎಂಬುದರ ಬಗ್ಗೆ ದಸ್ತಾವೇಜು ಹಾದಿ ತೋರಿಸಬೇಕಿತ್ತು. ಆದರೆ ಇಂತಹ ಯಾವ ಪ್ರಯತ್ನವೂ ಈ ದಸ್ತಾವೇಜಿನಲ್ಲಿ ಕಾಣುವುದಿಲ್ಲ.**




ವಸಂತರಾಜ ಎನ್.ಕೆ.

ಭಾರತ ಸರಕಾರ "ವಿಜ್ಞಾನ, ತಂತ್ರಜ್ಞಾನ ಮತ್ತು ಹೊಸಶೋಧ ನೀತಿ 2020" (Science, Technology and Innovation Policy 2020 - STIP 2020) ನ್ನು ಡಿಸೆಂಬರ್ 2020ರಲ್ಲಿ ಸಾರ್ವಜನಿಕ ಸಮಾಲೋಚನೆ ಬಿಡುಗಡೆ ಮಾಡಿ ಜನವರಿ 31, 2021ರೊಳಗೆ ಸಲಹೆ-ಸೂಚನೆಗಳನ್ನು ನೀಡುವಂತೆ ತಿಳಿಸಿದೆ. ಕೆಲವು ವಿಜ್ಞಾನಿಗಳು ಮತ್ತು ಪರಿಣತರ ಜೊತೆಗೆ ಮಾತ್ರ ಈ ನೀತಿಯನ್ನು ರೂಪಿಸುವ ಮೊದಲು ಸಮಾಲೋಚನೆ ಮಾಡಲಾಯಿತು ಮತ್ತು ನೀತಿ ಬಿಡುಗಡೆ ಮಾಡಿದ ನಂತರ ಸಾಕಷ್ಟು ಸಮಯ ಕೊಡಲಾಗಿಲ್ಲ. ನೀತಿ ರೂಪಿಸುವ ಮೊದಲು ಮತ್ತು ನಂತರ ಅಗತ್ಯವಾದಷ್ಟು ವ್ಯಾಪಕ ಸಮಾಲೋಚನೆ ಪರಾಮರ್ಶೆ ಮಾಡದಿರುವುದು ವಿಜ್ಞಾನಿ ಸಮುದಾಯದಲ್ಲಿ ಅತೃಪ್ತಿಗೆ ಕಾರಣವಾಗಿದೆ. ಯಾವುದೇ ನೀತಿಯ ಕುರಿತು ಅದನ್ನು ರೂಪಿಸುವ ಮೊದಲಾಗಲಿ ನಂತರವಾಗಲಿ ಬರುವ ಸಲಹೆ ಸೂಚನೆಯ ಅಂಶಗಳನ್ನು ಸ್ವೀಕರಿಸುವಲ್ಲಿ ಈಗಿನ ಸರಕಾರ ಎಷ್ಟು ತೆರೆದ ಮನಸ್ಸು ಹೊಂದಿದೆ ಎಂಬುದು ಕೃಷಿ ಕಾನೂನುಗಳು, ಕಾರ್ಮಿಕ ಕಾನೂನುಗಳು ಮತ್ತು ನೂತನ ಶಿಕ್ಷಣ ನೀತಿಯ ಸಂದರ್ಭದಲ್ಲಿ ಸ್ಪಷ್ಟವಾಗಿದೆ. ಜಾಗತಿಕ ಬಂಡವಾಳದ ಪ್ರತಿನಿಧಿಗಳು ಮತ್ತು ಆಳುವ ಪಕ್ಷದ "ಚಿಂತನ ಅಗ್ರಹಾರ"ಗಳು ರೂಪಿಸಿದ ನೀತಿಗಳನ್ನು ದೇಶದ ಜನತೆಯ ಗಂಟಲಲ್ಲಿ ತುರುಕುವುದು ಮತ್ತು ಅದರ ವಿರುದ್ಧ ಬರುವ ಯಾವುದೇ ಸಲಹೆ-ಸೂಚನೆಗಳನ್ನು ನಿರ್ಲಕ್ಷಿಸುವುದು ಈ ಸರಕಾರದ ಆಡಳಿತ ಶೈಲಿಯಾಗಿದೆ. ಆದರೂ ಸೀಮಿತ ಸಮಯದಲ್ಲೂ ದೇಶದಾದ್ಯಂತ ಈ ನೀತಿಯ ಕುರಿತು ಜನ ವಿಜ್ಞಾನ ಚಳುವಳಿಗಳು ಸಂಘಟನೆಗಳು ಚಿಂತನ ಸಭೆ, ಗೋಷ್ಠಿಗಳನ್ನು ನಡೆಸಿ ವಿವಿಧ ವಿಭಾಗಗಳ ಪರಿಣತರು ಮತ್ತು ಆಸಕ್ತರ ಅಭಿಪ್ರಾಯಗಳನ್ನು ಕ್ರೋಢಿಕರಿಸಿ ಸರಕಾರಕ್ಕೆ ಸಲಹೆ-ಸೂಚನೆಗಳನ್ನು ಸಲ್ಲಿಸಿವೆ. ಅದರ ಕೆಲವು ಪ್ರಮುಖ ಅಂಶಗಳು ಇಲ್ಲಿವೆ.

ಮೊದಲನೆಯದಾಗಿ, ಹಿಂದಿನ ವಿಜ್ಞಾನ-ತಂತ್ರಜ್ಞಾನ ನೀತಿಗಳಿಗೆ ಹೋಲಿಸಿದರೆ ಈ ನೀತಿ ಹೊಸದು ಎಂಬ ಸರಕಾರದ ಹೇಳಿಕೆ ಬಗ್ಗೆ ನೋಡೋಣ. ಹಿಂದಿನ ಕೈಗಾರಿಕಾ ನೀತಿ ನಿರ್ಣಯ (1956), ವಿಜ್ಞಾನ ನೀತಿ ನಿರ್ಣಯ (1958), ತಂತ್ರಜ್ಞಾನ ನೀತಿ ಹೇಳಿಕೆ (1983)ಗಳ ರೂಪಿಸುವಿಕೆಯ ಪ್ರಕ್ರಿಯೆ ಮತ್ತು ಆ ನೀತಿ ಹೇಳಿಕೆಗಳು ಸಹ ದೇಶದ ಒಟ್ಟಾರೆ ಬೆಳವಣಿಗೆಯ ರಣನೀತಿಯೊಂದಿಗೆ ಆಳವಾಗಿ ತಳುಕು ಹಾಕಿಕೊಂಡಿದ್ದವು. ಕೈಗಾರಿಕೀಕೃತ, ಸ್ವಾವಲಂಬಿ, ಆಧುನಿಕ ಕಲ್ಯಾಣ ಪ್ರಭುತ್ವ ಆಧಾರಿತ ಯೋಜಿತ ಬೆಳವಣಿಗೆ ದೇಶದ ಒಟ್ಟಾರೆ ಬೆಳವಣಿಗೆಯ ರಣನೀತಿಯಾಗಿತ್ತು. ಇವುಗಳಿಂದ 2020ರ ನೀತಿ ಪೂರ್ಣವಾಗಿ ಭಿನ್ನವಾಗಿದೆ. ಆದರೆ 1980ರ ದಶಕದಲ್ಲಿ 'ಉದಾರೀಕರಣ' ನೀತಿಗಳು ಆರಂಭವಾಗಿ ಕೇಂದ್ರೀಕೃತ ಯೋಜನೆ ಮತ್ತು ಪ್ರಭುತ್ವ ಎರಡೂ ಬೆಳವಣಿಗೆಯ ನೀತಿಗಳ ನಿರ್ಣಯದಿಂದ ಹಿಂದೆ ಸರಿಯಲು ಆರಂಭಿಸಿದ ನಂತರ ಬಂದ 2003 ಮತ್ತು 2013 ರ ವಿಜ್ಞಾನ-ತಂತ್ರಜ್ಞಾನ ನೀತಿಗಳಿಂದ ಬಹಳ ಭಿನ್ನವಾಗಿಲ್ಲ. ಈ ನೀತಿಗಳಲ್ಲಿ ಇದ್ದಂತೆ ವಿಜ್ಞಾನ-ತಂತ್ರಜ್ಞಾನ ಬೆಳವಣಿಗೆಯಲ್ಲಿ ಪ್ರಭುತ್ವದ ನಿರ್ಣಾಯಕ ಮತ್ತು ಪ್ರಮುಖ ಪಾತ್ರದ ಬದಲಾಗಿ, ಬರಿಯ ಪೋಷಕ ಪಾತ್ರಕ್ಕೆ ಸೀಮಿತವಾಗಿದೆ. STIP 2020 'ವಿಜ್ಞಾನ, ತಂತ್ರಜ್ಞಾನ ಮತ್ತು ಹೊಸಶೋಧಗಳನ್ನು ಬಿಡಿಬಿಡಿಯಾಗಿ ನೋಡದೆ ಒಟ್ಟಾಗಿ ನೋಡಿ ಅವುಗಳ ಮೌಲ್ಯವರ್ಧನೆಯನ್ನು ಹೆಚ್ಚಿಸುತ್ತದೆ' ಎಂದು ಹೇಳಿಕೊಳ್ಳುತ್ತದೆ. ಆದರೆ ಸಮಕಾಲೀನ ವಾಸ್ತವ ಗಟ್ಟಿ ನೆಲದಲ್ಲಿ ನಿಲ್ಲದಿರುವುದರಲ್ಲಿ ಮತ್ತು ಭವಿಷ್ಯದ ಕುರಿತು ಯಾವುದೇ ಸ್ಪಷ್ಟ ಹಾದಿ ತೋರುವುದರಲ್ಲಿ ವಿಫಲವಾಗುವುದರಲ್ಲಿ ಮಾತ್ರ ಇದು ಹಿಂದಿನ ನೀತಿಗಳಿಗಿಂತ ಪೂರ್ಣವಾಗಿ ಭಿನ್ನವಾಗಿದೆ ಎಂದು ಹೆಚ್ಚಿನ ಜನ ವಿಜ್ಞಾನ ಚಳುವಳಿಗಳು ಸಂಘಟನೆಗಳು, ಪರಿಣತ ವಿಜ್ಞಾನಿಗಳು ಅಭಿಪ್ರಾಯ ಪಟ್ಟಿದ್ದಾರೆ.

### ಬೇರುಗಳೇ ಇಲ್ಲದ ಮರ

ಈಗಿನ ಭಾರತದ ವಿಜ್ಞಾನ-ತಂತ್ರಜ್ಞಾನ ಶಕ್ತಿ-ಸಾಮರ್ಥ್ಯ (ಮಾನವ ಸಂಪನ್ಮೂಲ, ಸಂಶೋಧನಾ ಸಂಸ್ಥೆಗಳು, ಮೂಲಸೌಕರ್ಯ, ಕಾರ್ಯಕ್ರಮಗಳು, ಅದರಲ್ಲಿ ಹೂಡಿಕೆ ಇತ್ಯಾದಿಗಳ ಮೇಲೆ ಆಧರಿಸಿ) ವಾಸ್ತವ, ಅದರ ಸಫಲತೆ-ವೈಫಲ್ಯಗಳ ಪರಾಮರ್ಶೆ ಮತ್ತು ಇಂದಿನ ಜಾಗತಿಕ ವಿಜ್ಞಾನ-ತಂತ್ರಜ್ಞಾನ ಬೆಳವಣಿಗೆಯ ಹಾದಿಯನ್ನು ಗಮನದಲ್ಲಿಟ್ಟುಕೊಂಡು ಈ ನೀತಿಯನ್ನು ರೂಪಿಸಲಾಗಿಲ್ಲ. ಸರಕಾರದ ಒಳಗೆ ಸಹ ವಿಜ್ಞಾನ-ತಂತ್ರಜ್ಞಾನಗಳಿಂದ ನಿರ್ಣಾಯಕವಾಗಿ ಪ್ರಭಾವಿತವಾಗುವ ಇತರ ಸಚಿವಾಲಯಗಳ ಬೇಕು-ಬೇಡಗಳು, ಸಲಹೆ ಸೂಚನೆಗಳು ಅಥವಾ ಮಾಹಿತಿಯನ್ನು ಗಣನೆಗೆ ತೆಗೆದುಕೊಂಡಿಲ್ಲ. ಉದಾಹರಣೆಗೆ, ಭಾರತ ಕೈಗಾರಿಕಾ ಕ್ರಾಂತಿಯ (ಮೈಕ್ರೋ-ಇಲೆಕ್ಟ್ರಾನಿಕ್ಸ್, ಸಾಫ್ಟ್ ವೇರ್, ರೊಬೊಟ್ ಸ್ವಯಂ-ಚಾಲಿತ ತಯಾರಿಕೆ, ಟೆಲಿಕಾಂ-ನೆಟ್, ಜೈವಿಕ ತಂತ್ರಜ್ಞಾನ, ಹೊಸ ಕೃತಕ ಭೌತವಸ್ತುಗಳು ಇತ್ಯಾದಿ ಇರುವ) ಮೂರನೇ ಅಲೆಯ ಸೃಷ್ಟಿಯಲ್ಲಿ (ಸಾಫ್ಟ್ ವೇರ್ ಸೇವೆ ಮತ್ತು ಔಷಧಿ ಸಾಮೂಹಿಕ ತಯಾರಿಕೆಗಳಲ್ಲಿ ಗಮನಾರ್ಹ ಪಾತ್ರದ ಅಪವಾದಗಳನ್ನು ಬಿಟ್ಟರೆ) ದೊಡ್ಡ ಪ್ರಮಾಣದಲ್ಲಿ ಭಾಗವಹಿಸಲಿಲ್ಲ. ದೊಡ್ಡ ರೀತಿಯಲ್ಲಿ ಅದರ ಭಾಗವಾಗಲಿಲ್ಲ. ಕೈಗಾರಿಕಾ ಕ್ರಾಂತಿಯ ಮೂರನೆಯ ಅಲೆಯು ಭಾರತವನ್ನು ಬೈ ಪಾಸ್ ಮಾಡಿತು ಎಂದು ಹೇಳಲಾಗುತ್ತದೆ. ಮೂರನೇ ಅಲೆಯ ಭಾಗವಾಗಲು, ಭಾಗವಹಿಸಲು ಭಾರತ ಸಾಕಷ್ಟು ಪ್ರಯತ್ನ ಮಾಡಿದರೂ ಯಾಕೆ ವಿಫಲವಾಯ್ತು ಎಂಬುದರ ಕುರಿತು ವಿಶ್ಲೇಷಣೆ ಮಾಡುವುದು ಈ ನೀತಿಯ ಪ್ರಮುಖ ಭಾಗವಾಗಬೇಕಿತ್ತು. ಇದರ ಆಧಾರದ ಮೇಲೆ ಈಗ ಆರಂಭವಾಗಿರುವ ಕೈಗಾರಿಕಾ ಕ್ರಾಂತಿಯ (5G ಮೊಬೈಲ್ ಜಾಲ-AI ಕೃತಕ ಬುದ್ಧಿಮತ್ತೆ-IoT ಉಪಕರಣಗಳ ಅಂತರ್ಜಾಲ, ಸ್ವಯಂ-ಚಾಲಿತ ವಿದ್ಯುತ್ ವಾಹನಗಳು ಇತ್ಯಾದಿಗಳ) ನಾಲ್ಕನೇ ಅಲೆಯ ಸೃಷ್ಟಿಯಲ್ಲಿ ಪ್ರಮುಖ ಪಾತ್ರ ವಹಿಸುವುದು ಮತ್ತು ಅದರ ಭಾಗವಾಗುವುದು ಹೇಗೆ? ನಾಲ್ಕನೆಯ ಅಲೆಯಲ್ಲಿ ಸಹ ಭಾರತವು ಬೈ ಪಾಸ್ ಆಗದಂತೆ ಮಾಡುವುದು ಹೇಗೆ? ಎಂಬುದರ ಬಗ್ಗೆ ದಸ್ತಾವೇಜು ಹಾದಿ ತೋರಿಸಬೇಕಿತ್ತು. ಆದರೆ ಇಂತಹ ಯಾವ ಪ್ರಯತ್ನವೂ ಈ ದಸ್ತಾವೇಜಿನಲ್ಲಿ ಕಾಣುವುದಿಲ್ಲ.

ಈ ನೀತಿ ಭಾರತದ ವಿಜ್ಞಾನ-ತಂತ್ರಜ್ಞಾನವನ್ನು ಗೊತ್ತುಗುರಿಯಿಲ್ಲದೆ ಹಾರಲು ಬಿಟ್ಟ ಆಕಾಶಬುಟ್ಟಿಯಂತೆ ಭಾವಿಸುತ್ತದೆ ಮತ್ತು ಆ ರೀತಿ ಅದನ್ನು ಮಾಡಲು ಹೊರಟಿದೆ ಕೂಡಾ. ಯೋಜನಾಬದ್ಧ ಬೆಳವಣಿಗೆಗೆ ತಿಲಾಂಜಲಿ ಇತ್ತ ಇಂದಿನ ಸಂದರ್ಭದಲ್ಲಿ, ಈ ನೀತಿ ಅದರ ಗುರಿ ಮತ್ತು ಉದ್ದೇಶ, ಕಾಣ್ಕೆಗಳು ಹಾಗೂ ಅವನ್ನು ಹೇಗೆ ಯಾರು ಸಾಧಿಸುತ್ತಾರೆ ಎಂಬುದು ಗೊಂದಲಕಾರಿಯಾಗಿದೆ. ಇದರ ಕೆಲವು ಉದಾಹರಣೆಗಳು:




* "ಭಾರತ ಜಗತ್ತಿನ ಮೂರು ಮೊದಲ ವೈಜ್ಞಾನಿಕ ಸೂಪರ್ ಪವರ್ ಗಳಲ್ಲಿ ಮುಂದಿನ ದಶಕಗಳಲ್ಲಿ ಮೇಲಿನ ಸ್ಥಾನ ಪಡೆಯುವುದು" ಒಂದು ಗುರಿ ಎಂದು ಹೇಳಲಾಗಿದೆ. 2013ರ ನೀತಿ "ಜಗತ್ತಿನ ಮೂರು ಮೊದಲ ವೈಜ್ಞಾನಿಕ ಸೂಪರ್ ಪವರ್ ಗಳ ಸ್ಥಾನಕ್ಕೆ ಏರುವುದು" ಎಂದು ಹೇಳಿತ್ತು. ಇದರರ್ಥ ಇದನ್ನು ಸಾಧಿಸಲಾಗಿದೆ. ಈಗ ಆ ಮೂರರಲ್ಲಿ ಇನ್ನಷ್ಟು ಮೇಲಕ್ಕೆ ಹೋಗುವುದಷ್ಟೇ ಬಾಕಿ ಉಳಿದಿರುವುದು ಎಂದರ್ಥವಾ? ಆದರೆ ಇದು ನಿಜವಲ್ಲ ಅಥವಾ ಯಾವ ಆಧಾರದ ಮೇಲೆ ಇದನ್ನು ಹೇಳಲಾಗುತ್ತಿದೆ ಎಂಬುದು ಸ್ಪಷ್ಟವಿಲ್ಲ.
* "ಪೂರ್ಣ ಕಾಲದ ಸಂಶೋಧಕರು, ಜಿಡಿಪಿಯ ಭಾಗವಾಗಿ ಸಂಶೋಧನೆಗೆ ಹೂಡಿಕೆ, ಮತ್ತು ಸಂಶೋಧನೆಗೆ ಹೂಡಿಕೆಯಲ್ಲಿ ಖಾಸಗಿ ಕ್ಷೇತ್ರದ ಪಾಲು ಪ್ರತಿ ಐದು ವರ್ಷದಲ್ಲಿ ಇಮ್ಮಡಿಗೊಳಿಸುವುದು" ಇನ್ನೊಂದು ಗುರಿ. ಆದರೆ ವಾಸ್ತವವೆಂದರೆ ಕಳೆದ ಎರಡು ದಶಕಗಳಿಗೂ ಹೆಚ್ಚಿನ ಅವಧಿಯಲ್ಲಿ ಸಂಶೋಧನೆಯಲ್ಲಿ ಭಾರತದ ಹೂಡಿಕೆ ಜಿಡಿಪಿಯ ಶೇ. 0.7 ರ ಸುತ್ತವಷ್ಟೇ ಗಿರಕಿ ಹೊಡೆಯುತ್ತಿದೆ. 1996ರಲ್ಲಿ ಸುಮಾರು ಅಷ್ಟೇ ಇದ್ದ (ಶೇ0.7) ಚೀನಾದ ಈ ಹೂಡಿಕೆ, ಈಗ ಶೇ. 2.4 (ಅದರ ಜಿಡಿಪಿ ಸಹ ಭಾರೀ ಪ್ರಮಾಣದಲ್ಲಿ ಬೆಳೆದಿದ್ದರೂ) ಆಗಿದ್ದರೆ, ಕೊರಿಯಾ ಮುಂತಾದ ದ.ಏಶ್ಯಾದ ಹಲವು ದೇಶಗಳು ಶೇ. 2 ರ ಸುತ್ತ ಇವೆ. ಈ ದೇಶಗಳು ಶಿಕ್ಷಣ ಮತ್ತು ಆರೋಗ್ಯದ ಮೇಲೂ ಜಿಡಿಪಿಯ ಶೇ.2-3 ಖರ್ಚು ಮಾಡಿವೆ. ಅಲ್ಲೂ ಭಾರತ ಬಹಳ ಹಿಂದೆ ಇದೆ. ಈ ಹಿನ್ನೆಲೆಯಲ್ಲಿ ಈ ಗುರಿಯನ್ನು ನಿಜವಾಗಿ ಗಂಭೀರವಾಗಿ ತೆಗೆದುಕೊಂಡಿದೆಯೇ?
* "ಜಾಗತಿಕ ಮನ್ನಣೆ ಮತ್ತು ಪಾರಿತೋಷಕಗಳಲ್ಲಿ ಅತ್ಯಂತ ಉನ್ನತ ಸ್ಥಾನ ಪಡೆಯುವುದು" ಇನ್ನೊಂದು ಈ ನೀತಿಯ ಗುರಿ. ಇದರರ್ಥ ಪೇಟೆಂಟುಗಳು ಮತ್ತು ಸಂಶೋಧನಾ ಪ್ರಬಂಧಗಳ ಪ್ರಕಟಣೆಗಳ ಸಂಖ್ಯೆ ಹೆಚ್ಚಿಸುವುದು. ಇದು ಅದರಷ್ಟಕ್ಕೆ ಅಷ್ಟೇನೂ ಅರ್ಥಪೂರ್ಣ ಗುರಿ ಸಹ ಅಲ್ಲ. ಜಾಗತಿಕ ಮನ್ನಣೆ ಮತ್ತು ಪಾರಿತೋಷಕಗಳು ವಿಜ್ಞಾನ-ತಂತ್ರಜ್ಞಾನದಲ್ಲಿ ಮುನ್ನಡೆ ಸಾಧಿಸುವುದಿಲ್ಲ. ಭಾರತ ಪೇಟೆಂಟುಗಳು ಮತ್ತು ಸಂಶೋಧನಾ ಪ್ರಬಂಧಗಳ ಸಂಖ್ಯೆಯಲ್ಲೂ ಈಗ ಜಾಗತಿಕವಾಗಿ 9ನೇ ಸ್ಥಾನದಲ್ಲಿದೆ. ಆದರೆ ಅದರ ಶೇ. 2.5 ಮಾತ್ರ ಗುಣಾತ್ಮಕವಾಗಿ ಗಮನಾರ್ಹವಾಗಿದೆ ಎಂಬುದು ವಾಸ್ತವ.

### ವಿಜ್ಞಾನ-ತಂತ್ರಜ್ಞಾನ ಸ್ವಾವಲಂಬನೆ ಯಾಕೆ ಮತ್ತು ಹೇಗೆ?

ವಿಜ್ಞಾನ-ತಂತ್ರಜ್ಞಾನಗಳಲ್ಲಿ ಸ್ವಾವಲಂಬನೆ (ಅಥವಾ 'ನೆಹರೂ ವಾಸನೆ' ಹೋಗಲಾಡಿಸಲು ಟಂಕಿಸಿದ "ಆತ್ಮನಿರ್ಭರತೆ") ಯಾಕೆ ಮತ್ತು ಹೇಗೆ ಸಾಧಿಸುವುದು ಎಂಬುದರ ಕುರಿತು ಸಹ ಅಷ್ಟೇ ಗೊಂದಲವನ್ನು ಈ ನೀತಿ ತೋರ್ಪಡಿಸುತ್ತದೆ. ಕೊವಿದ್ ಬಿಕ್ಕಟ್ಟಿನಲ್ಲಿ ಆವಶ್ಯಕ ವೈದ್ಯಕೀಯ ಉಪಕರಣಗಳು, ಪರೀಕ್ಷಾ ಕಿಟ್ ಗಳು, ಆರೋಗ್ಯ ಕಾರ್ಯಕರ್ತರ ರಕ್ಷಣಾ ಗವುಸುಗಳನ್ನು ಆಮದು ಮಾಡಬೇಕಾದ ಪರಿಸ್ಥಿತಿ ಬಂದ ಮೇಲೂ ಇದನ್ನು ಅರ್ಥ ಮಾಡಿಕೊಳ್ಳುವಲ್ಲಿ ಸರಕಾರ ಸೋತಿದೆ ಎಂಬುದು ಸ್ಪಷ್ಟ.

ಕೈಗಾರಿಕಾ ಕ್ರಾಂತಿಯ ಮೂರನೇ ಅಲೆಯಲ್ಲೇ ವಿಜ್ಞಾನ-ತಂತ್ರಜ್ಞಾನ ಸ್ವಾವಲಂಬನೆಗೆ ಒತ್ತು ಕೊಟ್ಟು ಚೀನಾ ಮಾತ್ರವಲ್ಲ, ದ.ಕೊರಿಯಾ, ತೈವಾನ್, ಸಿಂಗಾಪುರ, ಹಾಂಗ್ ಕಾಂಗ್ ನಂತಹ ಬಂಡವಾಳಶಾಹಿ

ಪುಟ 10 ಕ್ಕೆ




# ಕೈಗಾರಿಕಾ ಕ್ರಾಂತಿಯ ನಾಲ್ಕನೇ ಅಲೆಯಲ್ಲಿ ಸಹ ಭಾರತ ಹಿಂದೆ ಬೀಳುತ್ತಾ?.................

ಪುಟ 9 ರಿಂದ

ದೇಶಗಳು ಸಹ ಮಾರುಕಟ್ಟೆ ದೇವರ ಮೇಲೆ ಭಾರ ಹಾಕಿ ಕೈ ಕಟ್ಟಿ ಕೂರಲಿಲ್ಲ. ಬದಲಾಗಿ ಜಪಾನಿನ ಮಾದರಿ ಅನುಸರಿಸಿ ವಿಜ್ಞಾನ–ತಂತ್ರಜ್ಞಾನಕ್ಕೆ ಆದ್ಯತೆ ಕೊಟ್ಟವು, ಅದರ ಬೆಳವಣಿಗೆಯಲ್ಲಿ ಪ್ರಭುತ್ವಗಳು ಭಾರೀ ಹೂಡಿಕೆ ಮಾಡಿದವು, ಅದರ ದಿಕ್ಕು–ದೆಸೆ ನಿರ್ಧರಿಸುವಲ್ಲಿ ಪ್ರಮುಖ ಮತ್ತು ನಿರ್ಣಾಯಕ ಪಾತ್ರ ವಹಿಸಿದವು. ಈ ದೇಶಗಳು ಮೂರನೇ ಅಲೆಯಲ್ಲೇ ಪ್ರಮುಖ ಪಾತ್ರ ವಹಿಸಿದವು. ಚೀನಾ ವಂತೂ ಈ ನಿಟ್ಟಿನಲ್ಲಿ ಅನುಕರಣೀಯ ಸಾಧನೆ ಮಾಡಿ ಎರಡನೇ ಅತಿ ದೊಡ್ಡ ಮತ್ತು ಪ್ರಬಲವಾದ ಆರ್ಥಿಕವಾಗಿದೆ. ಕೈಗಾರಿಕಾ ಕ್ರಾಂತಿಯ ನಾಲ್ಕನೇ ಅಲೆಯಲ್ಲಿ ಅಗ್ರಸ್ಥಾನ ಪಡೆಯುವತ್ತ ದೃಢ ಹೆಜ್ಜೆ ಇಡುತ್ತಿದೆ. ಸಂಶೋಧನೆಯ ಹಲವು ಸೂಚಕಗಳಲ್ಲಿ ಮೊದಲ ಅಥವಾ ಎರಡನೆಯ ಸ್ಥಾನ ಪಡೆದಿದೆ. 5ಜಿ ಮೊಬೈಲ್ ತಂತ್ರಜ್ಞಾನದ ಪೈಪೋಟಿಯಲ್ಲಿ ಮುಂದಿದೆ. ಇತರ ಕ್ಷೇತ್ರಗಳಲ್ಲೂ ತೀವ್ರ ಪೈಪೋಟಿ ಒಡ್ಡಿದೆ. ಜಾಗತಿಕ ಹೊಸಶೋಧ ಸೂಚಕದಲ್ಲಿ ಚೀನಾ 14ನೇ ಸ್ಥಾನದಲ್ಲಿದ್ದರೆ, ಭಾರತ 48ನೇ ಸ್ಥಾನದಲ್ಲಿದೆ.

1980ರ ದಶಕದ ವರೆಗೆ ಇಂತಹ ನೀತಿ (ಅದರಲ್ಲೂ ಹಲವು ನ್ಯೂನತೆಗಳಿದ್ದರೂ) ಅನುಸರಿಸಿದ್ದು, 1990ರ ದಶಕದಿಂದೀಚೆಗೆ ಅದಕ್ಕೆ ತಿಲಾಂಜಲಿ ಇತ್ತಿದ್ದೇ ಸಮಸ್ಯೆ ಎಂದು ಗುರುತಿಸದೇ ಇರುವುದು ಈ ನೀತಿಯ ದೊಡ್ಡ ವೈಫಲ್ಯ.

ಇಂತಹ ಜಾಗತಿಕ ಅನುಭವ ಸೇರಿದಂತೆ ಇವ್ಯಾವುದನ್ನೂ ಈ ನೀತಿ ಗಣನೆಗೆ ತೆಗೆದುಕೊಂಡಿಲ್ಲ. ಪ್ರಭುತ್ವ ಎಲ್ಲದರಿಂದ ಹಿಂದೆ ಸರಿಯುವ, ಎಲ್ಲವನ್ನೂ ಜಾಗತಿಕ ಬಂಡವಾಳಕ್ಕೆ ಬಿಡುವ ನವ–ಉದಾರವಾದಿ ಚೌಕಟ್ಟು ಒಳಗೆ ಗಿರಕಿ ಹೊಡೆಯುತ್ತಿದೆ.

**ವಿದೇಶೀ ಹೂಡಿಕೆ ಮತ್ತು ಸಾಂಪ್ರದಾಯಿಕ ಜ್ಞಾನದ ಮೂಲಕ 'ಆತ್ಮನಿರ್ಭರತೆ'?!**

ಇದಕ್ಕೆ ಬದಲಾಗಿ ಈ ಸರಕಾರಕ್ಕೆ ಎಲ್ಲ ಸಮಸ್ಯೆಗೂ ಪರಿಹಾರ ಕೊಡಬಲ್ಲ ರಾಮಬಾಣವಾದ ವಿದೇಶೀ ಹೂಡಿಕೆಯ ಮಂತ್ರವನ್ನು "ಆತ್ಮನಿರ್ಭರತೆ"ಯ ಸಾಧನೆಗೂ ಜಪಿಸುತ್ತಿದೆ!! ಯುಪಿಎ ಸರಕಾರ ಸ್ವಾವಲಂಬನೆ ಹಳಸಲು ಪರಿಕಲ್ಪನೆ, ಬೇಕಾದ ತಂತ್ರಜ್ಞಾನವನ್ನು ಯಾವಾಗಲೂ ಆಮದು ಮಾಡಬಹುದು ಎಂಬ ನೀತಿ ಅನುಸರಿಸಿತ್ತು. ಈಗಿನ ಸರಕಾರ ವಿದೇಶೀ ಕಂಪನಿಗಳು ತಯಾರಿಕೆಯನ್ನು ಭಾರತದಲ್ಲಿ ಮಾಡುವ ಮೂಲಕ ಮತ್ತು ಅವು ಭಾರತದಲ್ಲಿ ಸಂಶೋಧಣೆ ಕೈಗೊಳ್ಳುವ ಮೂಲಕ "ಆತ್ಮನಿರ್ಭರತೆ" ಸಾಧಿಸಬಹುದು ಎಂದು ನಂಬಿದೆ. ಇದು ಜಪಾನ್ ಅಥವಾ ಯಾವುದೇ ದೇಶದಲ್ಲೂ ಯಾವತ್ತೂ ಆಗಿಲ್ಲ. ಯಾವುದೇ ತಂತ್ರಜ್ಞಾನ ಮತ್ತು ವಸ್ತು ದೇಶದಲ್ಲಿ ತಯಾರಾದ ಕೂಡಲೇ, ಆ ಉತ್ಪಾದನಾ ಮತ್ತು ಉತ್ಪನ್ನದ ತಂತ್ರಜ್ಞಾನ ನಮ್ಮದಾಗಿ ಬಿಡುತ್ತದೆ ಎಂದೂ ಅದು ನಂಬಿದೆ. ಹೀಗೆ ಆಸ್ಟ್ರಾಜೆನಿಕಾ ಮತ್ತು ಭಾರತ್ ಬಯೋಟೆಕ್ ಎರಡರ ನಡುವಿನ ವ್ಯತ್ಯಾಸ ಗೊತ್ತಿಲ್ಲದಿರುವುದರಿಂದಲೇ, ಎರಡನ್ನೂ ಅದು "ಮೇಡ್ ಇನ್ ಇಂಡಿಯಾ" ವ್ಯಾಕ್ಸೀನ್ ಎಂದು ಕರೆಯುತ್ತದೆ!

ಹೀಗಂತ ಅದು ನಂಬಿದೆ ಮಾತ್ರವಲ್ಲ, ನೀತಿ ಶಿಫಾರಸು ಮಾಡುವ ಕ್ರಮಗಳು ಅದರ ಮೇಲೆ ಆಧರಿಸಿವೆ. "ವಿಜ್ಞಾನ, ತಂತ್ರಜ್ಞಾನ ಮತ್ತು ಹೊಸಶೋಧ"ಗಳಲ್ಲಿ ಹೂಡಿಕೆ ಮಾಡಲು ವಿದೇಶೀ ಕಂಪನಿಗಳಿಗೆ ಉತ್ತೇಜನ ಕೊಡಲು ಕಾರ್ಪೊರೆಟ್ ತೆರಿಗೆ ಕಡಿತ, ವೇಗದ ಮಂಜೂರಿ, ಭೂಮಿ ಇತ್ಯಾದಿ ಕೊಡಬೇಕು ಎಂದು ವಿಧಿಸುತ್ತದೆ. ಅದೇ ರೀತಿಯಲ್ಲಿ ಹಿಂದೆ ಹೇಳಿದ ಹಾಗೆ ಭಾರತದ ಖಾಸಗಿ ಕ್ಷೇತ್ರ ಸಹ ಇವುಗಳಲ್ಲಿ ಹೂಡಿಕೆ ಮಾಡುತ್ತವೆ ಎಂದೂ ಸರಕಾರ ನಂಬಿದೆ. ಜಗತ್ತಿನ ಬೇರೆ ದೇಶಗಳಲ್ಲಿ ಇದು ಆಗಿದೆ. ಭಾರತದ ಖಾಸಗಿ ಕ್ಷೇತ್ರದ ಉದ್ಯಮಿಗಳು ಮತ್ತು ಕಂಪನಿಗಳು ಯಾವತ್ತೂ ಇದನ್ನು ಮಾಡಿಲ್ಲ ಎಂಬುದು ವಾಸ್ತವ. ಅದರಲ್ಲೂ ವಿದೇಶೀ ತಂತ್ರಜ್ಞಾನ ಸುಲಭವಾಗಿ ಲಭ್ಯವಿರುವಾಗ, ಈಗ ಅಂತಹ ಲಕ್ಷಣಗಳು ಯಾವುವು ಗೋಚರಿಸಿಲ್ಲ. ಆದರೂ ಈ ಆಧಾರರಹಿತ ನಂಬಿಕೆ ಈ ನೀತಿಯ ತಳಹದಿಯಾಗಿದೆ.

"ಸಾಂಪ್ರದಾಯಿಕ ಜ್ಞಾನ ವ್ಯವಸ್ಥೆಗಳಿಗೆ ಉತ್ತೇಜನ, ತಳಮೂಲದ ಸಂಘಟನೆಗಳು ಮತ್ತು ನವೋದ್ಯಮಗಳ ಮೂಲಕ ಹೊಸಶೋಧಕ್ಕೆ ಮತ್ತು ಸ್ವದೇಶೀ ತಂತ್ರಜ್ಞಾನದ ಬೆಳವಣಿಗೆ" ಯಿಂದಲೂ ಈ ನೀತಿ "ಆತ್ಮನಿರ್ಭರತೆ" ಸಾಧಿಸಬಹುದು ಎನ್ನುತ್ತದೆ. ತಳಮೂಲದ ಸಂಘಟನೆಗಳು ಮತ್ತು ನವೋದ್ಯಮಗಳು ಕೆಲವು ಸ್ಥಳೀಯ ಪರಿಣಾಮ ಬೀರುವ ಸಣ್ಣ ಹೊಸಶೋಧಗಳನ್ನು ಮಾಡಬಹುದು. ಆದರೆ ಅವು ಭಾರತವನ್ನು ಮೊದಲ ಮೂರು ವೈಜ್ಞಾನಿಕ ಸೂಪರ್ ಪವರ್ ಆಗಲು ಮತ್ತು ನಾಲ್ಕನೇ ಕೈಗಾರಿಕಾ ಕ್ರಾಂತಿಗೆ ತಯಾರು ಮಾಡಬಲ್ಲವು ಎಂಬುದು ತೀವ್ರ ಅನುಮಾನಾಸ್ಪದ. ಸಂಘಪರಿವಾರದ ಸಂಘಟನೆಗಳು ಮತ್ತು 'ದೇವಮಾನವರು' 'ಹಸು ವಿಜ್ಞಾನ', 'ಹಸು ತಂತ್ರಜ್ಞಾನ'ಕ್ಕೆ ಅನುದಾನಗಳನ್ನು ಲೂಟಿ ಮಾಡಲು ಅನುವು ಮಾಡಿಕೊಡುವುದು ಮಾತ್ರ ಈ ಅಂಶದ ಪ್ರಮುಖ ಉದ್ದೇಶ ಇದ್ದಂತಿದೆ.

ವಿದೇಶೀ ಕಂಪನಿಗಳು, ತಳಮೂಲದ ಸಂಘಟನೆಗಳು ಮತ್ತು ನವಸಾಹಸೋದ್ಯಮಗಳು ದೇಶದ "ವಿಜ್ಞಾನ, ತಂತ್ರಜ್ಞಾನ ಮತ್ತು ಹೊಸಶೋಧ"ಗಳಲ್ಲಿ ಸ್ವಾವಲಂಬನೆಯನ್ನು ಸಾಧಿಸಬಲ್ಲವು ಎಂದು ನಿರೀಕ್ಷಿಸುವುದಕ್ಕಿಂತ ದೊಡ್ಡ ಮೂರ್ಖತನ ಬೇರೊಂದಿಲ್ಲ.

**ಅರ್ಥಹೀನ ಕ್ರಮಗಳ ಹುನ್ನಾರಗಳ ಸರಣಿ**

ಈ ನೀತಿ ಗುರಿ, ಉದ್ದೇಶ ಮತ್ತು ಅದನ್ನು ಸಾಧಿಸಲು ರಣನೀತಿಯ ಕುರಿತು ಮಾತ್ರ ಗೊಂದಲವನ್ನು ಹೊಂದಿಲ್ಲ. ಅದು ಹಲವು ಅರ್ಥಹೀನ ಕ್ರಮಗಳ ಸರಣಿಯನ್ನು ಹೊಂದಿದೆ. ಕೆಲವು ಸ್ವಾಗತಾರ್ಹ ಕ್ರಮ ಎಂದು ಮೇಲೆ ಕಾಣುವ ಕ್ರಮಗಳ ಹಿಂದೆ ಹುನ್ನಾರಗಳೂ ಕಾಣುತ್ತವೆ. ಕೆಲವು ಉದಾಹರಣೆಗಳು:

* ಸಂಶೋಧನೆಗೆ ಹಣ ಹೂಡಿಕೆಯನ್ನು ಗಮನಾರ್ಹವಾಗಿ ಏರಿಸುವ ಭಾರವನ್ನು ನೀತಿ ಸಾರ್ವಜನಿಕ ಮತ್ತು ಖಾಸಗಿ ಉದ್ಯಮಗಳು, ವಿ.ವಿ ಗಳು, ಸಂಶೋಧನಾ ಸಂಸ್ಥೆಗಳು, ರಾಜ್ಯ ಸರಕಾರಗಳು, ಮಧ್ಯಮ–ಸಣ್ಣ ಉದ್ಯಮಗಳ ತಲೆ ಮೇಲೆ ಹಾಕುತ್ತದೆ. ನಿರ್ದಿಷ್ಟ ಶೇಕಡಾ ವನ್ನು ಸಂಶೋಧನೆಗೆ ಖರ್ಚು ಮಾಡಬೇಕು ಎಂದು ನೀತಿ ವಿಧಿಸುತ್ತದೆ. ಕೇಂದ್ರ ಸರಕಾರ ಈ ನಿಟ್ಟಿನಲ್ಲಿ ಏನನ್ನೂ ಮಾಡುವುದಿಲ್ಲ ಎಂದು ಪರೋಕ್ಷವಾಗಿ ಹೇಳುತ್ತದೆ. ದೊಡ್ಡ ಖಾಸಗಿ ಉದ್ಯಮಗಳನ್ನು ಬಿಟ್ಟು ಇತರ ಎಲ್ಲ ಸಂಸ್ಥೆಗಳು ಆಗಲೇ ಅವುಗಳ ಪ್ರಮುಖ ಉದ್ದೇಶಗಳಿಗೆ ಸಂಪನ್ಮೂಲ ಹೊಂಚಲು ಹರ ಸಾಹಸ ಪಡುತ್ತಿವೆ. ರಾಷ್ಟ್ರೀಯ ಸಂಶೋಧನಾ ಸಂಸ್ಥೆಗಳು ತಮ್ಮ ಅರ್ಧದಷ್ಟು ಖರ್ಚುಗಳಿಗೆ ಸಂಪನ್ಮೂಲವನ್ನು ತಾವೇ ಹೊಂಚಬೇಕು ಎಂಬ ನಿಯಮ (ದೆಹರಾಡೂನ್ ಯೋಜನೆ) ದಿಂದಾಗಿ ಆಗಲೇ ಹಲವು ಸಂಶೋಧನಾ ಕಾರ್ಯಕ್ರಮವನ್ನು ಕಡಿತಗೊಳಿಸಿವೆ. ಈ ಸಂಘಟನೆಗಳೆಲ್ಲ ಸಂಶೋಧನೆಗೆ ನಿರ್ದಿಷ್ಟ ಶೇಕಡಾವಾರು ಹೂಡಿಕೆ ಮಾಡಿದರೂ, 'ರಾಷ್ಟ್ರೀಯ ಮಿಶನ್' ವಿಧಾನದಲ್ಲಿ ಸ್ಪಷ್ಟ ಗುರಿಗಳಿರುವ ದೊಡ್ಡ ಹೂಡಿಕೆ ಇರುವ ಯೋಜನೆ ಇಲ್ಲದೆ ವಿಜ್ಞಾನ–ತಂತ್ರಜ್ಞಾನ ದಲ್ಲಿ ನಿರ್ಣಾಯಕ ಮುನ್ನಡೆ ಮತ್ತು ಸ್ವಾವಲಂಬನೆ ಸಾಧಿಸುವುದು ಸಾಧ್ಯವಿಲ್ಲ.
* ಈ ನೀತಿ ಹೆಚ್ಚಿನ ಸಂಪನ್ಮೂಲವನ್ನು ಹೊಂಚುವುದರ ಕುರಿತು ಅಸ್ಪಷ್ಟವಾಗಿದ್ದರೂ, ವಿಜ್ಞಾನ–ತಂತ್ರಜ್ಞಾನ ಸಂಸ್ಥೆಗಳ ಹಲವು ಆಯಾಮಗಳನ್ನು ನಿರ್ವಹಿಸಲು ಏಳಕ್ಕೂ ಹೆಚ್ಚು ಕೇಂದ್ರೀಯ ಮೇಲುಸ್ತುವಾರಿ ಸಂಸ್ಥೆಗಳ ಸ್ಪಷ್ಟ ಪ್ರಸ್ತಾವ ಮುಂದಿಟ್ಟಿದೆ. ಈಗಾಗಲೇ ವಿಪರೀತ 'ತಲೆಭಾರ' ಇರುವ ದೇಶದ ವಿಜ್ಞಾನ–ತಂತ್ರಜ್ಞಾನ ನಿರ್ವಹಣಾ ವ್ಯವಸ್ಥೆಯನ್ನು ಇನ್ನಷ್ಟು ಹೆಚ್ಚು 'ತಲೆಭಾರ' ಉಳ್ಳ ಅಧಿಕಾರಶಾಹಿಯಾಗಿಸಿ ಇದು ಸಂಶೋಧನೆಗೆ ಮಾರಕವಾಗುತ್ತದೆ.
* ಹಿಂದಿನ ನೀತಿಗಳಲ್ಲಿ ಒತ್ತು ನೀಡಲಾಗಿದ್ದ ವೈಜ್ಞಾನಿಕ ಮನೋಭಾವವನ್ನು ಬೆಳೆಸುವ ಹರಡುವ ಕುರಿತು ನೀತಿ ಮೌನವಾಗಿದೆ. ಮಾತ್ರವಲ್ಲ, ಸಾಂಪ್ರದಾಯಿಕ ಜ್ಞಾನ ವ್ಯವಸ್ಥೆಗೆ ಉತ್ತೇಜನ ಕೊಡುವ ಹೆಸರಲ್ಲಿ ಅವೈಜ್ಞಾನಿಕ 'ಹಸು ವಿಜ್ಞಾನ'ದಂತಹ ಮೂಢನಂಬಿಕೆಗೆ ಉತ್ತೇಜನ ಕೊಡುವ ಅಪಾಯವಿದೆ.
* ವಿಜ್ಞಾನ–ತಂತ್ರಜ್ಞಾನಗಳಲ್ಲಿ ಸಾಮರ್ಥ್ಯ, ಕೌಶಲ್ಯ ಬೆಳವಣಿಗೆ ಮತ್ತು ಸಂಶೋಧನೆಯಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳ ಪಾತ್ರದ ಕುರಿತು ಇನ್ನೂ ಚರ್ಚೆಯ ಹಂತದಲ್ಲಿರುವ ಹೊಸ ಶಿಕ್ಷಣ ನೀತಿಯ ಖಾಸಗೀಕರಣ, ವ್ಯಾಪಾರೀಕರಣ ಮತ್ತು ವಿದೇಶೀ ಹೂಡಿಕೆಯ ನೀತಿಯನ್ನು ಈ ನೀತಿ ಅನುಮೋದಿಸುವ ಮೂಲಕ ಎರಡೂ ನೀತಿಗಳೂ ನವ–ಉದಾರವಾದಿ ಚೌಕಟ್ಟಿನ ಒಳಗೆ ಬಂಧಿಸಲ್ಪಟ್ಟಿವೆ ಎಂಬುದನ್ನು ತೋರ್ಪಡಿಸುತ್ತವೆ.
* ವಿಜ್ಞಾನ ಸಂವಹನ ಮತ್ತು ಪ್ರಸಾರಕ್ಕೆ ಒತ್ತು ಕೊಡುವುದು ಸ್ವಾಗತಾರ್ಹವಾದರೂ ಈ ಜವಾಬ್ದಾರಿಯನ್ನು ಹೊಸದಾಗಿ ಸೃಷ್ಟಿಸಲ್ಪಡುವ ವಿಜ್ಞಾನ ಚಳುವಳಿಗಳು ಮತ್ತು ವಿಜ್ಞಾನಿಗಳ ಮೇಲೆ ಹೊರಿಸಿರುವುದು ಸಂಶಯಕ್ಕೆಡೆ ಮಾಡಿಕೊಡುತ್ತದೆ. ನಾಲ್ಕು ದಶಕಗಳಿಂದಲೂ ದೀರ್ಘ ಕಾಲ ತಳಮೂಲದ ವಿಜ್ಞಾನ ಸಂವಹನ ಮತ್ತು ಪ್ರಸಾರ ಸಮರ್ಥವಾಗಿ ನಿರ್ವಹಿಸುತ್ತಿರುವ ಜನ ವಿಜ್ಞಾನ ಚಳುವಳಿಗಳ ಜಾಲವೇ ಇರುವಾಗ ಇದರ ಅಗತ್ಯವೇನು? ಈ ಕ್ಷೇತ್ರದಲ್ಲೂ ಸಂಘಪರಿವಾರದ ಸಂಘಟನೆಗಳನ್ನು ಸರಕಾರದ ಪ್ರಾಯೋಜಕತ್ವದಲ್ಲಿ ಹರಿಯಬಿಡುವ ದುರುದ್ದೇಶವೇ ಕಾಣುತ್ತದೆ.
* ಭಾರತೀಯ ಸಂಶೋಧನಾ ಸಂಸ್ಥೆಗಳ ಫಲಿತಗಳನ್ನು ಸಾರ್ವಜನಿಕರಿಗೆ ತೆರೆಯುವ ಹೆಸರಲ್ಲಿ, ಅವನ್ನು ಭಾರತೀಯ ಕಾರ್ಪೊರೆಟುಗಳಿಗೆ ಮತ್ತು ವಿದೇಶೀ ಕಂಪನಿಗಳಿಗೆ ಲಾಭ ಮಾಡಿಕೊಳ್ಳಲು ಉಚಿತವಾಗಿ ಕೊಡುವ ಹುನ್ನಾರ ಕಾಣಿಸುತ್ತದೆ.
* ದುಬಾರಿಯಾಗಿರುವುದರಿಂದ ಭಾರತೀಯ ಸಂಶೋಧಕರ ಮತ್ತು ಸಂಸ್ಥೆಗಳಿಗೆ ನಿಲುಕದಿರುವ ವಿದೇಶೀ ಸಂಶೋಧನಾ ಪತ್ರಿಕೆಗಳಿಗೆ ಇಡೀ ದೇಶದ ಪರವಾಗಿ ಚಂದಾ ಕೊಡುವ ಪ್ರಸ್ತಾವ ಸ್ವಾಗತಾರ್ಹ. ಆದರೆ ಇಲ್ಲೂ ಸಂಶೋಧನಾ ಪತ್ರಿಕೆಯನ್ನು ಏಕಸ್ವಾಮ್ಯ ವ್ಯಾಪಾರವಾಗಿಸುವ ಕಂಪನಿಗಳಿಗೆ ಮಣಿಯುವ ಬದಲು, ಅದರ ವಿರುದ್ಧ ಈಗ ಜಾಗತಿಕವಾಗಿ ಆರಂಭವಾಗಿರುವ ಮುಕ್ತ ಪತ್ರಿಕೆಗಳ ಚಳುವಳಿಗೆ ಬೆಂಬಲ ನೀಡುವ ಅಗತ್ಯವಿತ್ತು.
* ನಾಲ್ಕನೆಯ ಕೈಗಾರಿಕಾ ಕ್ರಾಂತಿಯ ಅಲೆ ಉದ್ಯೋಗಗಳ, ಜೀವನೋಪಾಯಗಳ ಮೇಲೆ ಬೀರುವ ಪರಿಣಾಮಗಳನ್ನು ನಿಭಾಯಿಸಿ ಜನರ ಸಾಮಾಜಿಕ–ಆರ್ಥಿಕ ಬೆಳವಣಿಗೆಗೆ ಏನು ಕ್ರಮ ವಹಿಸಬಹುದು ಎಂಬುದರ ಬಗೆಗೂ, ಹಾಗೆನೇ ಕೃಷಿ, ಕೈಕಸುಬುಗಳ ತಂತ್ರಜ್ಞಾನಗಳ ಉನ್ನತೀಕರಣ ಕುರಿತು ಈ ನೀತಿ ಮೌನವಾಗಿದೆ.

ಒಟ್ಟಂದದಲ್ಲಿ ಹೇಳುವುದಾದರೆ, STIP 2020 (ಸರಕಾರದ ಇತರ ಸಚಿವಾಲಯಗಳೂ ಸೇರಿದಂತೆ) ಎಲ್ಲ ಆಸಕ್ತ ಸಂಸ್ಥೆ, ವ್ಯಕ್ತಿಗಳ ಜತೆ ಸಮಾಲೋಚನೆ ನಡೆಸದೆ ಗಡಿಬಿಡಿಯಲ್ಲಿ ರೂಪಿಸಿ ಬಿಡುಗಡೆ ಮಾಡಿದ ನೀತಿ. ಇದು ವಿಜ್ಞಾನ–ತಂತ್ರಜ್ಞಾನ ಸಚಿವಾಲಯದ ದಸ್ತಾವೇಜು ಮಾತ್ರ. ರಾಷ್ಟ್ರೀಯ ನೀತಿ ಖಂಡಿತ ಅಲ್ಲ. ಇದು ನಾಲ್ಕನೆಯ ಕೈಗಾರಿಕಾ ಕ್ರಾಂತಿಯ ಅಲೆಗೆ ಭಾರತವನ್ನು ಸಜ್ಜುಗೊಳಿಸುವ ಯಾವ ಅಂಶಗಳನ್ನೂ ಹೊಂದಿಲ್ಲ. ನವ–ಉದಾರವಾದಿ ಚೌಕಟ್ಟಿನ ಒಳಗೆ ಎಲ್ಲ ನೀತಿಗಳನ್ನು ತುರುಕಿಸುವ ಜಾಗತಿಕ ಬಂಡವಾಳದ ಮತ್ತು ಪುರೋಹಿತಶಾಹಿಯ ಒತ್ತಡಕ್ಕೆ ಮಣಿಯುವ ತವಕ ಬಿಟ್ಟರೆ, ಕೊವಿಡ್ ಪರಿಸ್ಥಿತಿಯಲ್ಲಿ ಇಷ್ಟು ಗಡಿಬಿಡಿಯಲ್ಲಿ ಇದನ್ನು ರೂಪಿಸುವ ತುರ್ತು ಖಂಡಿತ ಇಲ್ಲ. ■

# ಕನ್ನಡ ಸಿನಿಮಾ ದುರ್ಗತಿಯೂ ನಾಯಕ ನಟರ....

ಪುಟ 6 ರಿಂದ

ಹೊರಬಂದಿದೆ. ಹಾಗಾಗಿಯೇ "ಪೊಗರು" ತುಸು ಹೆಚ್ಚು.


ಇದೇ ಸಂದರ್ಭದಲ್ಲಿ ಜಗ್ಗೇಶ್ ಮತ್ತು ದರ್ಶನ್ ವಿವಾದವನ್ನೂ ಗಮನಿಸಿದಾಗ ನಮ್ಮ ಕನ್ನಡ ಸಿನಿಮಾದ ಹೀರೋಗಳು ಹೇಗೆ ಸರ್ವಾಂತರ್ಯಾಮಿಗಳಾಗಲು ಬಯಸುತ್ತಿದ್ದಾರೆ ಎನ್ನುವುದನ್ನೂ ಗ್ರಹಿಸಬಹುದು. ಪರದೆಯ ಮೇಲೆ ಸಮಸ್ತ ಆರು ಕೋಟಿ ಕನ್ನಡಿಗರು ನನ್ನ ಹಿಂದಿದ್ದಾರೆ ಎಂದು ಆತ್ಮರತಿಯಿಂದ ಬೀಗುವ ಹೀರೋ ಹೊರಜಗತ್ತಿನಲ್ಲೂ ಹಾಗೆಯೇ ಭಾವಿಸುವುದರಿಂದಲೇ, ಜಗ್ಗೇಶ್ ತಮಗೆ ಅವಮಾನವಾದರೆ ಸಮಸ್ತ ಕನ್ನಡಿಗರಿಗೆ ಅವಮಾನವಾದಂತೆ ಎಂಬ ಭ್ರಮೆಗೊಳಪಡುತ್ತಾರೆ. ಇಬ್ಬರು ನಟರ ನಡುವಿನ ಸಂಘರ್ಷ ನಾಡಿನ ಅಸ್ಮಿತೆಯೊಡನೆ ಸಮೀಕರಿಸಲ್ಪಡುವುದು ಅಪಾಯಕಾರಿಯಷ್ಟೇ ಅಲ್ಲ, ಅಸಹ್ಯಕರ ಬೆಳವಣಿಗೆ. ತಮ್ಮದೇ ಆದ ರಾಜಕೀಯ ಅಸ್ತಿತ್ವ ಮತ್ತು ಪರದೆಯ ಮೇಲಿನ ಇಮೇಜ್ ಕಾಪಾಡಿಕೊಳ್ಳಲು ಆಗಾಗ್ಗೆ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಈ ನಾಯಕ ನಟರಲ್ಲಿ ಸಮಷ್ಟಿ ಪ್ರಜ್ಞೆಯೇ ಇಲ್ಲ ಎನ್ನುವುದಕ್ಕೆ ಸಾಕ್ಷ್ಯಾಧಾರಗಳೇನೂ ಬೇಕಿಲ್ಲ.

ಗುಂಪು ಥಳಿತ ಮತ್ತು ದೈಹಿಕ ಹಲ್ಲೆಯ ಮೂಲಕ ಹಾಸ್ಯದ ಹೊನಲು ಹರಿಸುವ ರಜತ ಪರದೆಯಿಂದ ಇನ್ನೆಂತಹ ಸೃಜನಶೀಲತೆ ನಿರೀಕ್ಷಿಸಲು ಸಾಧ್ಯ? ಇಂದಿನ ಬಹುತೇಕ ಚಿತ್ರಗಳನ್ನು ನೋಡಿದಾಗ ಯಾವುದಾದರೂ ಭಾವನೆಗಳಿಗೆ ಧಕ್ಕೆ ಉಂಟಾಗುವುದೇ ಆದರೆ ಅದು ಹೆಣ್ತನ, ಮಹಿಳಾ ಅಸ್ಮಿತೆ, ಶೋಷಿತರ ಅಸ್ತಿತ್ವ ಮತ್ತು ಮಾನವ ಸಂವೇದನೆಯ ಭಾವನೆಗಳಿಗೆ ಹೆಚ್ಚಿನ ಧಕ್ಕೆ ಉಂಟಾಗುತ್ತಿದೆ ಎನ್ನಬಹುದು. ಸಿನಿಮಾದ ಹೀರೋ ತನ್ನ ಸಹಮಾನವನ ಹೆಗಲ ಮೇಲೆ ಕಾಲೂರುವ ದೃಶ್ಯ ನಮ್ಮ ಮನಸಿಗೆ ಘಾಸಿ ಉಂಟುಮಾಡಬೇಕಿತ್ತು. ಅಲ್ಲಿ ಹೆಗಲು ಮತ್ತು ಕಾಲು ಎರಡೂ ಕಥಾವಸ್ತುವಿನ ಒಂದು ಅಂಶ. ಅಲ್ಲಿ ನಮಗೆ ಜಾತಿ ಅಸ್ಮಿತೆಗಳು ಕಾಣುತ್ತಿದೆಯೇ ಹೊರತು, ಮನುಜ ಸಂವೇದನೆ ಕಾಣುತ್ತಿಲ್ಲ. ಇದು ನಮ್ಮ ನಡುವಿನ ದುರಂತ.

ಕೆಲವು ಅಪವಾದಗಳನ್ನು ಹೊರತುಪಡಿಸಿದರೆ, ಸಿನಿಮಾ ಮತ್ತು ಅಭಿನಯ ಕೌಶಲ್ಯ ಪರಸ್ಪರ ಸಂಪರ್ಕ ಕಳೆದುಕೊಂಡಿರುವುದನ್ನು ಮೂರು ದಶಕಗಳಿಂದಲೂ ನೋಡುತ್ತಿದ್ದೇವೆ. ಹಾಗಾಗಿಯೇ ಎಲ್ಲರೂ ಪ್ರಬುದ್ಧ ನಟರೆಂದೇ ಹೆಸರು ಗಳಿಸುತ್ತಾರೆ. ಅಭಿಮಾನಿ ಸಂಘಗಳು, ರಾಜಕೀಯ ನೆಲೆಗಳು ಮತ್ತು ಜಾತಿ ಅಸ್ಮಿತೆ ಇವುಗಳೇ ಒಬ್ಬ ನಟನ ಇಮೇಜ್ ವೃದ್ಧಿಸಲು ನೆರವಾಗುತ್ತವೆ. ಇದು ಕನ್ನಡ ಚಿತ್ರರಂಗ ಎದುರಿಸುತ್ತಿರುವ ದುರಂತ. ಹಾಗಾಗಿಯೇ ಕಳೆದ 40 ವರ್ಷಗಳಲ್ಲಿ ಒಬ್ಬ ರಾಜೀವ–ರಾಚೂಟಪ್ಪ (ಬಂಗಾರದ ಮನುಷ್ಯ) ಸೃಷ್ಟಿಯಾಗಿಲ್ಲ. ಒಬ್ಬ ರಾಮಯ್ಯ (ಕಸ್ತೂರಿ ನಿವಾಸ), ಒಬ್ಬ ಕಾವೇರಿ–ರಂಗನಾಯಕಿ (ಶರಪಂಜರ–ರಂಗನಾಯಕಿ) ಸೃಷ್ಟಿಯಾಗಿಲ್ಲ. ಒಬ್ಬ ಸಾಹುಕಾರ (ಸಂಪತ್ತಿಗೆ ಸವಾಲ್), ಒಬ್ಬ ನಕ್ಷತ್ರಿಕ (ಸತ್ಯಹರಿಶ್ಚಂದ್ರ) ಸೃಷ್ಟಿಯಾಗಿಲ್ಲ. ಎಲ್ಲವನ್ನೂ ನಾಯಕನಟರೇ ಆವರಿಸಿಕೊಂಡಿದ್ದಾರೆ. ಉಳಿದವರು ನಿಮಿತ್ತಗಳಾಗಿ ವಿರಮಿಸುತ್ತಾರೆ.

ಈ ಮೇಲಿನ ಪಾತ್ರಧಾರಿಗಳನ್ನು ಮತ್ತು ಸನ್ನಿವೇಶಗಳನ್ನು ನೆನಪಿಸಿಕೊಂಡಾಗ ನಮಗೆ ನಟರ ಹೆಸರು ನೆನಪಾಗುವುದಿಲ್ಲ. ಪಾತ್ರದ ಹೆಸರು ನೆನಪಾಗುತ್ತದೆ, ಭಕ್ತ ಕುಂಬಾರನಂತೆ. ಆದರೆ ಮುನಿರತ್ನಂ ಕುರುಕ್ಷೇತ್ರ ನೋಡಿ ಹೊರಬರುವಾಗ ಮಹಾಭಾರತದ ಒಂದು ಪಾತ್ರವೂ ನೆನಪಾಗುವುದಿಲ್ಲ. ದರ್ಶನ್ ಮಾತ್ರ ಮನಸಿನಲ್ಲಿ ಉಳಿಯುತ್ತಾರೆ (ಉತ್ತಮ ನಟನೆಯಿಂದ ಅಲ್ಲ ಸರ್ವವ್ಯಾಪಿ ಇಮೇಜ್ ನಿಂದ). ಈ ಪರಂಪರೆಯೇ ಪೊಗರು ಚಿತ್ರದ ದೃಶ್ಯಗಳಿಗೆ ಕಾರಣವಾಗಿದೆ. ಇದರಿಂದ ಹೊರಬರಲು ಬಹುಶಃ ಸಾಧ್ಯವಿಲ್ಲ ಎನಿಸುತ್ತದೆ. ನಮ್ಮ ಭಾವನೆಗಳಿಗೆ ಧಕ್ಕೆ ಉಂಟಾಗುವುದೇ ಆದರೆ ಈ ಮಾನವ ಸೂಕ್ಷ್ಮ ಭಾವನೆಗಳು ಘಾಸಿಗೊಳಗಾಗಬೇಕು. ಆಗಲಾದರೂ ಪರದೆಯ ಮೇಲೆ ಹೀರೋಗಳ ಕಾಲುಗಳು ನಡೆಯಲು/ಓಡಲು ಮಾತ್ರ ಬಳಕೆಯಾಗಬಹುದು. (ಮಣ್ಣಿನ ಮಗ ಚಿತ್ರದ "ಭಗವಂತ ಕೈ ಕೊಟ್ಟ" ಹಾಡು ನೆನಪಾಗುತ್ತದೆ) ■

# ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ಎರಡನೇ ಅಧಿವೇಶನ, ಝರಿಯಾ 1921




**ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಭಾರತದ ಕಾರ್ಮಿಕರನ್ನು ಮತ್ತು ಜನರನ್ನು ಗುಲಾಮರನ್ನಾಗಿ ಮತ್ತು ಕ್ರೂರವಾಗಿ ಶೋಷಿಸುವ ಮೂಲಕ ಬ್ರಿಟಿಷ್ ಆರ್ಥಿಕತೆಗೆ ಅಪಾರ ಸಂಪನ್ಮೂಲವನ್ನು ಸೇರಿಸುತ್ತಿದ್ದ ಸಮಯದಲ್ಲಿ ಬ್ರಿಟಿಷ್ ಕಾರ್ಮಿಕರ ಸಂಘಟನೆಯಿಂದ ಎ.ಐ.ಟಿ.ಯು.ಸಿ.ಯ ಎರಡನೇ ಅಧಿವೇಶನಕ್ಕೆ ಕಳಿಸಿದ ಸಂದೇಶ ಪತ್ರದ ಬಲವಾದ ಸಾಮ್ರಾಜ್ಯಶಾಹಿ-ವಿರೋಧಿ ಸಾರವು ಭಾರತದ ಕಾರ್ಮಿಕ ಇತಿಹಾಸದಲ್ಲಿ ಎಲ್ಲ ಸಮಯದಲ್ಲೂ ಮರೆಯಲಾಗದೇ ಉಳಿಯುತ್ತದೆ ಮತ್ತು ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಭಾರತದ ಹೋರಾಟದ ವರ್ಷಗಳಲ್ಲಿ ಬಂದ ಈ ಪತ್ರವು ಶ್ರಮಜೀವಿಗಳ ಕ್ರಾಂತಿಕಾರಿ ಮತ್ತು ಅಂತರರಾಷ್ಟ್ರೀಯ ದೃಷ್ಟಿಕೋನವನ್ನು ಅದ್ಭುತವಾಗಿ ಪ್ರತಿಬಿಂಬಿಸುತ್ತದೆ.**

ಮೂಲ ಲೇಖಕರು : **ಸುಕೋಮಲ್ ಸೇನ್** ಸಂಗ್ರಹ-ಅನುವಾದ: **ಸಿ.ಆರ್.ಶಾನಭಾಗ**

1920 ರ ಡಿಸೆಂಬರ್‌ನಲ್ಲಿ ನಾಗ್ಪುರದಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್ಸಿನ ವಾರ್ಷಿಕ ಅಧಿವೇಶನವು ಅಂತಿಮವಾಗಿ 'ಶಾಂತಿಯುತ ಮತ್ತು ನ್ಯಾಯಸಮ್ಮತ ವಿಧಾನಗಳಿಂದ ಸ್ವರಾಜ್ಯ ಸಾಧಿಸುವ' ಹೊಸ ಗುರಿಯನ್ನು ಘೋಷಿಸಿತು. ಆದರೆ ಗಾಂಧೀಜಿಯವರು ಭವಿಷ್ಯ ನುಡಿದಂತೆ, ಡಿಸೆಂಬರ್ 31, 1921 ರ ಹೊತ್ತಿಗೆ ಸ್ವರಾಜ್ಯ ಸಿಗುವ ಯಾವುದೇ ಅವಕಾಶ ಗೋಚರವಾಗಲಿಲ್ಲ. ಕಾರ್ಮಿಕರ ಆರ್ಥಿಕ ಹೋರಾಟಗಳು ಮತ್ತು ಸಾಮೂಹಿಕ ರಾಜಕೀಯ ಕ್ರಮಗಳು ಉನ್ನತ ಮಟ್ಟದ ಸಮರಶೀಲತೆಯನ್ನು ಪಡೆದುಕೊಂಡವು ಮತ್ತು ಕೆಲವೊಮ್ಮೆ ದಂಗೆಯ ರೂಪದಲ್ಲಿ ಸಿಡಿದೆದ್ದವು. ಗಾಂಧೀಜಿಯವರ ವಿಷಾದ ಮತ್ತು ಅಸಮ್ಮತಿಯ ಹೊರತಾಗಿಯೂ, ಇತಿಹಾಸದ ಹಾದಿ ಬದಲಾಗುತ್ತಿತ್ತು. ರೈತ ದಂಗೆಗಳು, ಕಾರ್ಮಿಕರ ಆರ್ಥಿಕ ಹೋರಾಟಗಳು ಮತ್ತು ಅಂತಿಮವಾಗಿ 17 ನವೆಂಬರ್ 1921 ರಂದು ನಡೆದ ಅಖಿಲ ಭಾರತ ಸಾರ್ವತ್ರಿಕ ರಾಜಕೀಯ ಮುಷ್ಕರವು ಸಾಮ್ರಾಜ್ಯಶಾಹಿ ವಿರೋಧಿ ಹೋರಾಟವನ್ನು ಉತ್ತುಂಗಕ್ಕೆ ಏರಿಸಿತು.

1921 ರಲ್ಲಿ ಒಂದೇ ವರ್ಷದಲ್ಲಿ 376 ಮುಷ್ಕರಗಳು ಮತ್ತು ಬೀಗಮುದ್ರೆಗಳಲ್ಲಿ ಆರು ಲಕ್ಷ ಕಾರ್ಮಿಕರು ಭಾಗಿಯಾಗಿದ್ದರು.

ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಕಾರ್ಮಿಕರ ರಾಜಕೀಯ ಮತ್ತು ಆರ್ಥಿಕ ಹೋರಾಟಗಳು ಗಮನಾರ್ಹ ಪ್ರಗತಿಯನ್ನು ಸಾಧಿಸಿದವು. ಸೋವಿಯತ್ ಒಕ್ಕೂಟದಲ್ಲಿ ಲೆನಿನ್ ಮತ್ತು ಬೋಲ್ಷೆವಿಕ್ ಪಕ್ಷದ ಸಮರ್ಥ ನಾಯಕತ್ವದಲ್ಲಿ, ಕಾರ್ಮಿಕ ವರ್ಗದ ಹೊಸದಾಗಿ ಹುಟ್ಟಿದ ಪ್ರಭುತ್ವವು ಅಂತರರಾಷ್ಟ್ರೀಯ ಪ್ರತಿ-ಕ್ರಾಂತಿ ಮತ್ತು ವಿದೇಶಿ ಸಾಮ್ರಾಜ್ಯಶಾಹಿ ಹಸ್ತಕ್ಷೇಪವನ್ನು ತೊಡೆದುಹಾಕಿ ಕ್ರಾಂತಿಯ ಸಾಧನೆಗಳನ್ನು ಕ್ರೋಡಿಕರಿಸಲು ಮುಂದಾಯಿತು. ಸೋವಿಯತ್ ಒಕ್ಕೂಟದ ಪ್ರಗತಿ ಮತ್ತು ಅದರ ಪ್ರಭಾವವು ಪ್ರಪಂಚದಾದ್ಯಂತ ವಿಸ್ತರಿಸಿತು.

ಬ್ರಿಟನ್‌ನಲ್ಲಿರಲಿ, ಫ್ರಾನ್ಸ್‌ನಲ್ಲಿರಲಿ ಅಥವಾ ಯಾವುದೇ ಪಾಶ್ಚಿಮಾತ್ಯ ಬಂಡವಾಳಶಾಹಿ ದೇಶದಲ್ಲಿರಲಿ, ಕಾರ್ಮಿಕ-ವರ್ಗದ ಆಂದೋಲನವು ಸತತ ಮುನ್ನಡೆಯನ್ನು ದಾಖಲಿಸಿತು. ಆದರೆ ಯುದ್ಧಾನಂತರದ ರಾಜಕೀಯ ಪ್ರತಿಕ್ರಿಯೆಗಳು ಅಂತರರಾಷ್ಟ್ರೀಯ ಕಾರ್ಮಿಕ ವರ್ಗದ ಚಳುವಳಿಯನ್ನು ಎರಡು ವಿಭಿನ್ನ ಗುಂಪುಗಳಾಗಿ ವಿಭಜಿಸಿದವು. ಒಂದು ವಿಭಾಗವನ್ನು ಆಮ್‌ಸ್ಟರ್‌ಡ್ಯಾಮ್‌ನ ಇಂಟರ್ನ್ಯಾಷನಲ್ ಫೆಡರೇಶನ್ ಆಫ್ ಟ್ರೇಡ್ ಯೂನಿಯನ್ಸ್ ಮತ್ತು ಇನ್ನೊಂದು ಭಾಗಕ್ಕೆ ಮಾಸ್ಕೋದ ರೆಡ್ ಇಂಟರ್ನ್ಯಾಷನಲ್ ಆಫ್ ಟ್ರೇಡ್ ಯೂನಿಯನ್ಸ್ ನೇತೃತ್ವ ವಹಿಸಿದವು.

ಈ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪರಿಸ್ಥಿತಿಯು ಎಐಟಿಯುಸಿ ಯ ಎರಡನೇ ಅಧಿವೇಶನದ ಕಲಾಪಗಳ ಮೇಲೆ ಸಾಕಷ್ಟು ಪರಿಣಾಮ ಬೀರಿತು. ಕ್ರಾಂತಿಕಾರಿ ಯಶಸ್ಸಿನ ಸಂಗಡವೇ, ಸಾಮ್ರಾಜ್ಯಶಾಹಿ ಹಸ್ತಕ್ಷೇಪ, ಅಂತರ್ಯುದ್ಧ ಮತ್ತು ಬೇರುಸಹಿತ ಕಿತ್ತೆಸೆಯಲ್ಪಟ್ಟ ಭೂಮಾಲೀಕರು ಮತ್ತು ರಶಿಯನ್ ಶ್ರೀಮಂತ ರೈತರುಗಳ ಒಳಸಂಚುಗಳ ನಡುವೆ, ಸೋವಿಯತ್ ಒಕ್ಕೂಟದಲ್ಲಿ ಬರಗಾಲದಂತಹ ಸ್ಥಿತಿ ಉಂಟಾಗಿತ್ತು. ಎಐಟಿಯುಸಿ ಯ ಎರಡನೇ ಅಧಿವೇಶನವು ಈ ನಿಟ್ಟಿನಲ್ಲಿ ತನ್ನ ಅಂತರರಾಷ್ಟ್ರೀಯ ಜವಾಬ್ದಾರಿಗಳನ್ನು ಪೂರೈಸಿತು ಎನ್ನುವದು ಮಹತ್ವದ್ದು..

ಉದ್ಘಾಟನಾ ಅಧಿವೇಶನದಲ್ಲಿ ರಾಷ್ಟ್ರೀಯ ನಾಯಕರ ಸಂದಿಗ್ಧತೆ ಮತ್ತು ಚಂಚಲತೆಯ ಕಾರಣದಿಂದ ಕಾಣೆಯಾಗಿದ್ದ ಬೇಡಿಕೆ ಈ ಅಧಿವೇಶನದಲ್ಲಿ ಕಾರ್ಯರೂಪಕ್ಕೆ ಬಂದಿತು- ಸ್ವರಾಜ್ಯಕ್ಕಾಗಿ ಒತ್ತಾಯಿಸಿ ನಿರ್ಣಯವನ್ನು ಅಂಗೀಕರಿಸಲಾಯಿತು.

ಕಾರ್ಮಿಕರ ವಿಷಯಕ್ಕೆ ಬಂದರೆ, ನೂರಕ್ಕೂ ಹೆಚ್ಚು ದೊಡ್ಡ ಕಾರ್ಮಿಕ ಸಂಘಗಳು ಬೆಳೆದಿದ್ದವು ಮತ್ತು ಎರಡನೇ ಅಧಿವೇಶನ ನಡೆಯಲಿದ್ದ ಸಮಯದಲ್ಲಿ ಅಧಿವೇಶನದ ಸ್ಥಳವಾದ ಝರಿಯಾದ ಸಂಪೂರ್ಣ ಕಲ್ಲಿದ್ದಲು ಗಣಿಗಾರಿಕೆ ಪ್ರದೇಶವು ಕಾರ್ಮಿಕರ ಅನಿರ್ದಿಷ್ಟ ಮುಷ್ಕರದಿಂದ ಕಂಪಿಸುತ್ತಿತ್ತು, ಮತ್ತು ಗಣಿಗಾರರ ವೇತನದಲ್ಲಿ ಶೇಕಡಾ 50 ರಷ್ಟು ಹೆಚ್ಚಳದೊಂದಿಗೆ ಯಶಸ್ವಿಯಾಗಿ ಸಂಪನ್ನಗೊಂಡಿತ್ತು.

ಈ ಪರಿಸ್ಥಿತಿಯ ಮಧ್ಯೆ, ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಎರಡನೇ ಅಧಿವೇಶನ 1921ರ ನವೆಂಬರ್ 30 ರಂದು ಝರಿಯಾದಲ್ಲಿ ಪ್ರಾರಂಭವಾಯಿತು.

**ಎರಡನೇ ಅಧಿವೇಶನದ ಪ್ರಮುಖ ಲಕ್ಷಣಗಳು:**

ಎಐಟಿಯುಸಿ ಯ ಎರಡನೇ ಅಧಿವೇಶನವು 30 ನವೆಂಬರ್ 1921 ರಂದು ಬಿಹಾರದ ಕಲ್ಲಿದ್ದಲು ಗಣಿಗಾರಿಕೆ ಪ್ರದೇಶ ಝರಿಯಾದಲ್ಲಿ ಪ್ರಾರಂಭವಾಯಿತು. ದೇಶದ ವಿವಿಧ ಭಾಗಗಳಿಂದ ಬಂದ ಪ್ರತಿನಿಧಿಗಳು ಭಾರತದ ಎಲ್ಲಾ ಕಾರ್ಮಿಕ ವಿಭಾಗಗಳನ್ನು ಪ್ರತಿನಿಧಿಸುತ್ತ ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿದ್ದರು. ಸಮ್ಮೇಳನದ ಪೆಂಡಾಲ್ ಸಂದರ್ಶಕರು- ಗಣಿಕಾರ್ಮಿಕರು, ಪುರುಳರು, ಮಹಿಳೆಯರು ಮತ್ತು ಮಕ್ಕಳಿಂದ ಸಹ ತುಂಬಿತ್ತು.

ಸ್ವಾಮಿ ವಿಶ್ವಾನಂದ, ಶ್ಯಾಮ್‌ಸುಂದರ್ ಚಕ್ರವರ್ತಿ, ಸ್ವಾಮಿ ದರ್ಶನಾನಂದ, ಹರದೇವದಾಸ್ ಅಗರ್‌ವಾಲ್, ಡಿ.ಡಿ.ಥ್ಯಾಕರ್, ಕರಮ್ಸಿ ಖೋರಾ, ಕೇಶವಜಿ ಪಿತಾಂಬರ್, ಮಾಧವಜಿ ಜೀವನ್, ನಿಬರನ್ ಚಿ. ಸರ್ಕಾರ್, ಕೆ. ಪರೇಖ್, ಲಾಲಾ ನಾರೈನ್ ಸಿಂಗ್, ಸೇಠ್ ಚಗನ್ ಲಾಲ್, ಡಾ. ದೌಲತ್ ರಾಮ್, ಸಾವಿತ್ರಿ ದೇವಿ, ಇ.ಈ. ಅಯ್ಯರ್, ಜಲೀಲ್ ಖಾನ್, ಐ.ಬಿ. ಸೇನ್, ಎಂ.ಡಿ. ದಲ್ವಿ, ಡಿ. ಚಮನ್ ಲಾಲ್, ಥೆಂಗಡಿ, ಜೆ.ಹೆಚ್. ಪ್ಯಾಟರ್ಸನ್, ಸಿಂಪ್ಸನ್ ಗಿಲ್‌ಕ್ರಿಸ್ಟ್, ಆರ್.ಎ.ಮುಕದಮ್ ಮತ್ತು ಬಾಂಬೆಯಿಂದ ಪ್ರೊ. ಕೌಶಿಕ್ ವೇದಿಕೆಯಲ್ಲಿದ್ದವರಲ್ಲಿ ಪ್ರಮುಖರಾಗಿದ್ದರು

ಕಾರ್ಮಿಕ ಮತ್ತು ರಾಷ್ಟ್ರೀಯ ಹಾಡುಗಳ ಗಾಯನ, ಮತ್ತು ವಂದೇ-ಮಾತರಂ ಹಾಡುವಿಕೆಯೊಂದಿಗೆ ನಡಾವಳಿ ಪ್ರಾರಂಭವಾಯಿತು. ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಆಯ್ಕೆಯಾದ ಝರಿಯಾದ ಕಲ್ಲಿದ್ದಲು ಗಣಿ ಮಾಲೀಕ ರಾಮಜಾಶ್ ಅಗರ್ವಾಲ್ ಅವರು ಸ್ವಾಗತ ಭಾಷಣ ಮಾಡಿದರು.

ಸಮ್ಮೇಳನದ ಇಡೀ ಸ್ಥಳವನ್ನು ಖಾದಿ ಬಟ್ಟೆಯಲ್ಲಿ ಅಲಂಕರಿಸಲಾಗಿತ್ತು ಮತ್ತು ಅಧಿವೇಶನಕ್ಕೆ ಹಾಜರಾದ ಹೆಚ್ಚಿನ ಜನರು ಖಾದಿ ಮತ್ತು ಗಾಂಧಿ ಟೋಪ್ಪಿಗೆ ಧರಿಸಿದ್ದರು ಎಂಬುದು ಗಮನಾರ್ಹವಾಗಿತ್ತು.

ರಾಷ್ಟ್ರೀಯ ಕಾಂಗ್ರೆಸ್ ನಾಯಕರು ಹಿಂದಿನ ಅಧಿವೇಶನಕ್ಕಿಂತ ಈ ಎರಡನೇ ಅಧಿವೇಶನದಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿಸಿದ್ದರು ಎಂಬುದು ಮತ್ತಷ್ಟು ಗಮನಾರ್ಹವಾಗಿದೆ. ಗಾಂಧೀಜಿಯನ್ನು ಹೊರತುಪಡಿಸಿ, ಇತರ ಖ್ಯಾತ ಕಾಂಗ್ರೆಸ್ ಮುಖಂಡರು ಸಮ್ಮೇಳನಕ್ಕೆ ಅಭಿನಂದನಾ ಸಂದೇಶಗಳನ್ನು ಕಳುಹಿಸಿದ್ದರು.

ಎಐಟಿಯುಸಿ ಯ ಈ ಝರಿಯಾ ಅಧಿವೇಶನಕ್ಕೆ ರಾಷ್ಟ್ರೀಯ ಸನ್ನಿವೇಶದಲ್ಲಿ ಮಾತ್ರವಲ್ಲ, ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿತ್ತು. ಲಂಡನ್‌ನ ರೆಡ್ ಟ್ರೇಡ್ ಯೂನಿಯನ್ ಇಂಟರ್‌ನ್ಯಾಷನಲ್ ನ ಬ್ರಿಟಿಷ್ ಬ್ಯೂರೋ ಗಮನಾರ್ಹವಾಗಿ ಸಮ್ಮೇಳನದ ಅಧ್ಯಕ್ಷರನ್ನು ಉದ್ದೇಶಿಸಿ ಪತ್ರವನ್ನು ಬರೆದಿತ್ತು. ಇದಲ್ಲದೆ, "ಸಮ್ಮೇಳನಕ್ಕೆ ಸಂದೇಶಗಳನ್ನು ಕಳುಹಿಸಿದ ಪ್ರಮುಖ ಟ್ರೇಡ್ ಯೂನಿಯನ್ ಸಂಘಗಳು ಮತ್ತು ವಿದೇಶೀ ವ್ಯಕ್ತಿಗಳು: ವರ್ಕರ್ಸ್ ವೆಲ್ಫೇರ್ ಲೀಗ್ ಆಫ್ ಇಂಡಿಯಾ (ಲಂಡನ್), ಸ್ಕಾಟಿಷ್ ಟ್ರೇಡ್ ಯೂನಿಯನ್ ಕಾಂಗ್ರೆಸ್, ಐರಿಶ್ ಲೇಬರ್ ಪಾರ್ಟಿ ಮತ್ತು ಟ್ರೇಡ್ ಯೂನಿಯನ್ ಕಾಂಗ್ರೆಸ್ (ಡಬ್ಲಿನ್), ಮೈನರ್ಸ್ ಫೆಡರೇಶನ್ ಆಫ್ ಗ್ರೇಟ್ ಬ್ರಿಟನ್, ಬೋವರ್ಮನ್, ಎಂಪಿ (ಲಂಡನ್), ನಾರ್ವಿಚ್ ಲೇಬರ್ ಪಾರ್ಟಿ-ಇಂಡಸ್ಟ್ರಿಯಲ್ ಕೌನ್ಸಿಲ್; ಇ ಎಲ್ ಪೆಲ್ಟನ್, ಎಸ್ಕ್. (ಲಂಡನ್), ಎಲಿಜಬೆತ್ ವಿಲ್ಸನ್ (ಲೀಸೆಸ್ಟರ್), ಜಾರ್ಜ್ ಕೆಂಪ್ಟನ್ (ಲಂಡನ್), ಇಂಡಿಪೆಂಡೆಂಟ್ ಲೇಬರ್ ಪಾರ್ಟಿ (ಲಂಡನ್), ಜೆಸಿ ಬ್ರಿಸ್ಟನ್, ಎಸ್ಕ್ ., ಜವಳಿ ಕಾರ್ಮಿಕರ ಜನರಲ್ ಯೂನಿಯನ್ (ಹಡ್ಡರ್ಸ್‌ಫೀಲ್ಡ್), ಕೆಟ್ಟರಿಂಗ್ ಟ್ರೇಡ್ಸ್ ಮತ್ತು ಲೇಬರ್ ಕೌನ್ಸಿಲ್, ಆಲ್ಫ್ರೆಡ್ ಹಿಲ್ (ಲೀಸೆಸ್ಟರ್), ನ್ಯಾಷನಲ್ ಫೆಡರೇಶನ್ ಆಫ್ ಬಿಲ್ಡಿಂಗ್ ಟ್ರೇಡ್ ಆಪರೇಟಿವ್ಸ್ (ಲಂಡನ್), ಜಿಎಲ್ ಪೇಜ್, ಇಂಡಿಯನ್ ಟ್ರೇಡ್ ಯೂನಿಯನ್ (ಮೊಂಬಾಸಾ).

ಬ್ರಿಟಿಷ್ ಬ್ಯೂರೋ ಆಫ್ ರೆಡ್ ಟ್ರೇಡ್ ಯೂನಿಯನ್ ಇಂಟರ್‌ನ್ಯಾಷನಲ್‌ನ ಟಾಮ್ ಮನ್ ಮತ್ತು ಎನ್. ವಾಟ್ಕಿನ್ಸ್ ಅವರು ಬರೆದಿದ್ದ ಪತ್ರ ವಿಶೇಷವಾಗಿ ಗಮನಾರ್ಹವಾಗಿತ್ತು. ಬ್ರಿಟಿಷ್ ಕಾರ್ಮಿಕರು ತಮ್ಮ ಭಾರತೀಯ ವರ್ಗ ಸಹೋದರರನ್ನು ನಿಜವಾದ ಶ್ರಮಜೀವಿ ದೃಷ್ಟಿಕೋನದಿಂದ ಸಂಬೋಧಿಸಿರುವುದು ಅದೇ ಮೊದಲು.

ಎಐಟಿಯುಸಿಯ ಕಾರ್ಯಕಾರಿ ಸಮಿತಿಯ ಐದನೇ ಸಭೆ 1921 ರ ಜುಲೈ 30 ರಂದು ನಡೆಯಿತು ಮತ್ತು ಆ ವರ್ಷದ ಸೆಪ್ಟೆಂಬರ್‌ನಲ್ಲಿ ನಡೆಯಲಿದ್ದ ಬ್ರಿಟಿಷ್ ಟ್ರೇಡ್ ಯೂನಯನ್ ಕಾಂಗ್ರೆಸ್ ಅಧಿವೇಶನದಲ್ಲಿ ಎಐಟಿಯುಸಿಯನ್ನು ಪ್ರತಿನಿಧಿಸಲು ಬಿ. ಜಿ. ಹಾರ್ನಿಮನ್ ಮತ್ತು ಶಾಪುರ್ಜಿ ಸಕ್ಲತ್ವಾಲಾ ಅವರನ್ನು ನಾಮನಿರ್ದೇಶನ ಮಾಡಲಾಗಿತ್ತು. ಎಂದು ಇಲ್ಲಿ ಗಮನಿಸಬಹುದು.

ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಭಾರತದ ಕಾರ್ಮಿಕರನ್ನು ಮತ್ತು ಜನರನ್ನು ಗುಲಾಮರನ್ನಾಗಿ ಮತ್ತು ಕ್ರೂರವಾಗಿ ಶೋಷಿಸುವ ಮೂಲಕ ಬ್ರಿಟಿಷ್ ಆರ್ಥಿಕತೆಗೆ ಅಪಾರ ಸಂಪನ್ಮೂಲವನ್ನು ಸೇರಿಸುತ್ತಿದ್ದ ಸಮಯದಲ್ಲಿ ಬ್ರಿಟಿಷ್ ಕಾರ್ಮಿಕರ ಸಂಘಟನೆಯಿಂದ ಬಂದಂತ, ಈ ಪತ್ರದ ಬಲವಾದ ಸಾಮ್ರಾಜ್ಯಶಾಹಿ- ವಿರೋಧಿ ಸಾರಾಂಶವು ಭಾರತದ ಕಾರ್ಮಿಕ ಇತಿಹಾಸದಲ್ಲಿ ಎಲ್ಲ ಸಮಯದಲ್ಲೂ ಮರೆಯಲಾಗದೇ ಉಳಿಯುತ್ತದೆ ಮತ್ತು ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಭಾರತದ ಹೋರಾಟದ ವರ್ಷಗಳಲ್ಲಿ ಬಂದ ಈ ಪತ್ರವು ಶ್ರಮಜೀವಿಗಳ ಕ್ರಾಂತಿಕಾರಿ ಮತ್ತು ಅಂತರರಾಷ್ಟ್ರೀಯ ದೃಷ್ಟಿಕೋನವನ್ನು ಅದ್ಭುತವಾಗಿ ಪ್ರತಿಬಿಂಬಿಸುತ್ತದೆ ಮತ್ತು ಎಲ್ಲಾ ದೇಶಗಳ ಕಾರ್ಮಿಕರು ಒಂದೇ ವರ್ಗಕ್ಕೆ ಸೇರಿದವರು, ಅವರ ಆಸಕ್ತಿಯು ಅವಿಭಜಿತವಾಗಿದೆ ಮತ್ತು ವಸಾಹತುಶಾಹಿ ಜನರನ್ನು ಸಾಮ್ರಾಜ್ಯಶಾಹಿ ನೊಗದಿಂದ ವಿಮೋಚನೆಗೊಳಿಸುವುದು ವೇತನ- ಗುಲಾಮಗಿರಿಯ ಬಂಡವಾಳಶಾಹಿ ವ್ಯವಸ್ಥೆಯಿಂದ ಸಾಮ್ರಾಜ್ಯಶಾಹಿ ದೇಶದ ಕಾರ್ಮಿಕರ ವಿಮೋಚನೆಯ ಹಿತದೃಷ್ಟಿಯಿಂದ ಎಂಬ ಐತಿಹಾಸಿಕ ಸತ್ಯವನ್ನು ಎತ್ತಿಹಿಡಿದಿದೆ.

ವಸಾಹತುಗಳಲ್ಲಿ ಮತ್ತು ಸಾಮ್ರಾಜ್ಯಶಾಹಿ ದೇಶಗಳಲ್ಲಿ ಪ್ರಪಂಚದಾದ್ಯಂತ ಕಾರ್ಮಿಕರು ಸಾಮ್ರಾಜ್ಯಶಾಹಿಯ ವಿರುದ್ಧ ಭುಜಕ್ಕೆ ಭುಜಕೊಟ್ಟು ಹೋರಾಡಲು ಮತ್ತು ಹೊಸ ಸುಂದರ ಜಗತ್ತನ್ನು ಸೃಷ್ಟಿಸಲು ಈ ಪತ್ರದ ಪ್ರಚೋದನೆಯು ಆ ಕ್ಷಣದ ಮಿತಿಗಳನ್ನು ಮೀರಿತ್ತು ಮತ್ತು ಅಂತರರಾಷ್ಟ್ರೀಯ ಭ್ರಾತೃತ್ವ ಮತ್ತು ಭಾರತದ ಕಾರ್ಮಿಕ ವರ್ಗದ ಶ್ರಮಜೀವಿ ಪ್ರಜ್ಞೆಯ ಆರಂಭಿಕ ಅಭಿವೃದ್ಧಿಗೆ ಅಮೂಲ್ಯವಾದ ಕೊಡುಗೆ ನೀಡಿತು.

ಈ ಪತ್ರದ ಸಂಪೂರ್ಣ ಸಾರಾಂಶ ಮತ್ತು ಮನೋಭಾವವು ಮೂಲತಃ ಎಐಟಿಯುಸಿಯ ಉದ್ಘಾಟನಾ ಅಧಿವೇಶನದಲ್ಲಿ ಬ್ರಿಟಿಷ್ ಲೇಬರ್ ಪಕ್ಷದ ಪ್ರತಿನಿಧಿ ಹೇಳಿದ್ದಕ್ಕಿಂತ ಭಿನ್ನವಾಗಿತ್ತು.

**ಅಂತರರಾಷ್ಟ್ರೀಯ ಭ್ರಾತೃತ್ವದ ಮೊದಲ ಅಭಿವ್ಯಕ್ತಿ**

ಈ ಅಧಿವೇಶನದಲ್ಲಿ ತೆಗೆದುಕೊಂಡ ಒಂದು ಗಮನಾರ್ಹ ನಿರ್ಧಾರವು ಭಾರತದ ಕಾರ್ಮಿಕ ವರ್ಗದ ಅಂತರರಾಷ್ಟ್ರೀಯ ಭ್ರಾತೃತ್ವದ ಮೊದಲ ಅಭಿವ್ಯಕ್ತಿಯನ್ನು ಸೂಚಿಸುತ್ತದೆ. ವಿದೇಶಿ ಹಸ್ತಕ್ಷೇಪ ಮತ್ತು ಅಂತರ್ಯುದ್ಧದ ಅವಳಿ ಅಪಾಯಗಳನ್ನು ಎದುರಿಸುತ್ತಿದ್ದಾಗ, ಸೋವಿಯತ್ ರಷ್ಯಾ ತೀವ್ರ ಬರಗಾಲ ಮತ್ತು ಸಾಂಕ್ರಾಮಿಕ ರೋಗದ ಭೇಟಿಯಿಂದ ಮತ್ತೊಂದು ವಿಪತ್ತಿಗೆ ಸಿಲುಕಿತು. ತನ್ನ ಅಂತರರಾಷ್ಟ್ರೀಯ ಜವಾಬ್ದಾರಿಗಳನ್ನು ಅರಿತುಕೊಂಡ ಎಐಟಿಯುಸಿಯು ಝರಿಯಾ ಅಧಿವೇಶನವು ಒಂದು ಕಡೆ ರಷ್ಯಾದ ಕ್ಷಾಮದಿಂದ ಬಾಧಿತರಾದ ಜನರ ಬಗ್ಗೆ ಸಹಾನುಭೂತಿಯನ್ನು ವ್ಯಕ್ತಪಡಿಸಿತು ಮತ್ತು ಸಾಂಕೇತಿಕ ಸಹಾಯವನ್ನು ಕಳುಹಿಸಲು ನಿರ್ಧರಿಸಿತು ಮತ್ತು ಇನ್ನೊಂದೆಡೆ ಶಾಂತಿಯುತ ಹೋರಾಟದಲ್ಲಿ ಸೋವಿಯತ್ ಜನರೊಂದಿಗೆ ನಿಲ್ಲುವಂತೆ ಅಂತರರಾಷ್ಟ್ರೀಯ ಕಾರ್ಮಿಕ ವರ್ಗಕ್ಕೆ ಮನವಿ ಮಾಡಿತು.

ರಾಷ್ಟ್ರೀಯ ಪರಿಸ್ಥಿತಿಯಲ್ಲಿನ ಬದಲಾವಣೆಯು ಝರಿಯಾ ಅಧಿವೇಶನದ ನಡಾವಳಿಯಲ್ಲಿಯೂ ಚೆನ್ನಾಗಿ ಪ್ರತಿಫಲಿಸಿತು. ಮೊದಲ ಮತ್ತು ಎರಡನೆಯ ಅಧಿವೇಶನಗಳ ನಡುವಿನ ಅವಧಿಯಲ್ಲಿ, ಸ್ವಾತಂತ್ರ್ಯ ಚಳವಳಿ ಅಗಾಧ ವೇಗವನ್ನು ಗಳಿಸಿತ್ತು ಮತ್ತು, ರಾಷ್ಟ್ರೀಯ ಕಾಂಗ್ರೆಸ್‌ನ ನಾಗ್ಪುರ ಅಧಿವೇಶನವು ಸ್ವರಾಜ್ಯದ ಬೇಡಿಕೆಯನ್ನು ಅದರ ಕಾರ್ಯಸೂಚಿಯಲ್ಲಿ ಸೇರಿಸಿತ್ತು. ಆದ್ದರಿಂದ ಝರಿಯಾ ಅಧಿವೇಶನದಲ್ಲಿ ಚರ್ಚೆಗೆ ಬಂದ ಮೊದಲ ನಿರ್ಣಯ ಸ್ವರಾಜ್ಯ ಕುರಿತಾಗಿತ್ತು. ದಿವಾನ್ ಚಮನ್ ಲಾಲ್ ಅವರು ಮಂಡಿಸಿದ ಸ್ವರಾಜ್ಯ ಕುರಿತ ನಿರ್ಣಯವು, "ಈ ಟ್ರೇಡ್ ಯೂನಿಯನ್ ಅಧಿವೇಶನ ಭಾರತದ ಜನರು ಸ್ವರಾಜ್ಯ ಸಾಧಿಸುವ ಸಮಯ ಬಂದಿದೆ ಎಂದು ಘೋಷಿಸುತ್ತದೆ" ಎಂದು ಹೇಳಿತು. ಅಧಿವೇಶನವು ಅಂಗೀಕರಿಸಿದ ಎರಡನೇ ನಿರ್ಣಯವು ಗಾಂಧಿವಾದಿ ಚಿಂತನೆಯ ಸಂಕೇತವಾಗಿದೆ. ಈ ನಿರ್ಣಯವನ್ನು ಡಾರ್ಜಿಲಿಂಗ್‌ನ ಸಾವಿತ್ರಿ ದೇವಿ ಅವರು ಬಹಳ ಬಲವಾಗಿ ಮಂಡಿಸಿದರು, "ಈ ಟ್ರೇಡ್ ಯೂನಿಯನ್ ಕಾಂಗ್ರೆಸ್ ಭಾರತವನ್ನು ಸ್ವದೇಶಿ ತತ್ವವನ್ನು ಅಳವಡಿಸಿಕೊಳ್ಳಲು ಮತ್ತು ಕೈ ನೂಲುವ ಮತ್ತು ಕೈ ನೇಯ್ಗೆ ಎರಡನ್ನೂ ಪ್ರೋತ್ಸಾಹಿಸಲು ಶಿಫಾರಸು ಮಾಡುತ್ತದೆ" ಎಂದು ಹೇಳಿತು. ಈ ನಿರ್ಣಯವನ್ನು ಅಳವಡಿಸಿಕೊಳ್ಳುವುದರಿಂದ ವಾಸ್ತವವಾಗಿ ಟ್ರೇಡ್ ಯೂನಿಯನ್ ಕಾಂಗ್ರೆಸ್ ಗಾಂಧೀಜಿಯ ಚರಕಾ- ಆರ್ಥಿಕತೆಯನ್ನು ಬೆಂಬಲಿಸುತ್ತದೆ ಎಂದಾಗುತ್ತಿತ್ತು.

ಪ್ರಾರಂಭಿಕ ಶ್ರಮಜೀವಿ-ವರ್ಗ

ಪುಟ 14 ನೋಡಿ

ಪುಟ 8 ರಿಂದ

# ಮೂರು ತಿಂಗಳು ದಾಟಿದ ಅನನ್ಯ ರೈತ ಹೋರಾಟ

ಎಂಬಂತೆ ಬಳಸಿಕೊಳ್ಳಲು ಸರ್ಕಾರ ಟೊಂಕ ಕಟ್ಟಿ ನಿಂತಿದೆ. ಲಾಕ್ ಡೌನ್‌ನಿಂದಾದ ಆರೋಗ್ಯ, ಆರ್ಥಿಕ ದುಸ್ಥಿತಿಯನ್ನು ಪರಿಹರಿಸಲು ಕೆಲಸ ಮಾಡಬೇಕಿದ್ದ ಸರ್ಕಾರ ಶ್ರಮಿಕರ ಮತ್ತು ಜನತೆಯ ಮಾನವ ಹಕ್ಕುಗಳ ಮೇಲೆ ಆಕ್ರಮಣ ನಡೆಸುತ್ತಿದೆ.

ಈ ಪ್ರಯತ್ನದ ಭಾಗವಾಗಿಯೇ ಲಾಭದ ದುರಾಸೆಯ ಕೃಷಿ ಕಾರ್ಪೊರೇಟ್ ಸಂಸ್ಥೆಗಳಿಗೆ ರೈತ ಆರ್ಥಿಕತೆಯನ್ನು ಇಡಿಯಾಗಿ ಹಸ್ತಾಂತರಿಸಲು ನಿಂತಿರುವುದು. ಬೇಡಿಕೆಯ ಅಭಾವದಿಂದಾಗಿ ಇತರ ರಂಗಗಳಲ್ಲಿ ಹೂಡಿಕೆಗಳಿಗೆ ಇಲ್ಲದ ಅವಕಾಶ ಆಹಾರ ಆರ್ಥಿಕತೆಯಲ್ಲಿ ಕಾರ್ಪೊರೇಟ್‌ಗಳಿಗೆ ಕಾಣುತ್ತಿದೆ. ಏಕೆಂದರೆ ಇಲ್ಲಿ ಬೇರೆ ವಲಯಗಳಿಗೆ ಹೋಲಿಸಿದರೆ ಬೇಡಿಕೆ ಎಂಬುದು ಅನಿವಾರ್ಯ.

ಮೂರು ಕೃಷಿ ಕಾಯ್ದೆಗಳ ರದ್ದತಿ ಹಾಗೂ ಕನಿಷ್ಠ ಬೆಂಬಲ ಬೆಲೆ ಮತ್ತು ಸರಕಾರದಿಂದ ಖರೀದಿಯ ಶಾಸನಬದ್ಧ ಖಾತರಿಗೆ ನಿರಾಕರಿಸುತ್ತಿರುವಲ್ಲಿ ಸರ್ಕಾರದ ವರ್ಗ ಪಕ್ಷಪಾತ ಬಹಳ ಸ್ಪಷ್ಟವಾಗಿ ಕಾಣುತ್ತಿದೆ. ಎಪಿಎಂಸಿಗಳನ್ನು ಕ್ರಮೇಣ ಇಲ್ಲವಾಗಿಸುವುದು, ಕಾಂಟ್ರಾಕ್ಟ್ ಬೇಸಾಯದ ಮೂಲಕ ಬೆಳೆಗಳು, ಅವುಗಳ ಪ್ರಮಾಣ ಮತ್ತು ಗುಣಮಟ್ಟಗಳನ್ನು ಕಾರ್ಪೊರೇಟ್‌ಗಳ ಮರ್ಜಿಗೆ ಒಳಪಡಿಸಿ ಭೂಮಿಯ ಒಡೆತನವನ್ನು ನಾಮಮಾತ್ರಗೊಳಿಸುವುದು, ಅಗತ್ಯ ಸರಕುಗಳ ಕಾಯ್ದೆಯನ್ನು ತಿದ್ದುಪಡಿ ಮಾಡಿ ದಾಸ್ತಾನುಗಳ ಮೇಲಿನ ನಿಯಂತ್ರಣಗಳನ್ನು ತೆಗೆದು ಹಾಕಿ ಆಹಾರವನ್ನು ಲಾಭಕೋರತನಕ್ಕೆ ಒಳಪಡಿಸುವುದು ಇವುಗಳಲ್ಲಿ ಇದು ಸ್ಪಷ್ಟವಾಗಿ ಕಾಣುತ್ತದೆ. ಹಾಗಾಗಿಯೇ ಈ ಚಾರಿತ್ರಿಕ ರೈತ ಹೋರಾಟ ಕೇವಲ ರೈತಾಪಿ ಕೃಷಿಯ ರಕ್ಷಣೆಗೆ ಮಾತ್ರ ಎಂದು ತಿಳಿದರೆ ತಪ್ಪಾಗುತ್ತದೆ. ಇದು ಇಡೀ ದೇಶದ ಆಹಾರ ಭದ್ರತೆಯ ಹಕ್ಕನ್ನು ರಕ್ಷಿಸಲು ಕೂಡ ಎಂಬುದನ್ನು ಮರೆಯುವಂತಿಲ್ಲ.

**ಘೋರ ಪರಿಣಾಮಗಳು**

ಈ ಕೃಷಿ ಕಾಯ್ದೆಗಳು ಈಗಾಗಲೇ ತಮ್ಮ ಘೋರ ಪರಿಣಾಮಗಳನ್ನು ಹೊರ ಹಾಕುತ್ತಿವೆ .ಕರ್ನಾಟಕದ ಎಲ್ಲಾ ಎಪಿಎಂಸಿ ಗಳು ವಹಿವಾಟು ಇಲ್ಲದೇ ತಮ್ಮ ಆದಾಯದಲ್ಲಿ ಶೇ 50 ರಿಂದ ಶೇ 80 ರಷ್ಟು ಕುಸಿತ ಅನುಭವಿಸಿರುವ ಹಾಗೂ ಸಿಬ್ಬಂದಿಗಳನ್ನು ಶೇ 50 ಕ್ಕಿಂತ ಹೆಚ್ಚು ಕಡಿತಗೊಳಿಸುತ್ತಿರುವ ವರದಿಗಳು ಬರಲಾರಂಬಿಸಿವೆ.ಯಾವುದೇ ಸ್ಪರ್ಧಾತ್ಮಕ ಹರಾಜು ಪದ್ಧತಿ, ದಾಸ್ತಾನು ಸೌಲಭ್ಯ, ಹತಾಶ ಮಾರಾಟದಿಂದ ರಕ್ಷಣೆ ಇವ್ಯಾವುದು ಇಲ್ಲದ ಖಾಸಗಿ ಮಾರುಕಟ್ಟೆಗಳು ತಲೆ ಎತ್ತಲು ತಯಾರಿ ನಡೆಸುತ್ತಿವೆ. ಹಾಗಾಗಿಯೇ ಈ ರೈತ ಚಳವಳಿ ರೈತ ವಿರೋಧಿ ಕೃಷಿ ಕಾಯ್ದೆಗಳ ವಿರುದ್ಧ ಮಾತ್ರ ಮಾತಾಡದೇ ಈ ಕಾಯ್ದೆಗಳ ಫಲಾನುಭವಿಗಳಾದ ಅದಾನಿ –ಅಂಬಾನಿಯಂತಹ ಕಾರ್ಪೊರೇಟ್ ದೈತ್ಯರ ವಿರುದ್ಧವು ಧ್ವನಿ ಎತ್ತಿದೆ.

ಬೆಂಬಲ ಬೆಲೆಯಲ್ಲಿ ಖಾತರಿ ಖರೀದಿ ಎನ್ನುವುದು ಸಾರ್ವಜನಿಕ ಪಡಿತರ ವ್ಯವಸ್ಥೆ (ಪಿಡಿಎಸ್) ಉಳಿವಿಗೆ ಅತ್ಯಂತ ಅನಿವಾರ್ಯದ ಅಗತ್ಯ. ಇದು ಒಂದೇ ನಾಣ್ಯದ ಎರಡು ಮುಖ. ಬೆಂಬಲ ಬೆಲೆಯಲ್ಲಿ ಖಾತರಿ ಖರೀದಿ ಪಡಿತರ ವಿತರಣಾ ವ್ಯವಸ್ಥೆಗೆ ಬೇಡಿಕೆಯನ್ನು ಸಹ ತಂದುಕೊಡುತ್ತದೆ. ಬೇಡಿಕೆ ಪೂರೈಸಬೇಕಾದರೆ ದಾಸ್ತಾನು ಮತ್ತು ಪೂರೈಕೆ ಸಾಮಾರ್ಥ್ಯ ಮತ್ತು ಜಾಲವನ್ನು ವಿಸ್ತರಿಸಬೇಕಾದ ಅಗತ್ಯ ಕೂಡ ಉಂಟು ಮಾಡುತ್ತದೆ.

ಕೃಷಿ ಲಾಗುವಾಡುಗಳಾದ ಬೀಜ, ನೀರಾವರಿ, ವಿದ್ಯುತ್, ಡಿಸೇಲ್, ರಸಗೊಬ್ಬರ, ಕೀಟನಾಶಕ ಇತ್ಯಾದಿಗಳನ್ನು ಕಾರ್ಪೊರೇಟ್ ಕಂಪನಿಗಳ ಹಿಡಿತಕ್ಕೆ ವಹಿಸಿರುವ ಕಾರಣದಿಂದ ಬೇಸಾಯ ಅತ್ಯಂತ ದುಬಾರಿಯಾಗಿ ಪರಿಣಮಿಸಿದೆ. ಇದರಿಂದಾಗಿಯೇ ರೈತ ತಾನು ಕೃಷಿಯಲ್ಲಿ ಉಳಿದುಕೊಳ್ಳಬೇಕಾದರೆ ಬೇಸಾಯಕ್ಕೆ ಮಾಡಿರುವ ವೆಚ್ಚ ವನ್ನು ಮರಳಿ ಪಡೆಯಲೇಬೇಕಾದ ಅನಿವಾರ್ಯತೆ ಯನ್ನು ಸೃಷ್ಟಿಸಿದೆ. ಈ ಕಾರಣಕ್ಕಾಗಿಯೇ ರೈತಾಪಿ ಕೃಷಿಯನ್ನು ಉಳಿಸಲು ಅಗತ್ಯವಾದ ಸ್ವಾಮಿನಾಥನ್ ಆಯೋಗ ಶಿಫಾರಸ್ಸಾದ ಸಮಗ್ರ ಉತ್ಪಾದನಾ ವೆಚ್ಚಕ್ಕೆ ಶೇಕಡಾ ಐವತ್ತು ಲಾಭಾಂಶ ಸೇರಿಸಿ (ಸಿ2+50%) ನಿಗದಿಪಡಿಸಿದ ಕನಿಷ್ಠ ಬೆಂಬಲ ಬೆಲೆಯಲ್ಲಿ ಖರೀದಿಗೆ ಖಾತರಿ ನೀಡಬೇಕು ಎಂಬ ಬೇಡಿಕೆಯನ್ನು ಬಲವಾಗಿ ಪ್ರತಿಪಾದಿಸುತ್ತಿರುವುದು .ಆದರೆ ಸರ್ಕಾರಗಳು ದಾಸ್ತಾನು ಮತ್ತು ಪೂರೈಕೆ ಜಾಲವನ್ನು ಖಾಸಗಿ ಕಂಪನಿಗಳಿಗೆ ವಹಿಸುತ್ತಿವೆ. ಕೃಷಿ ಉತ್ಪನ್ನಗಳ ಖರೀದಿ ಬೇಡಿಕೆಗೆ ನಿರುತ್ಸಾಹ ಹಾಗೂ ನಿರಾಸಕ್ತಿಯ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತಿವೆ.

ಹಾಗಾಗಿಯೇ ಪಡಿತರ ಪಡೆಯಲು ಅತ್ಯಂತ ಅಸಹ್ಯ,ಹಾಸ್ಯಾಸ್ಪದ ಮಾನದಂಡಗಳಗಳನ್ನು ಜಾರಿ ಮಾಡಲು ಪ್ರಯತ್ನಿಸುತ್ತಿವೆ.ಈ ಮೂಲಕ ಆದಷ್ಟೂ ಜನರನ್ನು ಅದ್ಯತಾ ಕುಟುಂಬಗಳ ಪಟ್ಟಿಯಿಂದ ಹೊರ ಹಾಕಿ,ಅನಿವಾರ್ಯವಾಗಿ ಉಳಿದು ಕೊಂಡ ಫಲಾನುಭವಿಗಳನ್ನು ಗ್ಯಾಸ್ ಸಬ್ಸಿಡಿ ವಿಷಯದಲ್ಲಿ ಆದಂತೆ ನೇರ ನಗದು ವರ್ಗಾವಣೆ ಮೂಲಕ ಆಕರ್ಷಿಸಿ ಪಡಿತರ ವ್ಯವಸ್ಥೆ ಸೇರಿದಂತೆ ಐಸಿಡಿಎಸ್, ಶಾಲಾ ಬಿಸಿಯೂಟ ಯೋಜನೆಗಳನ್ನು ನಿರ್ಮೂಲನೆ ಮಾಡಲಾಗುತ್ತಿದೆ.

**ರೈತ ಒಗ್ಗಟ್ಟು ಬೆಳೆದದ್ದು ಹೇಗೆ?**

ದೆಹಲಿ ರೈತ ಹೋರಾಟಕ್ಕೆ ಇಷ್ಟು ದೊಡ್ಡ ಸಂಖ್ಯೆಯ ಜನ ಹೇಗೆ ಬಂದರು ಎನ್ನುವುದು ಕೂಡ ಈಗ ಚರ್ಚೆಯಾಗುತ್ತಿರುವ ವಿಷಯ. ಈ ಒಗ್ಗಟ್ಟನ್ನು ನೀವು ಕಾಣಬೇಕಾದರೆ ರೈತರ ಒಪ್ಪಿಗೆ ಇಲ್ಲದೇ ಭೂಮಿ ಸ್ವಾಧೀನಕ್ಕೆ ತೆಗೆದುಕೊಳ್ಳುವ ಭೂಸ್ವಾದೀನ ಸುಗ್ರೀವಾಜ್ಞೆ ರದ್ದು ಮಾಡಿಸಿಕೊಂಡ 2016 ರ ಚಳುವಳಿಯನ್ನು ನೆನಪಿಸಿಕೊಳ್ಳಬೇಕು.

ಈ ಸುಗ್ರಿವಾಜ್ಞೆಯನ್ನು ಶತಾಯಗತಾಯ ಜಾರಿ ಮಾಡಲೇಬೇಕೆಂದು ಹಲವು ಬಾರಿ ವಿಸ್ತರಿಸಲಾಗಿತ್ತು. ಭೂಮಿ ಅಧಿಕಾರ್ ಆಂದೋಲನದ ಮೂಲಕ ಒಗ್ಗಟ್ಟಿನ ಚಳವಳಿ ಮುಂದೆ ಇದೇ ಮೋದಿ ಸರ್ಕಾರ ಸೋಲಬೇಕಾಯಿತು.

ನವೆಂಬರ್ 2016 ರ ನೋಟು ರದ್ದು ಮುಂತಾದ ಮೋದಿ ಸರ್ಕಾರದ ಕ್ರಮಗಳಿಂದ ಕೃಷಿ ಉತ್ಪನ್ನಗಳ ಬೆಲೆ ಕುಸಿಯಿತು. ಕೃಷಿ ಉತ್ಪನ್ನಗಳ ಖರೀದಿಗೆ ಕನಿಷ್ಠ ಬೆಂಬಲ ಬೆಲೆ ಖಾತರಿ ಗೆ ಹಾಗೂ ಸಾಲ ಬಾಧೆ ಯಿಂದ ನರಳುತ್ತಿರುವ ರೈತಾಪಿ ಸಮುದಾಯವನ್ನು ಋಣಮುಕ್ತಗೊಳಿಸಲು ಒಂದು ಬಲವಾದ ಚಳವಳಿ ನಡೆಸಲು 2017 ರಲ್ಲಿ ಅಖಿಲ ಭಾರತ ರೈತ ಸಂಘರ್ಷ ಸಮನ್ವಯ ಸಮಿತಿ (ಎಐಕೆಎಸ್‌ಸಿಸಿ ) ಅಸ್ತಿತ್ವಕ್ಕೆ ಬಂತು. ಇದೇ ಎಐಕೆಎಸ್‌ಸಿಸಿ ನೇತೃತ್ವದಲ್ಲಿ ಜೂನ್ 5 ,2020 ರ ಈ ಮೂರು ಸುಗ್ರಿವಾಜ್ಞೆಗಳನ್ನು ವಿರೋಧಿಸಿ ನಿರಂತರವಾಗಿ ಹಲವು ಹಂತಗಳ ಹೋರಾಟಗಳು ನಡೆದಿದ್ದು.

ರಾಜ್ಯಪಟ್ಟಿಯಲ್ಲಿ ಬರುವ ಕೃಷಿ ವಿಷಯದ ಮೇಲೆ ಕಾನೂನು ಮಾಡುವ ಅಧಿಕಾರ ಇಲ್ಲದೇ ಇದ್ದರೂ ಸಂವಿಧಾನ ವಿರೋಧಿಯಾದ ಶಾಸನ ಅಂಗೀಕರಿಸಿದ್ದು, ರಾಜ್ಯಸಭೆಯಲ್ಲಿ ಬಹುಮತ ಇಲ್ಲದೇ ಇದ್ದರೂ ಮತ ವಿಭಜನೆಯ ಅವಕಾಶ ನಿರಾಕರಿಸಿ ಸಂಸದೀಯ ನಿಯಮಗಳಿಗೆ ವಿರುದ್ಧವಾಗಿ ಶಾಸನ ಅಂಗೀಕರಿಸಿದ್ದು, ಲೋಕಸಭೆಯಲ್ಲಿ ಚರ್ಚೆಗೆ ಅವಕಾಶ ನೀಡದೇ ಇದ್ದದ್ದು, ಇವೆಲ್ಲವಕ್ಕೂ ಮೇಲಾಗಿ ಈ ಶಾಸನಗಳ ಸಂವಿಧಾನಾತ್ಮಕ ಸಿಂಧುತ್ವವನ್ನು ಪರಾಮರ್ಶೆಗೆ ಒಳಪಡಿಸಲು ನ್ಯಾಯಾಂಗ ನಿರಾಕರಿಸಿದ್ದು ಈ ರೈತ ವಿರೋಧಿ ಕಾನೂನುಗಳನ್ನು ಬೀದಿಯಲ್ಲಿ ಎದುರಿಸಬೇಕಾದ ಅನಿವಾರ್ಯತೆಯನ್ನು ಸೃಷ್ಟಿ ಮಾಡಿತು. ಅದ್ದರಿಂದಲೇ 250 ಕ್ಕೂ ಹೆಚ್ಚು ಸಂಘಟನೆಗಳ ಎಐಕೆಎಸ್‌ಸಿಸಿ ನವೆಂಬರ್ 26, 2020 ರಂದು ದೆಹಲಿ ಚಲೋ ನಡೆಸುವಂತೆ ಕರೆ ನೀಡಿದ್ದು.

ಈಗ ಹೋರಾಟದ ಕಣದಲ್ಲೇ ಕೃಷಿ ಕಾಯ್ದೆಗಳ ವಿರುದ್ಧ ಜನಾಕ್ರೋಶ ಮತ್ತಷ್ಟು ಬೆಳೆದು 500 ಕ್ಕೂ ಹೆಚ್ಚು ಸಂಘಟನೆಗಳ ಸಂಯುಕ್ತ ಕಿಸಾನ್ ಮೋರ್ಚಾ (ಎಸ್.ಕೆ.ಎಂ.) ರೂಪುಗೊಂಡಿದೆ. ಹಿರಿಯ ಸಿಪಿಐ(ಎಂ) ಮುಖಂಡರಾದ ನೀಲೋತ್ಪಲ ಬಸು ಹೇಳುವಂತೆ ಈ ಸಂಘಟನೆಯಲ್ಲಿನ ಪ್ರಜಾಸತ್ತಾತ್ಮಕ ಮತ್ತು ಸಮಾಲೋಚನಾ ಕಾರ್ಯವಿಧಾನದಿಂದಾಗಿ ಇದು ಪ್ರಸಕ್ತ ಸನ್ನಿವೇಶದಲ್ಲಿ ರೈತಾಪಿಗಳ ನಡುವೆ ಇರುವ ಪ್ರಾದೇಶಿಕ, ರಾಜಕೀಯ ಮತ್ತು ಸೈದ್ಧಾಂತಿಕ ವೈವಿಧ್ಯತೆಗಳನ್ನು ಬಿಂಬಿಸುವ ಒಂದು ವಿಶಾಲ ರೈತ ಮಹಾಒಕ್ಕೂಟವಾಗಿ ಬೆಳೆದಿದೆ (Kisan Movement: Exploring the Class Underpinnings, People's Democracy, ಫೆಬ್ರುವರಿ21) , ಕೃಷಿ ಕಾಯ್ದೆಗಳ ರದ್ದತಿ ಮಾತ್ರವೇ ಅಲ್ಲ, ಆ ನಂತರದ ಇಡೀ ದೇಶದ ಆರ್ಥಿಕತೆಯ ಬೆನ್ನೆಲುಬಾದ ರೈತಾಪಿ ಆರ್ಥಿಕತೆಯನ್ನು ಬಲಪಡಿಸಲು ಅಗತ್ಯವಾದ ಪರ್ಯಾಯ ಕೃಷಿ ಧೋರಣೆಗಾಗಿ ಸ್ಪಷ್ಟವಾದ ಗುರಿ ಉದ್ದೇಶಗಳ ಕಡೆಗೆ ಸಾಗುತ್ತಿದೆ.

## ಮುಂದಿನ ದಾರಿ: ಒಂದು ಸುಸ್ಥಿರ ಪರ್ಯಾಯದತ್ತ

ಮುಂದಿನ ಹೋರಾಟ ಕೃಷಿ ಕಾಯ್ದೆಗಳ ರದ್ದತಿ ಮತ್ತು ಎಂಎಸ್‌ಪಿಗೆ ಶಾಸನಾತ್ಮಕ ಖಾತರಿಗಳಿಗೇ ಸೀಮಿತವಾಗಿರಲು ಸಾಧ್ಯವಿಲ್ಲ ಎಂಬುದು ಸ್ಪಷ್ಟ. ಸರಕಾರ ಕೃಷಿ ವಲಯದಲ್ಲಿ ಅಂತರಾಷ್ಟ್ರೀಯ ಹಣಕಾಸು ಹಿತಾಸಕ್ತಿಗಳ ನೇತೃತ್ವದ ಕಾರ್ಯತಂತ್ರಕ್ಕೆ ಶರಣಾಗಿದೆ. ಕೃಷಿಯನ್ನು ಜಾಗತಿಕ ಕೃಷಿ–ವ್ಯಾಪಾರದೊಂದಿಗೆ ಸಮಗ್ರೀಕರಿಸುವ ಐಎಂಎಫ್ ಮತ್ತು ವಿಶ್ವಬ್ಯಾಂಕ್ ಪ್ರಸ್ತಾವನೆಗಳನ್ನೇ ಅದು ಅನುಸರಿಸುತ್ತಿದೆ. ಆದರೆ ಭಾರತದ ಕೃಷಿ ಪರಿದೃಶ್ಯ ಸಂಪೂರ್ಣವಾಗಿ ಭಿನ್ನವಾಗಿದೆ. ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಸರಾಸರಿ ಬೇಸಾಯ ಕ್ಷೇತ್ರ 450 ಎಕ್ರೆಯಾದರೆ, ಭಾರತದಲ್ಲಿ 1.5 ಎಕ್ರೆ. ಸರಕಾರಗಳು ಕೃಷಿಗೆ ಕೊಡುವ ಸಬ್ಸಿಡಿಗಳಲ್ಲೂ ಅಪಾರ ಭಿನ್ನತೆಗಳಿವೆ. ಇದರಿಂದಾಗಿ ಭಾರತದಲ್ಲಿನ ಸನ್ನಿವೇಶ ಅನನ್ಯ. ಭಾರತೀಯ ಕೃಷಿಯನ್ನು ಸುಧಾರಿಸುವಲ್ಲಿ 'ತಲೆಗೆಲ್ಲಾ ಒಂದೇ ಮಂತ್ರ' ಎಂಬಂತಹ ನಿಲುವು ನಮ್ಮ ಜನಸಂಖ್ಯೆಯ 60ಶೇ.ದಷ್ಟಿರುವ ಕೃಷಿ ಸಮುದಾಯದ ಮರಣಗೀತೆಯಾಗುತ್ತದೆಯಷ್ಟೇ ಅಲ್ಲ, ನಮ್ಮ ಬಹುಪಾಲು ಜನಗಳ ಆಹಾರ ಸ್ವಯಂಪೂರ್ಣತೆ ಮತ್ತು ಆಹಾರ ಭದ್ರತೆಯನ್ನು ಸಂಪೂರ್ಣವಾಗಿ ಧ್ವಂಸ ಮಾಡುತ್ತದೆ. ಐಎಂಎಫ್ ಈ ಕೃಷಿ ಕಾಯ್ದೆಗಳನ್ನು ಅನುಮೋದಿಸಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ.


ಆದ್ದರಿಂದ ಈಕೃಷಿ ಕಾಯ್ದೆಗಳನ್ನು ರದ್ದಗೊಳಿಸುವುದು ಸಾಮಾನ್ಯ ಕನಿಷ್ಟ ಕಾರ್ಯಕ್ರಮ. ಇದರೊಂದಿಗೆ, ಉತ್ಪಾದನೆ ಮತ್ತು ವಎಚ್ಚದ ಒಂದು ಸರಿಯಾದ ಅಂದಾಜು, ಖಾತ್ರಿ ಎಂಎಸ್‌ಪಿಯೊಂದಿಗೆ ಅದರ ಕೊಂಡಿ, ಗ್ರಾಮೀನ ಉದ್ಯೋಗ ಖಾತ್ರಿ ಯೋಜನೆಗೆ ಹಣ ವಿನಿಯೋಗ ಮತ್ತು ಜಾರಿ, ಸಾಮೂಹಿಕ ಮಾರಾಟ ವ್ಯವಸ್ಥೆ, ದಾಸ್ತಾನು, ಸಂಸ್ಕರಣೆ ಮತ್ತು ಮೂಲರಚನೆಗಳೊಂದಿಗೆ ರೈತ ಉತ್ಪಾದಕರ ಸಂಘಟನೆಗಳ ರಚನೆ, ಕೃಷಿಸಾಲ ಮನ್ನಾ, ಆದ್ಯತೆಯ ವಲಯದ ಸಾಲನೀಡಿಕೆಗಳ ವಿಸ್ತರಣೆ ಮತ್ತು ವ್ಯಾಪಾರ ಒಪ್ಪಂದಗಳ ಮರುವಿಮರ್ಶೆ ಇವೆಲ್ಲವೂ ಕೂಡ ಅಗತ್ಯವಾಗಿದೆ. ಇದು ವಿಭನ್ನ ಹಿತಗಳು ಮತ್ತು ಆದ್ಯತೆಗಳಿರುವ ರೈತಾಪಿಗಳ ವರ್ಗ ಐಕ್ಯತೆಯನ್ನು ಕಾಯ್ದುಕೊಳ್ಳಲು ಮಾತ್ರವಲ್ಲ, ಒಟ್ಟಾರೆಯಾಗಿ ಬಾರತದ ಆರ್ಥಿಕತೆಯ ಬೆನ್ನಲುಬಾದ ರೈತ ಆರ್ಥಿಕತೆಯನ್ನು ಸುಸ್ಥಿರಗೊಳಿಸಲು ಕೂಡ ಅಗತ್ಯವಾಗಿದೆ. ಇದು ಇದು ಇತರ ವಲಯಗಳಲ್ಲೂ ಚೈತನ್ಯವನ್ನು ತುಂಬುತ್ತದೆ. ಈ ಒಟ್ಟಾರೆ ಪ್ರಯತ್ನದಲ್ಲಿ ಒಂದು ನಿರ್ಣಾಯಕ ಅಂಶವಿದು. ಪ್ರಸಕ್ತ ಹೋರಾಟ ಖಂಡಿತವಗಿಯೂ ಈ ಪರ್ಯಾಯ ಕಣ್ಣೋಟಕ್ಕೆ ಸ್ಫೂರ್ತಿ ತುಂಬಿದೆ.

**–ನೀಲೋತ್ಪಲ ಬಸು**

(Kisan Movement: Exploring the Class Underpinnings ಲೇಖನದಲ್ಲಿ)

## ನ್ಯೂ ಇಂಡಿಯಾ ನ್ಯೂಸ್


ಅಹಮದಾಬಾದಿನ ಮೊಂಟೆರದಲ್ಲಿರುವ ಕ್ರಿಕೆಟ್ ಕ್ರೀಡಾಂಗಣ ಇದುವರೆಗೆ ಸರ್ದಾರ್ ಪಟೇಲ್ ಕ್ರಿಕೆಟ್ ಸ್ಟೇಡಿಯಂ ಎಂಬ ಹೆಸರನ್ನು ಹೊಂದಿತ್ತು. ಫೆಬ್ರುವರಿ 24ರಂದು ರಾಷ್ಟ್ರಪತಿಗಳು ಅದನ್ನು ನರೇಂದ್ರ ಮೋದಿ ಸ್ಟೇಡಿಯಂ ಎಂದು ಮರುನಾಮಕರಣ ಮಾಡಿದ್ದಾರೆ. ಗುಜರಾತ್ ಕ್ರಿಕೆಟ್ ಅಸೋಸಿಯೇಷನ್ ಇದನ್ನು 1983ರಲ್ಲಿ ನಿರ್ಮಾಣ ಮಾಡಿತು. 2006ರಲ್ಲಿ ಇದರ ನವೀಕರಣ ನಡೆಯಿತು. 2015ರಲ್ಲಿ ಇದನ್ನು ಮುಚ್ಚಲಾಯಿತು–ಮತ್ತೊಂದು ನವೀಕರಣಕ್ಕೋ ಅಥವ ಪುನರ‍್ರಚನೆಗೋ ಎಂಬ ಸಂದೇಹ ಹಲವರಲ್ಲಿದೆ. ಪೆಟ್ರೋಲ್ ಬೆಲೆ ಲೀಟರಿಗೆ 100ರೂ. ಸಮೀಪಿಸುತ್ತಿರುವ ವೇಳೆಯಲ್ಲಿ ಈ ಮರುನಾಮಕರಣ, ಅದರಲ್ಲೂ ದೇಶದ ಈಗಿನ ಸನ್ನಿವೇಶದಲ್ಲಿ ಸ್ವತಃ ಸರ್ದಾರ್ ಪಟೇಲರ ಹೆಸರನ್ನೇ ಬದಲಾಯಿಸಿದ್ದು ವ್ಯಂಗ್ಯಚಿತ್ರಕಾರರ ಗಮನ ಸೆಳೆದಿದೆ. ಇಲ್ಲಿ ನಾಲ್ಕು ಉದಾಹರಣೆಗಳಿವೆ.




ಪೆಟ್ರೋಲ್ ಶತಕದ ಸ್ಮರಣಾರ್ಥ–**ಅಲೋಕ್ ನಿರಂತರ್**




ಎಷ್ಟೊಂದು ವಿನಯಶೀಲರು! ಆಟದ ಮರುನಾಮಕರಣವನ್ನೇ ಮಾಡಬಹಯಹುದಿತ್ತು, ಕೇವಲ ಸ್ಟೇಡಿಯಂನ ಮರುನಾಮಕರಣವನ್ನಷ್ಟೇ ಮಾಡಿದ್ದಾರೆ. –**ಮಂಜುಲ್**




ಜಗತ್ತಿನ ಅತ್ಯುತ್ತಮ ಸ್ಪಿನ್ನರ್‌ಗೆ (ಕಥನ ಹೊಸೆಯುವವರಿಗೆ) ಎಂತಹ ಅದ್ಭುತ ಗೌರವ! –**ಸಜಿತ್ ಕುಮಾರ್**, ಡೆಕ್ಕನ್ ಹೆರಾಲ್ಡ್




ಇಂಡಿಯಾ ಮರುನಾಮಕರಣ–ರಿಲಯನ್ಸ್ ಎಂಡ್ ಮತ್ತು ಅದಾನಿ ಎಂಡ್ – **ದಿನೇಶ್ ಕುಕ್ಕುಜಡ್ಕ**

# ನರೇಂದ್ರ ಮೋದಿ ಸರ್ವಜ್ಞರೇನಲ್ಲ

## ಎಂದು ತೋರಿಸುತ್ತಿದೆ ರೈತರ ಹೋರಾಟ




**ಮೋದಿ ಸರ್ವಜ್ಞರು ಎಂಬ ಮಿಥ್ಯೆಯನ್ನು ಪ್ರಜ್ಞಾಪೂರ್ವಕವಾಗಿ ಪೋಷಿಸಲಾಗುತ್ತಿದೆ, ಏಕೆಂದರೆ, ನವ-ಉದಾರವಾದಿ ಕಾರ್ಯಸೂಚಿಯನ್ನು ಮುಂದಕ್ಕೆ ಕೊಂಡೊಯ್ಯಲು ಅದೊಂದು ಸಾಧನ. ಮೋದಿ ಸರ್ವಜ್ಞರು ಎಂಬ ಮಿಥ್ಯೆಯು ಅವರ ಅಹಂಕಾರವನ್ನು ಉಬ್ಬಿಸುವ ಹೊತ್ತಿನಲ್ಲೇ ನವ-ಉದಾರವಾದದ ಕಾರ್ಯಭಾರವನ್ನು ನಿರ್ವಹಿಸುತ್ತಿದೆ. ಆದ್ದರಿಂದ, ಮೋದಿ ಸರ್ವಜ್ಞರು ಎಂಬ ಮಿಥ್ಯೆಯನ್ನು ಉಳಿಸಿ ಬೆಳೆಸುವುದು ನವ-ಉದಾರವಾದದ ಅವಶ್ಯಕತೆ. ಆದರೆ ರೈತರು ತಮ್ಮ ಪ್ರತಿಭಟನೆಯ ಮೂಲಕ ಈ "ಸರ್ವಜ್ಞ" ಮಿಥ್ಯೆಯ ಗಾಳ ತೆಗೆಯುತ್ತಿದ್ದಾರೆ. ಈ ಕಾನೂನುಗಳು ರದ್ದಾದಾಗ ಈ ಮಿಥ್ಯೆಯನ್ನು ಹರಿದಿರುವುದು ದಿಟವಾಗುತ್ತದೆ ಮಾತ್ರವಲ್ಲ, ಅದೇ ಸಮಯದಲ್ಲಿ ನವ-ಉದಾರವಾದವನ್ನು ನಿರ್ಣಾಯಕವಾಗಿ ಹಿಮ್ಮೆಟ್ಟಿಸಿದಂತಾಗುತ್ತದೆ. ಒಮ್ಮೆ ಹಿಮ್ಮೆಟ್ಟಿದ ನಂತರ, ನವ-ಉದಾರವಾದವನ್ನು ಮತ್ತೊಮ್ಮೆ ಜಾರಿಗೊಳಿಸಲಾಗದು. ಈ ಕಾರಣದಿಂದಾಗಿಯೇ, ಈ ಮೂರೂ ಕಾಯ್ದೆಗಳಿಗೆ ಅವುಗಳ ಚೌಕಟ್ಟಿಗೆ ಹೊಂದಿಕೊಳ್ಳುವ ಕೆಲವು ತಿದ್ದುಪಡಿಗಳನ್ನು ಮಾಡುವುದಾಗಿ ಸರ್ಕಾರವು ಪದೇ ಪದೇ ಹೇಳುತ್ತಿರುವುದು, ಆದರೆ, ಕಾಯ್ದೆಗಳನ್ನು ಅನಾಮತ್ತಾಗಿ ರದ್ದುಪಡಿಸುವುದನ್ನು ಸಂಪೂರ್ಣವಾಗಿ ವಿರೋಧಿಸುತ್ತಿರುವುದು.**

**ಪ್ರೊ. ಪ್ರಭಾತ್ ಪಟ್ನಾಯಕ್** ಅನು: ಕೆ.ಎಂ.ನಾಗರಾಜ್

ಭಾರತದಲ್ಲಿ ಕಳೆದ ಕೆಲವು ವರ್ಷಗಳಿಂದಲೂ ಕಾರ್ಪೊರೇಟ್-ಹಿಂದುತ್ವ ಕೂಟವು ಹೊಂದಿದ್ದ ಪ್ರಾಬಲ್ಯವನ್ನು ಸಡಿಲಗೊಳಿಸುವ ನಿಟ್ಟಿನಲ್ಲಿ ರೈತರ ಹೋರಾಟವು ಒಂದು ದೊಡ್ಡ ಹೆಜ್ಜೆಯಾಗಿದೆ. ರೈತರು, ಕುಶಲಕರ್ಮಿಗಳು, ಮೀನುಗಾರರು ಮುಂತಾದ ಸಣ್ಣ ಸಣ್ಣ ಉತ್ಪಾದಕರನ್ನು ನುಂಗಿ ನೊಣೆಯುವ ಸಹಜ ಪ್ರವೃತ್ತಿಯನ್ನು ಹೊಂದಿರುವ ದೊಡ್ಡ ದೊಡ್ಡ ಬಂಡವಾಳಗಾರರನ್ನು ಹಿಡಿತದಲ್ಲಿಡುವ ಸಲುವಾಗಿ ಅವರ ಮೇಲೆ ಇರಿಸಿದ್ದ ಸಂಕೋಲೆಗಳನ್ನು ನವ-ಉದಾರವಾದದ ಆಳ್ವಿಕೆಯಲ್ಲಿ ಕ್ರಮೇಣ ಕಿತ್ತುಹಾಕಲಾಗಿದೆ. ಹಾಗಾಗಿ, ರೈತರು, ಕುಶಲಕರ್ಮಿಗಳು, ಮೀನುಗಾರರು ಮುಂತಾದ ಸಣ್ಣ ಸಣ್ಣ ಉತ್ಪಾದಕರೆಲ್ಲರೂ ಅದರ ಬಲಿಪಶುಗಳಾದರು. ಅದರ ಆಳ್ವಿಕೆಯಲ್ಲಿ ಕಾರ್ಮಿಕರ ಹಕ್ಕುಗಳ ಮೇಲೆ ನಡೆದ ದಾಳಿಗಳ ಕುರಿತ ಮಾಹಿತಿ ಸಾಕಷ್ಟು ಜನರಿಗೆ ಗೊತ್ತಿದೆಯಾದರೂ, ರೈತರು, ಕುಶಲಕರ್ಮಿಗಳು, ಮೀನುಗಾರರು ಮುಂತಾದವರ ಹಕ್ಕುಗಳ ಮೇಲೆ ಅದು ನಡೆಸಿದ ದಾಳಿಗಳ ಬಗ್ಗೆ ಗೊತ್ತಿರುವ ಮಾಹಿತಿ ಕಡಿಮೆಯೇ.

ರೈತರು, ಕುಶಲಕರ್ಮಿಗಳು, ಮೀನುಗಾರರು ಮುಂತಾದ ಸಣ್ಣ ಸಣ್ಣ ಉತ್ಪಾದಕರ ಕಸುಬುಗಳನ್ನು ದೊಡ್ಡ ದೊಡ್ಡ ಬಂಡವಾಳಗಾರರು ಅತಿಕ್ರಮಿಸದಂತೆ ಈ ಹಿಂದಿನ 'ಮಧ್ಯಪ್ರವೇಶಕ ಶಾಸನ ವ್ಯವಸ್ಥೆಯು (1991ರ ಹಿಂದಿನ ಆಡಳಿತಗಳು) ಅವರ ಮೇಲೆ ಕೆಲವು ನಿರ್ಬಂಧಗಳನ್ನು ವಿಧಿಸಿತ್ತು: ಕೆಲವು ವಸ್ತುಗಳ ಉತ್ಪಾದನೆಯನ್ನು ಕರ-ಕುಶಲ ವಲಯಕ್ಕೆ ಕಾಯ್ದಿರಿಸಿ, ಅವರ ಉತ್ಪತ್ತಿಗಳನ್ನು ಕನಿಷ್ಠ ಬೆಂಬಲ ಬೆಲೆಯಲ್ಲಿ ಖರೀದಿಸಿ ಅವುಗಳನ್ನು ಸಬ್ಸಿಡಿ ದರದಲ್ಲಿ ಮಾರುವ ಮೂಲಕ ಅಂತಹ ಶಾಸನ ವ್ಯವಸ್ಥೆಯು ರೈತರು ಮತ್ತು "ಹೊರ ಪ್ರಪಂಚ"ದ ನಡುವೆ ಬರುತ್ತಿತ್ತು.

ಖಂಡಿತವಾಗಿಯೂ, ಅದು ಈ ಕಿರು-ಉತ್ಪಾದಕರ ವಲಯದ ಆಂತರಿಕ ತಾರತಮ್ಯಗಳನ್ನೇನೂ ತಡೆಯಲಿಲ್ಲ. ಅಲ್ಲಿ ಬಂಡವಾಳಶಾಹಿ ಪ್ರವೃತ್ತಿಗಳು ಪ್ರಕಟಗೊಳ್ಳುವುದನ್ನೂ ಅದು ತಡೆಯಲಿಲ್ಲ. ಆದರೆ, ಅದು ಹೊರಗಿನ ಬಂಡವಾಳಶಾಹಿಗಳು ಈ ಕಿರು-ಉತ್ಪಾದನಾ ವಲಯವನ್ನು ಪ್ರವೇಶಿಸದಂತೆ ತಡೆಯೊಡ್ಡಿತು. ಈ ವ್ಯವಸ್ಥೆಯಲ್ಲೂ ನವ ಉದಾರವಾದವು ತನ್ನ ಚಾಳಿಯ ಪ್ರಕಾರ ರೈತರನ್ನು ಹಿಂಡುತ್ತಿತ್ತಾದರೂ, ಆಗ, ದೊಡ್ಡ ದೊಡ್ಡ ಬಂಡವಾಳಗಾರರು ತಮಗೆ ಬೇಕಾದಂತೆ ಕೃಷಿ ಮತ್ತು ಇತರ ಸಣ್ಣ ಉತ್ಪಾದಕರ ಕಸುಬನ್ನು ಅತಿಕ್ರಮಿಸಲು ಅನುವಾಗುವಂತೆ ಸರ್ಕಾರವು ಕೃಷಿಯನ್ನು ಮುಕ್ತ ಮಾರುಕಟ್ಟೆಯ ಮರ್ಜಿಗೆ ಬಿಟ್ಟಿರಲಿಲ್ಲ.

ನವ-ಉದಾರವಾದಿ ನೀತಿಗಳನ್ನು ಜಾರಿಗೆ ತಂದ ಕಾಂಗ್ರೆಸ್ ಸರ್ಕಾರವು ಆರಂಭದಲ್ಲಿ ಕಿರು-ಉತ್ಪಾದಕರ ವಲಯಕ್ಕೆ ಅದುವರೆಗೆ ಒದಗಿಸುತ್ತಿದ್ದ ರಕ್ಷಣಾ ಕವಚವನ್ನು ಕಳಚಿಹಾಕಲು ಮುಂದಾಗಲಿಲ್ಲ. ಆದರೆ, ಸಬ್ಸಿಡಿಗಳ ಮೊತ್ತವನ್ನು ಕಡಿಮೆ ಮಾಡಿತು ಮತ್ತು ಈ ವಲಯದಲ್ಲಿ ಉತ್ಪಾದಿಸಿದ ವಸ್ತುಗಳನ್ನು ಖರೀದಿಸುವ ಬೆಲೆಗಳನ್ನು ಎಷ್ಟು ಮಟ್ಟಿಗೆ ಹೆಚ್ಚಿಸಬೇಕಿತ್ತೋ ಅಷ್ಟು ಮಟ್ಟಿಗೆ ಹೆಚ್ಚಿಸಲಿಲ್ಲ. ವಾಣಿಜ್ಯ ಬೆಳೆಗಳ ವಿಚಾರದಲ್ಲಿ ಹೇಳುವುದಾದರೆ, ಮಾರುಕಟ್ಟೆಯಲ್ಲಿ ರೈತರ ಪರವಾಗಿ ನಿರ್ವಹಿಸುತ್ತಿದ್ದ ಕಾರ್ಯವನ್ನು ಸಂಪೂರ್ಣವಾಗಿ ತ್ಯಜಿಸಿತು. ಈ ರೀತಿಯ ಕ್ರಮಗಳು ಕೃಷಿಯ ಲಾಭದಾಯಕತೆಯನ್ನು ಕ್ರಮೇಣ ಅಳಿಸಿ ಹಾಕಿದವು. ಹಾಗಾಗಿ, ರೈತರು ತಪ್ಪಿಸಿಕೊಳ್ಳಲಾರದ ಮತ್ತು ತೀರಿಸಲಸಾಧ್ಯವಾದ ಸಾಲದ ಒಂದು ಬಲೆಯಲ್ಲಿ ಸಿಕ್ಕಿಕೊಂಡರು. ಅವರ ಈ ಪರಿಸ್ಥಿತಿಯು 1930ರ ದಶಕದ ಮಹಾ ಕುಸಿತದ ಕಾಲದಲ್ಲಿ ಎದುರಾಗಿದ್ದ ಇದೇ ರೀತಿಯ ಪರಿಸ್ಥಿತಿಯನ್ನು ಜ್ಞಾಪಿಸುತ್ತದೆ. ನವ-ಉದಾರವಾದಿ ನೀತಿಗಳು ಜಾರಿಗೆ ಬಂದನಂತರದ ಕೆಲವು ವರ್ಷಗಳಲ್ಲಿ ಸಾಲದ ಬಲೆಗೆ ಸಿಲುಕಿದ ಲಕ್ಷಾಂತರ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

**ನವ-ಉದಾರವಾದಕ್ಕೆ ಹಿಂದುತ್ವದ ಊರುಗೋಲು**

ಬಂಡವಾಳಶಾಹಿಯ ಬಿಕ್ಕಟ್ಟಿನ ಆರಂಭದೊಂದಿಗೆ "ಅಭಿವೃದ್ಧಿಯಿಂದ-ಅಂತಿಮವಾಗಿ-ಎಲ್ಲರಿಗೂ ಪ್ರಯೋಜನವಾಗುತ್ತದೆ" ಎಂಬ ಹಳೆಯ ಭರವಸೆಯು ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿತು. ಈ ಪರಿಸ್ಥಿತಿಯಲ್ಲಿ, ನವ ಉದಾರವಾದವು ತನಗೊಂದು ಊರುಗೋಲನ್ನು ಒದಗಿಸಿಕೊಳ್ಳುವ ಸಲುವಾಗಿ ಹಿಂದುತ್ವದೊಂದಿಗೆ ಮೈತ್ರಿ ಮಾಡಿಕೊಂಡಿತು. ಈ ಮೈತ್ರಿಯ ಆಳ್ವಿಕೆಯಲ್ಲಿ, ರೈತರು, ಕುಶಲಕರ್ಮಿಗಳು, ಮೀನುಗಾರರು ಮುಂತಾದ ಸಣ್ಣ ಸಣ್ಣ ಉತ್ಪಾದಕರ ಕಸುಬುಗಳ ಮೇಲಿನ ದಾಳಿಯು ಒಂದು ಆಕ್ರಮಣಕಾರಿ ಸ್ವರೂಪವನ್ನು ಪಡೆದುಕೊಂಡಿತು. ನರೇಂದ್ರ ಮೋದಿ ಸರ್ಕಾರವು ನೇರ ದಾಳಿಯನ್ನೇ ಆರಂಭಿಸಿತು. ಮೊದಲಿಗೆ ಈ ವಲಯದ ಲಾಭದಾಯಕತೆಯನ್ನು ಹಿಂಡಿ ಹಿಪ್ಪೆ ಮಾಡಿತು. ನಂತರ ನೋಟು ರದ್ದತಿಯ ಮೂಲಕ, ತದನಂತರ ಜಿಎಸ್‌ಟಿಯನ್ನು ಅಳತೆಗೆಟ್ಟ ಪ್ರಮಾಣದಲ್ಲಿ ಹೇರುವ ಮೂಲಕ ಮತ್ತು ಅಂತಿಮವಾಗಿ ಈ ಮೂರು ಕೃಷಿ ಕಾಯ್ದೆಗಳನ್ನು ಜಾರಿಗೊಳಿಸುವ ಮೂಲಕ ದಾಳಿಯನ್ನು ಕ್ರಮೇಣ ಎತ್ತರಿಸುತ್ತಾ ಹೋಯಿತು.




ಈ ಕೃಷಿ ಕಾನೂನುಗಳು ಕನಿಷ್ಠ ಬೆಂಬಲ ಬೆಲೆ, ಧಾನ್ಯಗಳ ಖರೀದಿ ಮತ್ತು ಸಾರ್ವಜನಿಕ ಪಡಿತರ ಮುಂತಾದ ಹಳೆಯ ವ್ಯವಸ್ಥೆಯನ್ನು ಸಂಪೂರ್ಣವಾಗಿ ಅಳಿಸಿ ಹಾಕುತ್ತವೆ ಮತ್ತು ದೇಶಕ್ಕೆ ಬೇಕಾಗುವ ಆಹಾರ ಧಾನ್ಯಗಳ ಉತ್ಪಾದನೆಯನ್ನು ಕುಂಠಿತಗೊಳಿಸಿ ಧಾನ್ಯಗಳ ಕೊರತೆಗೆ ಕಾರಣವಾಗುತ್ತವೆ. ಜನರ ಧಾನ್ಯಗಳ ಬಳಕೆಯ ಪ್ರಮಾಣವು ಕಡಿಮೆಯೇ ಇದ್ದ ಕಾರಣದಿಂದಾಗಿ ಈ ವರೆಗೆ ದೇಶವು ಸಾಧಿಸಿದ್ದ ಒಂದು ಮಟ್ಟದ ಆಹಾರ ಸ್ವಾವಲಂಬನೆಯನ್ನು ಈ ಕೃಷಿ ಕಾನೂನುಗಳು ನಾಶಪಡಿಸುತ್ತವೆ ಮತ್ತು ದೊಡ್ಡ ದೊಡ್ಡ ಬಂಡವಾಳಗಾರರು ರೈತರ ಕಸುಬುಗಳನ್ನು ಅತಿಕ್ರಮಿಸಲು ಕೃಷಿಯನ್ನು ತೆರೆದಿಡುತ್ತವೆ. ಈ ಕಾನೂನುಗಳು ನವ-ಉದಾರವಾದದ ಅಜೆಂಡಾವನ್ನು ಅದರ ನಿರೀಕ್ಷೆಗಿಂತಲೂ ಹೆಚ್ಚು ಮುಂದಕ್ಕೆ ಒಯ್ಯುತ್ತವೆ. ಹಾಗಾಗಿ, ಅಮೆರಿಕದ ಆಡಳಿತದಿಂದ ಹಿಡಿದು ಐಎಂಎಫ್‌ವರೆಗೆ ಎಲ್ಲರೂ ಮೋದಿ ಸರ್ಕಾರದ ಈ ಮೂರೂ ಕೃಷಿ ಕಾಯಿದೆಗಳಿಗೆ ಬೆಂಬಲ ವ್ಯಕ್ತಪಡಿಸಿದ್ದಾರೆ. (ರೈತರ ಪ್ರತಿಭಟನೆಯನ್ನು ಮೋದಿ ಸರ್ಕಾರ ನಿಭಾಯಿಸುತ್ತಿರುವ ವಿಧಾನದ ಬಗ್ಗೆ ಟೀಕೆ-ಟಿಪ್ಪಣಿಗಳನ್ನು ಅವರು ಮಾಡಿದ್ದಾರೆ, ನಿಜ. ಆ ವಿಷಯವೇ ಬೇರೆ.)

ನವ-ಉದಾರವಾದದ ದಾಳಿಗಳ ಆರಂಭದಿಂದಲೂ ರೈತರು ಮತ್ತು ಇತರ ಕಿರು ಉತ್ಪಾದಕರು ಹೊಡೆತ ತಿನ್ನುವ ಮೊದಲ ಸಾಲಿನಲ್ಲಿದ್ದಾರೆ. ನಗರವಾಸಿ ಕಾರ್ಮಿಕರೂ ಅದೇ ರೀತಿಯ ಹೊಡೆತ ತಿನ್ನುತ್ತಿದ್ದಾರೆ. ವ್ಯತ್ಯಾಸವೆಂದರೆ, ಕಾರ್ಮಿಕರ ಹಕ್ಕುಗಳಿಗೆ ಹೊಡೆತ ಬಿದ್ದಾಗ ಅದರ ವಿರುದ್ಧವಾಗಿ ಅವರು ನಡೆಸುವ ಪ್ರತಿಭಟನೆಯ ವಿಷಯ ಬಹಳ ಜನರನ್ನು ತಲುಪುತ್ತದೆ. ಅದೇನೇ ಇರಲಿ, ತಮ್ಮ ಹಕ್ಕುಗಳ ಮೇಲೆ ನಡೆದ ದಾಳಿಯನ್ನು ರೈತರು ಆರಂಭದಲ್ಲಿ ಇತರ ಶೋಷಿತ ಜನರಂತೆ ತಾಳ್ಮೆ ಮತ್ತು ಸಂಯಮದಿಂದ ಎದುರಿಸಿದರು. ಲಕ್ಷಾಂತರ ಸಂಖ್ಯೆಯ ತಮ್ಮ ರೈತಕುಲ-ಬಾಂಧವರು ಆತ್ಮಹತ್ಯೆ ಮಾಡಿಕೊಂಡರೂ ಸಹ ರೈತರು ನವ-ಉದಾರವಾದದ ವಿರುದ್ಧವಾಗಿ ಬಿರುಸಿನ ಹೋರಾಟ ನಡೆಸಿಲ್ಲ. ಆದರೆ, ತನ್ನ ಬೆನ್ನಿನ ಮೇಲೆ ಅದಾಗಲೇ ಹೇರಿದ್ದ ಭಾರಕ್ಕೆ ಸೇರಿಸಿದ ಒಂದು ಕೊನೆಯ ಹುಲ್ಲು ಕಡ್ಡಿಯು ಒಂಟೆಯ ಬೆನ್ನನ್ನು ಮುರಿಯಿತಂತೆ ಎನ್ನುವ ಗಾದೆ ಮಾತನ್ನು ಈ ಮೂರು ಕೃಷಿ ಕಾನೂನುಗಳು ನಿಜ ಮಾಡಿವೆ.

**ಇಡೀ ದೇಶವನ್ನು ಆವರಿಸಿರುವ ವೈಶಾಲ್ಯತೆ.**

ಪ್ರಸಕ್ತ ರೈತ ಹೋರಾಟವು, ಅದರ ಅಗಾಧ ವೈಶಾಲ್ಯತೆ ಮತ್ತು ದೃಢ ಸಂಕಲ್ಪದ ಹೊರತಾಗಿ, ಕನಿಷ್ಠ ಮೂರು ಗಮನಾರ್ಹ ಗುಣ-ಲಕ್ಷಣಗಳನ್ನು ಹೊಂದಿದೆ. ಮೊದಲನೆಯದು, 'ಇಡೀ ಭಾರತ'ವನ್ನು ಆವರಿಸಿರುವ ಹೋರಾಟದ ವೈಶಾಲ್ಯತೆ. ಈ ಹಿಂದೆ ನಡೆದ ಅನೇಕ ರೈತ ಹೋರಾಟಗಳು ನಿರ್ದಿಷ್ಟ ಪ್ರದೇಶಗಳಿಗೆ ಅಥವಾ ನಿರ್ದಿಷ್ಟ ರಾಜ್ಯಗಳಿಗೆ ಸೀಮಿತವಾಗಿದ್ದವು. ನೀರಿನ ಶುಲ್ಕ ಏರಿಕೆಯ ಅಥವಾ ವಿದ್ಯುತ್ ದರ ಏರಿಕೆಯಂತಹ ಕೆಲವು ಕ್ರಮಗಳಿಗೆ ಸೀಮಿತ ಹೋರಾಟಗಳಾಗಿದ್ದವು.

ಆದರೆ, ಇಂದಿನ ರೈತ ಹೋರಾಟದ ರಣ-ಭೂಮಿ ಭೌಗೋಳಿಕವಾಗಿ ಉತ್ತರ ಭಾರತದಲ್ಲಿದೆ, ನಿಜ. ಆದರೆ, ರೈತ ಚಳುವಳಿಯ ಮುಂದಿಟ್ಟಿರುವ ಬೇಡಿಕೆಗೆ ದೇಶದ ಉದ್ದಗಲಕ್ಕೂ ರೈತರು ಸ್ಪಂದಿಸುತ್ತಿರುವ ರೀತಿ ಅಭೂತಪೂರ್ವವಾಗಿದೆ. ಈ ವಿದ್ಯಮಾನದ ಸಾಕ್ಷಿಯಾಗಿ ಮಹಾರಾಷ್ಟ್ರ, ಒಡಿಶಾ, ತಮಿಳುನಾಡು, ತೆಲಂಗಾಣ ಮತ್ತು ಇತರ ರಾಜ್ಯಗಳಲ್ಲಿ, ಏಕ ಕಾಲದಲ್ಲಿ, ಕಿಸಾನ್ ಯಾತ್ರೆಗಳು ನಡೆದಿರುವುದನ್ನು ನೆನಪಿಸಿಕೊಳ್ಳಬಹುದು.

ಈ ಸಂದರ್ಭದಲ್ಲಿ ಒಂದು ಘಟನೆಯನ್ನು ಜ್ಞಾಪಿಸಿಕೊಳ್ಳುವುದು ಉಚಿತವೆನಿಸುತ್ತದೆ. 2014ರ ಲೋಕಸಭಾ ಚುನಾವಣೆಯಲ್ಲಿ ಉತ್ತರ ಪ್ರದೇಶ ರಾಜ್ಯದಿಂದ ಬಿಜೆಪಿಯ ಹೆಚ್ಚು ಅಭ್ಯರ್ಥಿಗಳು ಆಯ್ಕೆಯಾದುದರಿಂದ ಲೋಕ ಸಭೆಯಲ್ಲಿ ಬಿಜೆಪಿಗೆ ಗೆಲುವು ಸಾಧ್ಯವಾಯಿತು. ಈ ಗೆಲುವಿನ ಹಿಂದಿದ್ದ ವಿಶೇಷವೆಂದರೆ, ಚುನಾವಣೆಗಿಂತ ತುಸು ಮೊದಲು, ಪಶ್ಚಿಮ ಉತ್ತರ ಪ್ರದೇಶದ ಮುಜಫ್ಫರ್ ನಗರ ಜಿಲ್ಲೆಯಲ್ಲಿ ನಡೆದ ಕೋಮು ಗಲಭೆಯು ಆಗ ತಾನೇ ಕೊನೆಗೊಂಡು ಹಿಂದೂ-ಮುಸ್ಲಿಂ ಧ್ರುವೀಕರಣದಲ್ಲಿ ಪರ್ಯವಸಾನಗೊಂಡಿತ್ತು, ಬಿಜೆಪಿಯು ಧ್ರುವೀಕರಣದ ಲಾಭ ಪಡೆಯಿತು. ಅಂದಿನಿಂದ ಇಂದಿನವರೆಗೆ ಹಿಂದೂ-ಜಾಟರು ಮತ್ತು ಮುಸ್ಲಿಮರ ನಡುವಿನ ವೈರುಧ್ಯವು ಒಂದು ತೀವ್ರ ಸ್ವರೂಪದಲ್ಲಿತ್ತು. ಆದರೆ, ಈ ವೈರುಧ್ಯಗಳು ಈಗ ಹಿಂದಕ್ಕೆ ಸರಿದಿವೆ. ಏಕೆಂದರೆ, ರೈತ ಹೋರಾಟವು ಅವರನ್ನು ಒಂದುಗೂಡಿಸಿತು ಮತ್ತು ಅವರಲ್ಲಿ ಒಂದು ಹೊಸ ಒಗ್ಗಟ್ಟನ್ನು ಬೆಸೆಯಿತು.

**ರೈತರ ಧೋರಣೆಗಳಲ್ಲಿ ಬದಲಾವಣೆ**

ಎರಡನೆಯದು, ಈ ಹೋರಾಟವು ಸ್ವತಃ ರೈತರ ಧೋರಣೆಗಳಲ್ಲಿ ಒಂದು ಅಗಾಧ ಬದಲಾವಣೆಯನ್ನು ಉಂಟುಮಾಡಿದೆ. ಈ ಬದಲಾವಣೆಯೇ ಒಂದು ಮಹತ್ವಪೂರ್ಣ ಜನಾಂದೋಲನದ ಹೆಗ್ಗುರುತು. ಅಂದರೆ, ಹೋರಾಟವು ಭಾಗವಹಿಸುವವರ ಧೋರಣೆಗಳನ್ನು ಆಮೂಲಾಗ್ರವಾಗಿ ಬದಲಾಯಿಸುತ್ತದೆ. ಕೆಲವೇ ಕೆಲವು ತಿಂಗಳುಗಳ ಹಿಂದೆ ಒಬ್ಬರನ್ನೊಬ್ಬರು ವಿರೋಧಿಸುತ್ತಿದ್ದ, ಬೇರೆ ಬೇರೆ ಧಾರ್ಮಿಕ ವಿಧಿ-ವಿಧಾನಗಳನ್ನು ಅನುಸರಿಸುವ, ಬೇರೆ ಬೇರೆ ಭಾಷೆಗಳನ್ನು ಮಾತನಾಡುವ ಮತ್ತು ಬೇರೆ ಬೇರೆ ಪ್ರದೇಶಗಳಿಗೆ ಸೇರಿದ ಭೂ-ಹೀನ ಕೃಷಿ ಕೂಲಿಕಾರರು ಹಾಗೂ ಸಣ್ಣ ಅಥವಾ ದೊಡ್ಡ ಹಿಡುವಳಿಗಳ ರೈತರು ಈಗ ಒಟ್ಟಾಗಿ ಹೋರಾಡುತ್ತಿರುವ ವಿದ್ಯಮಾನವು ಭಾರತದ ರಾಜಕೀಯದಲ್ಲಿ ಸಂಭವಿಸಿದ ಒಂದು ಗಮನಾರ್ಹ ಹಾಗೂ ಅನಿರೀಕ್ಷಿತ ಬದಲಾವಣೆ ಎಂಬುದನ್ನು ಸೂಚಿಸುತ್ತದೆ.

ನೊಂದವರಿಗೆ ರೈತರು ಸ್ಪಂದಿಸುವ ರೀತಿ ಮತ್ತು ವ್ಯಕ್ತಪಡಿಸುವ ಸಹಾನುಭೂತಿಯು ಮೂಲಕ ರೈತರ ಧೋರಣೆಯಲ್ಲಿ ಕಂಡುಬರುವ ಬದಲಾವಣೆಯನ್ನು ಗುರುತಿಸಬಹುದು. ಇದಕ್ಕೆ ನಿದರ್ಶನವಾಗಿ, ಬಿಜೆಪಿ ಸರ್ಕಾರವು ಅನೇಕ ಹೋರಾಟಗಾರರನ್ನು ಯುಎಪಿಎಯಂತಹ ಕಠಿಣ ಕಾಯ್ದೆಗಳ ಅಡಿಯಲ್ಲಿ ಬಂಧಿಸಿ, ಅವರನ್ನು ವರ್ಷಗಟ್ಟಲೆ ಜೈಲಿನಲ್ಲಿ ಕೊಳೆಹಾಕಿರುವ ಕ್ರಮವನ್ನು ವಿರೋಧಿಸಿ, ಬಂಧನಕ್ಕೊಳಗಾದವರಿಗೆ ತೋರಿದ ಸಹಾನುಭೂತಿಯನ್ನು ಉಲ್ಲೇಖಿಸಬಹುದು. ಭೀಮಾ-ಕೋರೆಗಾಂವ್ ಪ್ರಕರಣದಲ್ಲಿ ಎರಡು ವರ್ಷಗಳ ಹಿಂದೆ ಬಂಧನಕ್ಕೊಳಗಾದವರ ಬಗ್ಗೆ ರೈತ ಪ್ರತಿಭಟನಾಕಾರರು ಈಗ ತೋರುತ್ತಿರುವ ಕಾಳಜಿಯು ಕೆಲವು ವಾರಗಳ ಹಿಂದಿನವರೆಗೂ ವ್ಯಕ್ತಗೊಂಡಿರಲಿಲ್ಲ.

ಹೋರಾಟವು ಜನರನ್ನು ಒಂದುಗೂಡಿಸುತ್ತದೆ ಎಂಬುದು ಐತಿಹಾಸಿಕ ಸತ್ಯ. ದೆಹಲಿಯ ಹೊರ ವಲಯದಲ್ಲಿ ಹೂಡಿರುವ ರೈತ ಬಿಡಾರದ ಅಕ್ಕಪಕ್ಕದ ಹಳ್ಳಿಗಳ ರೈತರಿಂದ ಮತ್ತು ಅಕ್ಕಪಕ್ಕದ ಕೈಗಾರಿಕಾ ಘಟಕಗಳ ಕಾರ್ಮಿಕರಿಂದ ಹೋರಾಟ ನಿರತ ರೈತರಿಗೆ ಹರಿದು ಬರುತ್ತಿರುವ

ಪುಟ 14 ನೋಡಿ



# ಮೋದಿ ಸರ್ವಜ್ಞರೇನಲ್ಲ

ಪುಟ 13 ರಿಂದ

ಬೃಹತ್ ಮತ್ತು ಸ್ವಯಂಪ್ರೇರಿತ ನೆರವು ಈ ಐತಿಹಾಸಿಕ ಸತ್ಯವನ್ನು ಎತ್ತಿಹಿಡಿದಿದೆ.

**ನವ-ಉದಾರವಾದಕ್ಕೆ ವಿರುದ್ಧ**

ಮೂರನೆಯದು, ಈ ಹೋರಾಟವು ನವ-ಉದಾರವಾದಕ್ಕೆ ಏಕ್‌ದಂ ವಿರೋಧ್‌ವಾಗಿದೆ. ಮೂರು ಕೃಷಿ ಕಾನೂನುಗಳನ್ನು ರದ್ದುಪಡಿಸುವುದು ಈ ಹೋರಾಟದ ಪ್ರಧಾನ ಬೇಡಿಕೆಯಾಗಿರುವುದು ಸಹಜವೇ. ಆದರೆ, ಈಗಾಗಲೇ ಹೇಳಿದಂತೆ, ಈ ಕೃಷಿ ಕಾನೂನುಗಳು ನವ-ಉದಾರವಾದದ ಅಜೆಂಡಾವನ್ನು ಅದರ ನಿರೀಕ್ಷೆಗಿಂತಲೂ ಹೆಚ್ಚು ಮುಂದಕ್ಕೆ ಒಯ್ಯುತ್ತವೆ. ಈ ಕಾನೂನುಗಳು ಸಾಮ್ರಾಜ್ಯಶಾಹಿ ದೇಶಗಳ ಬಯಕೆಗಳಿಗೆ ಅನುಗುಣವಾಗಿವೆ. ಈ ಕಾನೂನುಗಳ ನೇರ ಫಲಾನುಭವಿಗಳೆಂದರೆ, ಅಂತರರಾಷ್ಟ್ರೀಯ ಹಣಕಾಸು ಬಂಡವಾಳದೊಂದಿಗೆ ನಿಕಟ ಬಾಂಧವ್ಯ ಹೊಂದಿರುವ, ದೇಶದ ಕೆಲವೇ ಕೆಲವು ಕಾರ್ಪೊರೇಟ್ ಸಂಸ್ಥೆಗಳು. ಈ ಕೆಲವು ಕಾರ್ಪೊರೇಟ್ ಸಂಸ್ಥೆಗಳು ಕಿರು ಉತ್ಪಾದನಾ ವಲಯವನ್ನು ದುರ್ಬಲಗೊಳಿಸುವಲ್ಲಿ ಬಹು ದೊಡ್ಡ ಪಾತ್ರ ವಹಿಸಿವೆ.

ಇವೆಲ್ಲವೂ ನವ-ಉದಾರವಾದದ ದೃಷ್ಟಿಕೋನಕ್ಕೆ ಅನುಗುಣವಾಗಿರುವ ಅಂಶಗಳೇ. ಹಾಗಾಗಿ, ಈ ಮೂರೂ ಕಾನೂನುಗಳನ್ನು ರದ್ದುಗೊಳಿಸುವುದೆಂದರೆ, ನವ-ಉದಾರವಾದವನ್ನು ಕಡೆಗಣಿಸಿದಂತೆಯೇ. ನವ-ಉದಾರವಾದವನ್ನು ಜಾರಿಗೊಳಿಸುವಲ್ಲಿ ಹಿಂದೇಟು ಹಾಕುವುದೇ ಬೇರೆ; ಒಂದು ನಿರ್ಣಾಯಕ ವಲಯದಲ್ಲಿ ಅದನ್ನು ಕಡೆಗಣಿಸುವುದು ತೀರಾ ಬೇರೆಯೇ.

**ಮಿಥ್ಯೆಯ ಪೋಷಣೆ**

ರೈತರ ಒಳಿತಿನ ಬಗ್ಗೆ ಮೋದಿ ಚೆನ್ನಾಗಿ ಬಲ್ಲರು ಎಂಬ ಮಿಥ್ಯೆಯನ್ನು ಉಳಿಸಿಕೊಳ್ಳುವ ಅವರ ಅತಿಯಾದ ಅಪೇಕ್ಷೆ ಮತ್ತು ಅವರು ಬೆಳೆಸಿಕೊಂಡಿರುವ ಅಪರಿಮಿತ ಅಹಂಕಾರದ ಸ್ವಭಾವಗಳೇ ಈ ವಿಷಯದ ಬಗ್ಗೆ ಮೋದಿ ಅವರು ತಳೆದಿರುವ ಹಠಮಾರಿ ನಿಲುವಿಗೆ ಕಾರಣವೆಂದು ಹೇಳಲಾಗಿದೆ. ಈ ಆರೋಪವು ನಿಸ್ಸಂದೇಹವಾಗಿ ನಿಜವೇ. ಆದರೆ, ಮೋದಿ ಸರ್ವಜ್ಞರು ಎಂಬ ಮಿಥ್ಯೆಯ ಪೋಷಣೆಯು ಮೋದಿಯವರ ಮನದಾಳದಲ್ಲಿ ಹುದುಗಿರುವ ಅವರ ಯಾವುದೋ ಒಂದು ದಾಹವನ್ನು ತಣಿಸುವ ಸಲುವಾಗಿ ಅಲ್ಲವೇ ಅಲ್ಲ. ಮೋದಿ ಸರ್ವಜ್ಞರು ಎಂಬ ಮಿಥ್ಯೆಯನ್ನು ಪೋಷಣೆ ಮಾಡಲಾಗುತ್ತಿದೆ, ಏಕೆಂದರೆ, ನವ-ಉದಾರವಾದಿ ಕಾರ್ಯಸೂಚಿಯನ್ನು ಮುಂದಕ್ಕೆ ಕೊಂಡೊಯ್ಯಲು ಅದೊಂದು ಸಾಧನ. ಎಲ್ಲರ ಒಳಿತನ್ನು ಮೋದಿ ಅವರು ನಿಜಕ್ಕೂ ಚೆನ್ನಾಗಿ ಬಲ್ಲವರಾಗಿದ್ದರೆ, ಮತ್ತು, ನವ-ಉದಾರವಾದಿ ಕಾರ್ಯಸೂಚಿಯೇ ಎಲ್ಲದಕ್ಕೂ ರಾಮ ಬಾಣ ಎಂದು ಮೋದಿ ಅವರು ಭಾವಿಸಿಕೊಂಡಿದ್ದರೆ, ಅದು ಹಾಗೆಯೇ ಇರಲಿ. ಈ ರೀತಿಯಲ್ಲಿ, ಮೋದಿ ಸರ್ವಜ್ಞರು ಎಂಬ ಮಿಥ್ಯೆಯು ಅವರ ಅಹಂಕಾರವನ್ನು ಉಬ್ಬಿಸುವ ಹೊತ್ತಿನಲ್ಲೇ ನವ-ಉದಾರವಾದದ ಕಾರ್ಯಭಾರವನ್ನು ನಿರ್ವಹಿಸುತ್ತಿದೆ. ಆದ್ದರಿಂದ, ಮೋದಿ ಸರ್ವಜ್ಞರು ಎಂಬ ಮಿಥ್ಯೆಯನ್ನು ನಿಜವೆಂದು ಸಾಧಿಸುವುದು ನವ-ಉದಾರವಾದದ ಅವಶ್ಯಕತೆ.

ರೈತರು ತಮ್ಮ ಪ್ರತಿಭಟನೆಯ ಮೂಲಕ ಏನು ಮಾಡಿದ್ದಾರೆಂದರೆ, ಸೂಜಿ ಚುಚ್ಚಿ ಬಲೂನಿನ ಗಾಳಿ ತೆಗೆಯುವ ರೀತಿಯಲ್ಲಿ ಈ "ಸರ್ವಜ್ಞ" ಮಿಥ್ಯೆಯನ್ನು ಚುಚ್ಚಿದ್ದಾರೆ. ಈ ಕಾನೂನುಗಳು ರದ್ದಾದಾಗ ಈ ಮಿಥ್ಯೆಯನ್ನು ಚುಚ್ಚಿರುವುದು ದಿಟವಾಗುತ್ತದೆ ಮಾತ್ರವಲ್ಲ, ಅದೇ ಸಮಯದಲ್ಲಿ ನವ-ಉದಾರವಾದವನ್ನು ನಿರ್ಣಾಯಕವಾಗಿ ಹಿಮ್ಮೆಟ್ಟಿಸಿದಂತಾಗುತ್ತದೆ. ಒಮ್ಮೆ ಹಿಮ್ಮೆಟ್ಟಿದ ನಂತರ, ನವ-ಉದಾರವಾದವನ್ನು ಮತ್ತೊಮ್ಮೆ ಜಾರಿಗೊಳಿಸಲಾಗದು. ಈ ಕಾರಣದಿಂದಾಗಿಯೇ, ಈ ಮೂರೂ ಕಾಯ್ದೆಗಳಿಗೆ ಅವುಗಳ ಚೌಕಟ್ಟಿಗೆ ಹೊಂದಿಕೊಳ್ಳುವ ಕೆಲವು ತಿದ್ದುಪಡಿಗಳನ್ನು ಮಾಡುವುದಾಗಿ ಸರ್ಕಾರವು ಪದೇ ಪದೇ ಹೇಳಿದೆ. ಆದರೆ, ಕಾಯ್ದೆಗಳನ್ನು ಅನಾಮತ್ತಾಗಿ ರದ್ದುಪಡಿಸುವುದನ್ನು ಸರ್ಕಾರವು ಸಂಪೂರ್ಣವಾಗಿ ವಿರೋಧಿಸುತ್ತಿದೆ. ಈ ಕಾಯ್ದೆಗಳ ಚೌಕಟ್ಟಿಗೆ ಒಳಪಡುವ ಬದಲಾವಣೆಗಳನ್ನು ಮಾಡಿದಾಗ, ಈ ಕಾಯ್ದೆಗಳು ಸತ್ವಯುತವಾಗಿಯೇ ಉಳಿಯುತ್ತವೆ. ಹಾಗಾಗಿ, ನವ-ಉದಾರವಾದಿ ಕಾರ್ಯಸೂಚಿಗೆ ಕಾನೂನಿನ ಮನ್ನಣೆಯೂ ಉಳಿಯುತ್ತದೆ.

ರೈತರ ಆಗ್ರಹ ಏನೆಂದರೆ, ಏಕಸ್ವಾಮ್ಯ ಬಂಡವಾಳವು ಕಿರು ಉತ್ಪಾದನಾ ವಲಯವನ್ನು ಅತಿಕ್ರಮಿಸುವುದನ್ನು ಸಂಪೂರ್ಣವಾಗಿ ಕೈಬಿಡಬೇಕು ಎಂಬುದು. ಆದ್ದರಿಂದಲೇ ನವ-ಉದಾರವಾದದ ಮೇಲೆ ಆಣೆ ಪ್ರಮಾಣ ಮಾಡುವ ಕಾರ್ಪೊರೇಟ್-ಹಿಂದುತ್ವ ಮೈತ್ರಿಯು ರೈತರ ಈ ಬೇಡಿಕೆಯನ್ನು ಅಷ್ಟೊಂದು ತೀವ್ರವಾಗಿ ವಿರೋಧಿಸುತ್ತಿರುವುದು. ತನ್ನ ಕಣ್ಣೆದುರೇ ತನ್ನ ಪ್ರಾಬಲ್ಯವು ಕುಸಿಯುತ್ತಿರುವುದನ್ನು ನೋಡುವಾಗ ತನ್ನ ಕೈ ಕಾಲುಗಳನ್ನು ತಾನೇ ಕಟ್ಟಿಹಾಕಿಕೊಂಡಂತೆ ಭಾಸವಾಗುತ್ತದೆ ಈ ಮೈತ್ರಿ ಕೂಟಕ್ಕೆ.

# ಎ.ಐ.ಟಿ.ಯು.ಸಿ.ಯ ಎರಡನೇ ಅಧಿವೇಶನ



ಪುಟ 11 ರಿಂದ


ಪ್ರಜ್ಞೆಯ ಜೊತೆಗೆ, ಇದು ಆ ಕಾಲದ ಕಾರ್ಮಿಕ ಆಂದೋಲನದ ಮೇಲೆ ಕಾಂಗ್ರೆಸ್ ಸಿದ್ಧಾಂತದ ರಾಜಕೀಯ ಪ್ರಾಬಲ್ಯವನ್ನು ಮತ್ತಷ್ಟು ಸೂಚಿಸಿತು.

ಮತ್ತೊಂದು ಗಮನಾರ್ಹ ಲಕ್ಷಣವೆಂದರೆ ಯುದ್ಧದ ವಿರುದ್ಧದ ನಿರ್ಣಯವನ್ನು ಅಂಗೀಕರಿಸಿದ್ದು. ಯುದ್ಧವನ್ನು ಕಾರ್ಮಿಕ ವರ್ಗಕ್ಕೆ ಅಪಾರ ಕೆಡಕಿನ ಮೂಲವೆಂದು ಖಂಡಿಸಲಾಯಿತು. ಅಂತರರಾಷ್ಟ್ರೀಯ ಯುದ್ಧದ ವಿರುದ್ಧ ಸಂಘಟಿತ ಕಾರ್ಯಾಚರಣೆಯನ್ನು ಆಯೋಜಿಸುವಂತೆ ಸಮ್ಮೇಳನವು ವಿಶ್ವದ ಕಾರ್ಮಿಕರನ್ನು ಒತ್ತಾಯಿಸಿತು.

ಇವುಗಳಲ್ಲದೆ, ಮುಷ್ಕರ-ನಿಧಿ ಆಯೋಜಿಸಲು, ಕಲ್ಲಿದ್ದಲು ಗಣಿ ಮತ್ತು ರೈಲ್ವೆ ಕಾರ್ಮಿಕರ ವಿವಿಧ ಸಮಸ್ಯೆಗಳನ್ನು ಪರಿಹರಿಸಲು, ವಲಸೆ ಹೋದ ಭಾರತದ ಕಾರ್ಮಿಕರ ಹಿತಾಸಕ್ತಿಗಳ ರಕ್ಷಣೆಗಾಗಿ ಮತ್ತು ಅಂತರರಾಷ್ಟ್ರೀಯ ಕಾರ್ಮಿಕ ಸಮ್ಮೇಳನದಲ್ಲಿ ಭಾಗವಹಿಸಲು ಹಲವಾರು ನಿರ್ಣಯಗಳನ್ನು ಅಂಗೀಕರಿಸಲಾಯಿತು. ವೇತನ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಜನಾಂಗೀಯ ಆಧಾರದಲ್ಲಿ ತಾರತಮ್ಯ ವರ್ತನೆಯನ್ನು ರದ್ದುಗೊಳಿಸುವಂತೆ ಪ್ರತ್ಯೇಕ ನಿರ್ಣಯವು ಒತ್ತಾಯಿಸಿತು..

ಸಾಮಾಜಿಕ ಮತ್ತು ತಾತ್ವಿಕ ಆಲೋಚನೆಗಳ ಹೊಸ ಕಿರಣಗಳು ಈ ಮಧ್ಯೆ ಭಾರತದ ರಾಜಕೀಯ ಆಕಾಶವನ್ನು ಬೆಳಗಿಸಲು ಪ್ರಾರಂಭಿಸಿದವು. ವೈಜ್ಞಾನಿಕ ಸಮಾಜವಾದದ ಮಾರ್ಕ್ಸ್‌ವಾದಿ ಸಿದ್ಧಾಂತವು ಭಾರತದ ಯುವ ಬುದ್ಧಿಜೀವಿಗಳ ಒಂದು ಸಣ್ಣ ಶ್ರೇಣಿಯನ್ನು ಹೆಚ್ಚು ಪ್ರಭಾವಿಸಿತು. ಇದರ ಅನಿವಾರ್ಯ ಪರಿಣಾಮ ಟ್ರೇಡ್ ಯೂನಿಯನ್ ಕಾಂಗ್ರೆಸ್ ಮೇಲೂ ಬಿದ್ದಿತು. ಕ್ರಾಂತಿಕಾರಿ ತತ್ವಶಾಸ್ತ್ರ ಹೊರಹೊಮ್ಮಿದ್ದು ಮತ್ತು ಕಾಂಗ್ರೆಸ್ಸಿನ ರಾಜಿ ಮತ್ತು ಸುಧಾರಣಾವಾದಿ ಬೂರ್ಜ್ವಾ ರಾಜಕೀಯ ಸಿದ್ಧಾಂತವನ್ನು ಎದುರಿಸುವ ಹೊಸ ರಾಜಕೀಯ ಚಿಂತನೆಯು ಕಾಲಕ್ರಮೇಣ ಎಐಟಿಯುಸಿಯನ್ನು ಘರ್ಷಣೆಗಳು ಮತ್ತು ತಾಕಲಾಟಗಳಿಂದ ತುಂಬಿದ ಹಾದಿಯಲ್ಲಿ ತಳ್ಳಿತು. ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ನಂತರದ ಇತಿಹಾಸವು ಹಲವಾರು ಬಾರಿ ಪರ್ಯಾಯವಾಗಿ ವಿಭಜನೆ ಮತ್ತು ಪುನರೇಕೀಕರಣವನ್ನು ತಂದ ಪಟ್ಟು ಹಿಡಿದ ಸೈದ್ಧಾಂತಿಕ ಸಂಘರ್ಷಗಳ ಇತಿಹಾಸವಾಗಿದೆ.

# ಮಾದರಿ ಎಂ.ಎಸ್.ಪಿ.ಮಸೂದೆ.....



ಪುಟ 8 ರಿಂದ

ವೆಚ್ಚದ ಮೇಲೆ 50% ಲಾಭವನ್ನು ಖಾತರಿಪಡಿಸುವ ಮೂಲಕ ಸ್ವಾಮಿನಾಥನ್ ಆಯೋಗದ ಶಿಫಾರಸಿನಂತೆ ಎಂ.ಎಸ್.ಪಿ.ಯ ವಚನ ನೀಡಿದ್ದರು. . ಕಳೆದ 7 ವರ್ಷಗಳ ಅಧಿಕಾರಾವಧಿಯಲ್ಲಿ, ಪ್ರಧಾನಿ ಈ ಭರವಸೆಯನ್ನು ಜಾರಿಗೆ ತಂದಿಲ್ಲ ಮತ್ತು ಆದ್ದರಿಂದ ನಡೆಯುತ್ತಿರುವ ರೈತರ ಹೋರಾಟಕ್ಕೆ ನೇರವಾಗಿ ಕಾರಣವಾಗಿದೆ.

ಎ 2 + ಎಫ್‌ಎಲ್ ಲೆಕ್ಕಾಚಾರದ ಆಧಾರದ ಮೇಲೆ ಅಸ್ತಿತ್ವದಲ್ಲಿರುವ ಎಂ.ಎಸ್.ಪಿ. ದರವು ಫಲದಾಯಕ ಬೆಲೆಯನ್ನು ಒದಗಿಸುವುದಿಲ್ಲ. ಅಲ್ಲದೆ ಬಹುಪಾಲು ರೈತರು ಇಂತಹ ಎಂ.ಎಸ್.ಪಿ. ದರಕ್ಕಿಂತಲೂ ಕಡಿಮೆ ದರಗಳಲ್ಲಿ ಮಾರಾಟ ಮಾಡಬೇಕಾಗಿ ಬರುತ್ತಿದೆ. , ಇದರಿಂದಾಗಿ ಎಂ.ಎಸ್.ಪಿ. ಬಹುಪಾಲು ರೈತರಿಗೆ ಕೇವಲ ಕನಸೇ ಆಗುಳಿದಿದೆ.. ಉದಾಹರಣೆಗೆ ಭತ್ತಕ್ಕೆ ಎಂ.ಎಸ್.ಪಿ. ದರ ಕ್ವಿಂಟಲ್‌ಗೆ 1868 ರೂ. ಆದರೆ ಬಿಹಾರ, ಜಾರ್ಖಂಡ್ ಮತ್ತು ಇತರ ಹಲವು ರಾಜ್ಯಗಳ ರೈತರಿಗೆ ಕ್ವಿಂಟಲ್‌ಗೆ 800 ರಿಂದ 1200 ರೂ. ಆದರೆ ಕೇರಳದ ಎಲ್.ಡಿ.ಎಫ್. ಸರ್ಕಾರವು ಸಹಕಾರಿ ವಲಯದ ಬೆಂಬಲದೊಂದಿಗೆ ಭತ್ತಕ್ಕಾಗಿ ಕ್ವಿಂಟಲ್‌ಗೆ 2850 ರೂ.ನ ಖಾತರಿ ಕೊಟ್ಟಿದೆ ಎಂಬುದು ಗಮನಾರ್ಹ ಎನ್ನುತ್ತದೆ ಎ.ಐ.ಕೆ.ಎಸ್. ಹೇಳಿಕೆ.

**ಹೆಚ್ಚುವರಿ ಗಳಿಕೆಯ ಪ್ರಯೋಜನ ಕಾರ್ಪೊರೇಟ್‌ಗಳಿಗೇ**

ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಯಿಂದ ಸೃಷ್ಟಿಯಾದ ಹೆಚ್ಚುವರಿ ಗಳಿಕೆಯ ಪ್ರಯೋಜನವನ್ನು ಕಂಪನಿಗಳು ತೆಗೆದುಕೊಳ್ಳುತ್ತವೆ ಎಂದು ಎ.ಐ.ಕೆ.ಎಸ್. ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲಾ ಮತ್ತು ಅಧ್ಯಕ್ಷ ಅಶೋಕ್ ಧವಳೆ ಹೇಳಿದ್ದಾರೆ. ಬಾಸ್ಮತಿ ಭತ್ತದ ಉದಾಹರಣೆಯನ್ನು ಉಲ್ಲೇಖಿಸಿ, ರೈತರು ಬಾಸ್ಮತಿ ಭತ್ತಕ್ಕೆ ಮಧ್ಯವರ್ತಿಗಳಿಂದ ಕಿಲೋಗ್ರಾಂಗೆ 18 ರಿಂದ 30 ರೂ.ಗಳನ್ನು ಪಡೆದರೆ, ಅದಾನಿ ಗುಂಪಿನ ಬ್ರಾಂಡೆಡ್ ಫಾರ್ಚೂನ್ ವಿಶೇಷ ಬಾಸ್ಮತಿ ಅಕ್ಕಿಯನ್ನು ಪ್ರತಿ ಕಿಲೋಗೆ 208 ರೂ.ಗೆ, ಮಾರಾಟ ಮಾಡಲಾಗುತ್ತಿದೆ. ಇತರ ಕೆಲವು ಬ್ರಾಂಡ್‌ಗಳು ಕಿಲೋಗೆ 700 ರಿಂದ 2200 ರೂ.ಗೆ ಮಾರಾಟವಾಗುತ್ತಿವೆ ಎಂದು ಅವರು ಹೇಳಿದರು.

ಇದೇ ರೀತಿ, ಕಾಫಿ ಬೆಳೆಯುವ ಪ್ರದೇಶಗಳಲ್ಲಿ ರೈತರು ಕಾಫಿ ಬೀಜಗಳಿಗೆ ಕಿಲೋಗೆ 120 ರಿಂದ 130 ರೂ. ಪಡೆದರೆ, ಕಾರ್ಪೊರೇಟ್ ವಲಯವು ಇನ್‌ಸ್ಟಂಟ್ ಕಾಫಿ ಪುಡಿಯನ್ನು ಕಿಲೋಗೆ ಸರಾಸರಿ 3000 ರೂ. ಗೆ ಮಾರುತ್ತಿದೆ. ಕೆಲವು ಬ್ರಾಂಡ್‌ಗಳ, ಉದಾ: ನೆಸ್ಲೆ ಬ್ಲೆಂಡ್ 37 ಮತ್ತು ನೆಸ್ಕಾಫ್ ಗೋಲ್ಡ್ ಆರ್ಗ್ಯಾನಿಕ್ ಅನ್ನು ಕೆಲವು ತಿಂಗಳ ಹಿಂದೆ ಸುಮಾರು 12,000 / ಕೆ.ಜಿ.ಗೆ ಮಾರಾಟ ಮಾಡಲಾಗುತ್ತಿತ್ತು, ಈಗಲೂ ಸಹ ರೂ .8,000 ದಿಂದ 10,000 ಗೆ ಮಾರಾಟವಾಗುತ್ತಿವೆ ಎಂಬ ಸಂಗತಿಯತ್ತ ಗಮನ ಸೆಳೆಯುತ್ತ ಎ.ಐ.ಕೆ.ಎಸ್. ಪತ್ರಿಕಾ ಹೇಳಿಕೆ, ಕಾರ್ಪೊರೇಟ್ ವಲಯ ಮತ್ತು ಮಾರುಕಟ್ಟೆಯಲ್ಲಿ ಅವರ ಮಧ್ಯವರ್ತಿಗಳ ಈ ರೀತಿಯ ಲೂಟಿ ಮತ್ತು ಶೋಷಣೆ ರೈತ ಕುಟುಂಬಗಳ ಮೇಲೆ ಹೊರಿಸಿರುವ ಸಾಲಗಳ ಹೊರೆ ದೊಡ್ಡ ಪ್ರಮಾಣದಲ್ಲಿ ರೈತ ಆತ್ಮಹತ್ಯೆಗಳಿಗೆ ಒಂದು ಪ್ರಮುಖ ಕಾರಣವಾಗಿದೆ ಎಂದಿದೆ. ಪ್ರತಿ ಗಂಟೆಗೆ ಇಬ್ಬರು ರೈತರು ಭಾರತದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಮತ್ತು ದಿನಕ್ಕೆ 2468 ರೈತರು ಕೃಷಿಯನ್ನು ತ್ಯಜಿಸಬೇಕಾಗಿ ಬರುತ್ತಿದೆ ಎಂದು ಅದು ಹೇಳಿದೆ.

ರೈತರಿಂದ ಉತ್ಪನ್ನಗಳನ್ನು ಸಂಗ್ರಹಿಸುವ ಘಟಕಗಳು ಕೃಷಿ ಉತ್ಪನ್ನಗಳ ವ್ಯಾಪಾರ ಮತ್ತು ಸಂಸ್ಕರಣೆ ಮತ್ತು ಮೌಲ್ಯವರ್ಧಿತ ಗ್ರಾಹಕ ಉತ್ಪನ್ನಗಳ ಮಾರಾಟದಿಂದ ತಮ್ಮ ವ್ಯವಹಾರಗಳನ್ನು ನಡೆಸುತ್ತವೆ ಮತ್ತು ಲಾಭ ಗಳಿಸುತ್ತವೆ. ಆದ್ದರಿಂದ ಸಿ 2 + 50% ಸೂತ್ರದಂತೆ ಖರೀದಿಸುವ ಪ್ರಾಥಮಿಕ ಜವಾಬ್ದಾರಿ ಅವುಗಳ ಮೇಲೆ ಇರುತ್ತದೆ. ಈ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಮಾತಾಡುತ್ತ ಹನ್ನನ್ ಮೊಲ್ಲಾ, ಎಂ.ಎಸ್.ಪಿ.ಗೆ ಖಾತರಿ ನೀಡುವ ಕಾನೂನನ್ನು ಜಾರಿಗೊಳಿಸಬೇಕು ಎಂದರೆ ಸರ್ಕಾರವು ಇದರ ಸಂಪೂರ್ಣ ಆರ್ಥಿಕ ಹೊಣೆಯನ್ನು ಹೊರಬೇಕಾಗುತ್ತದೆ ಎಂದೇನಿಲ್ಲ ಎಂದರು. ರೈತರಿಂದ ಖರೀದಿಸುವ ಯಾರಾದರೂ, ಅದು ಸರ್ಕಾರ ಅಥವಾ ಒಬ್ಬ ಖಾಸಗಿ ವ್ಯಾಪಾರಿ ಆಗಿರಬಹುದು, ಎಂ.ಎಸ್.ಪಿ. ಕಾನೂನು ಉತ್ಪಾದಕರೊಂದಿಗೆ ಕೆಲವು ಶೇಕಡಾವನ್ನು ಹಂಚಿಕೊಳ್ಳಲು ಅವರನ್ನು ಹೊಣೆಗಾರರನ್ನಾಗಿ ಮಾಡಬೇಕು ಎಂದು ಎ.ಐ.ಕೆ.ಎಸ್. ಹೇಳಿದೆ. ಘೋಷಿತ ಕನಿಷ್ಠ ಬೆಲೆಯನ್ನು ಪಾವತಿಸಬೇಕೆಂದು ವಿಧಿಸಬೇಕು. ಆದರೆ ಸರ್ಕಾರವು ಅಂತಹ ಕಾನೂನನ್ನು ತರಲು ಬಯಸುವುದಿಲ್ಲ, ಏಕೆಂದರೆ ಅದು ಕಾರ್ಪೊರೇಟ್ ಸಂಸ್ಥೆಗಳಿಗೆ ಗರಿಷ್ಠ ಲಾಭಗಳನ್ನು ಖಚಿತಪಡಿಸಿಕೊಳ್ಳ ಬಯಸುತ್ತದೆ ಎಂದು ಅವರು ಆರೋಪಿಸಿದರು.

ಎಂ.ಎಸ್.ಪಿ.. ಮುಂದುವರಿಯುವ ಬಗ್ಗೆ ಸರ್ಕಾರದ ಮೌಖಿಕ ಭರವಸೆಯ ಕುರಿತು ಟಿಪ್ಪಣಿ ಮಾಡುತ್ತ ಹನ್ನನ್ ಮೊಲ್ಲಾ, "ನಾವು ಇದನ್ನು ಏಕೆ ಸ್ವೀಕರಿಸಬೇಕು? 90% ಕ್ಕಿಂತ ಹೆಚ್ಚು ರೈತರು ಎಂ.ಎಸ್.ಪಿ.. ಪಡೆಯುವುದಿಲ್ಲ ಮತ್ತು ಅವರು ತಮ್ಮ ಉತ್ಪನ್ನಗಳನ್ನು ಸ್ಥಳೀಯ ವ್ಯಾಪಾರಿಗಳಿಗೆ ಮೂರನೇ ಒಂದು ಬೆಲೆಗೆ ಮಾರಾಟ ಮಾಡಬೇಕಾಗಿ ಬರುತ್ತಿದೆ " ಎಂದರು. "ಸರ್ಕಾರ ಮತ್ತು ಅದರ 'ಉನ್ನತ ಬುದ್ಧಿಜೀವಿಗಳು' ಕೇವಲ 6% ರೈತರು ಮಾತ್ರ ಎಂ.ಎಸ್.ಪಿ. ಪಡೆಯುತ್ತಾರೆ ಎಂಬ ಅಂಶವನ್ನು ಮರೆಮಾಚುತ್ತಿದ್ದಾರೆ. "ಎಂ.ಎಸ್.ಪಿ. ಇಲ್ಲದೆ, **ರೈತರು ಕಳೆದುಕೊಳ್ಳುತ್ತಿದ್ದಾರೆ ಮತ್ತು ಕಳೆದುಕೊಳ್ಳುತ್ತಿದ್ದಾರೆ, ಮತ್ತು ನಂತರ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ"** ಎಂದ ಅವರು ಸರಕಾರ 23 ಬೆಳೆಗಳಿಗೆ ಎಂ.ಎಸ್.ಪಿ. ಘೋಷಿಸುತ್ತದೆ, ಆಧರೆ ಕೇವಲ ಎರಡನ್ನು – ಭತ್ತ ಮತ್ತು ಗೋಧಿಯನ್ನಷ್ಟೇ ಖರೀದಿಸುತ್ತದೆ ಎಂಬ ಸಂಗತಿಯತ್ತವೂ ಗಮನ ಸೆಳೆದರು

**ಮಾದರಿ ಮಸೂದೆ ಏನು ಹೇಳುತ್ತದೆ?**

ಎಂ.ಎಸ್.ಪಿ.ಮಟ್ಟವನ್ನು ನಿಗದಿ ಪಡಿಸುವುದರ ಜೊತೆಗೆ ಈ ಮಾದರಿ ಮಸೂದೆ "ಕಾಲಕಾಲಕ್ಕೆ ಎಲ್ಲಾ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು ಉಸ್ತುವಾರಿ ಮಾಡುವ ಮತ್ತು ನಿಗದಿಪಡಿಸುವ ಒಂದು ಅಧಿಕಾರ ವ್ಯವಸ್ಥೆಯನ್ನು ಖಾತ್ರಿಪಡಿಸಲಾಗುತ್ತದೆ" ಎನ್ನುತ್ತದೆ. ಎಂ.ಎಸ್.ಪಿ. ಗಿಂತ ಕಡಿಮೆ ದರದಲ್ಲಿ ಕೃಷಿ ಉತ್ಪನ್ನಗಳನ್ನು ಖರೀದಿಸುವುದು ಅಪರಾಧವೆಂದು ಪರಿಗಣಿಸಬೇಕು ಎಂದು ಅದು ಹೇಳಿದೆ.

"ಪ್ರಾಥಮಿಕ ಕೃಷಿ ಸ್ವಸಹಾಯ ಗುಂಪುಗಳಿಗೆ" ಕೃಷಿ ಉತ್ಪನ್ನಗಳನ್ನು ಎಂ.ಎಸ್.ಪಿ. ದರಗಳಲ್ಲಿ ಪೂರೈಸುವ ಸಲುವಾಗಿ ಕಾರ್ಮಿಕರು ಮತ್ತು ರೈತರ ಸಾಮಾಜಿಕ ಸಹಕಾರ ಸಂಘಗಳನ್ನು ರಚಿಸಲು ಈ ಮಾದರಿ ಎಂ.ಎಸ್.ಪಿ. ಮಸೂದೆ ಸೂಚಿಸುತ್ತದೆ. ಪ್ರಾಥಮಿಕ ಕೃಷಿ ಉತ್ಪನ್ನಗಳಿಂದ ಸಂಸ್ಕರಿಸಿದ ಮೌಲ್ಯವರ್ಧಿತ ಉತ್ಪನ್ನಗಳಿಂದ ಗಳಿಸಿದ ಹೆಚ್ಚುವರಿ ಆದಾಯಗಳಿಂದ ಒಂದು ನಿರ್ದಿಷ್ಟ ಶೇಕಡಾವನ್ನು ರೈತರಿಗೆ ಹೆಚ್ಚುವರಿ ಬೆಲೆಯಾಗಿ ನೀಡುವ ಯೋಜನೆಯನ್ನು ರಚಿಸಲು ಕೂಡ ಮಸೂದೆಯು ಶಿಫಾರಸು ಮಾಡಿದೆ.

ರೈತರ ಸ್ವಸಹಾಯ ಗುಂಪುಗಳನ್ನು ರಚಿಸಬೇಕು ಎಂದು ಈ ಮಾದರಿ ಮಸೂದೆ ಶಿಫಾರಸು ಮಾಡುತ್ತದೆ. ಸ್ಥಳೀಯ ಸಂಸ್ಥೆಗಳ ಕನಿಷ್ಠ 20 ಮತ್ತು ಗರಿಷ್ಠ 40 ರೈತರನ್ನೊಳಗೊಂಡ ಸ್ವಸಹಾಯ ಗುಂಪುಗಳನ್ನು ಆಯಾ 'ಬ್ಲಾಕ್ ಕೃಷಿ ಸಾಮಾಜಿಕ ಸಹಕಾರೀ ಸಂಸ್ಕರಣ ಮತ್ತು ಮಾರುಕಟ್ಟೆ ಕೇಂದ್ರ' ಗಳ ಮಂಜೂರಾತಿ ಮತ್ತು ನಿರ್ದೇಶನದಲ್ಲಿ ಇವನ್ನು ರಚಿಸಬೇಕು ಎಂದು ಅದು ಸೂಚಿಸಿದೆ.

ರೈತರು ಮತ್ತು ಇತರರ ಕೊಡುಗೆಯೊಂದಿಗೆ ಮತ್ತು ವಿವಿಧ ಸರಕಾರೀ ಯೋಜನೆಗಳು, ಸರ್ಕಾರದ ಖಾತರಿಯೊಂದಿಗೆ ಹಣಕಾಸು ಸಂಸ್ಥೆಗಳಿಂದ ಬಡ್ಡಿರಹಿತ ಸಾಲ ಮತ್ತು ಸಾಮಾಜಿಕ ಸಹಕಾರಿ ಸಂಸ್ಥೆಗಳ ಹೆಚ್ಚುವರಿ ಆದಾಯದ ಪಾಲಿನ ನೆರವಿನೊಂದಿಗೆ 'ಬೆಲೆ ಸ್ಥಿರೀಕರಣ ನಿಧಿ (ಪಿಎಸ್‌ಎಫ್) ಯನ್ನು ಸ್ಥಾಪಿಸಬೇಕು ಎಂಬ ಪ್ರಸ್ತಾವವನ್ನು ಕೂಡ ಈ ಮಾದರಿ ಮಸೂದೆ ಮುಂದಿಟ್ಟಿದೆ.

# ವರ್ತಮಾನಕ್ಕೆ ಧ್ವನಿಯಾದ ರೈತ ಗೀತೆಗಳು: ಬಿಳಿಮಲೆ

**(ರೈತ ಆಂದೋಲನದ ಕವಿತೆಗಳ ಸಂಕಲನ 'ಹೊನ್ನಾರು ಒಕ್ಕಲು' ಗೆ ಪ್ರೊ. ಪುರುಷೋತ್ತಮ ಬಿಳಿಮಲೆ ಅವರು ಬರೆದಿರುವ ಮುನ್ನುಡಿ)**

ಭಾರತೀಯ ಪ್ರಜಾಪ್ರಭುತ್ವದ ಕೇಂದ್ರವಾದ ದೆಹಲಿಯ ಸಂಸತ್ ಭವನದಿಂದ ಸುಮಾರು 40 ಕಿಮೀ ಸುತ್ತಮುತ್ತ ಕಡೆಗಳಲ್ಲಿ ಕೇಂದ್ರ ಸರ್ಕಾರವು ಸುಗ್ರೀವಾಜ್ಞೆಯ ಮೂಲಕ ಜಾರಿಗೆ ತಂದ ಮೂರು ಕಾಯ್ದೆಗಳ ವಿರುದ್ಧ ಲಕ್ಷಾಂತರ ರೈತರು ಭಾರತದ ಬಾವುಟ ಹಿಡಿದು ಪ್ರತಿಭಟನೆ ನಡೆಸುತ್ತಿದ್ದಾರೆ. ಸರ್ಕಾರ ಚಳುವಳಿಯನ್ನು ಮಟ್ಟ ಹಾಕಲು ಸಾಧ್ಯವಿರುವುದನ್ನೆಲ್ಲ ಮಾಡುತ್ತಿದೆ. ಭಾರತದ ಜೊತೆಗೆ ವಿಶ್ವವೇ ಅದನ್ನು ಗಮನಿಸುತ್ತಿದೆ.


ರೈತರ ಈ ಚಳುವಳಿಯನ್ನು ಒರೆಸಿ ಹಾಕುವುದು ಕಷ್ಟ. ಏಕೆಂದರೆ ಚಳುವಳಿ ನಡೆಸುವವರು ಅನ್ನದಾತರು ಮತ್ತು ಅವರೆಲ್ಲ ದೆಹಲಿಯ ಗಡಿ ಭಾಗಗಳಲ್ಲಿ ಸುಮಾರು 25 ಎಕರೆ ಜಾಗದಲ್ಲಿ ಊರುಗಳನ್ನೇ ಕಟ್ಟಿಕೊಂಡು ಕುಳಿತಿದ್ದಾರೆ. ಈ ಊರಿನ ಅಲ್ಲಲ್ಲಿ ರೈತರ ಸಮಸ್ಯೆಗಳ ಕುರಿತು ಉಪನ್ಯಾಸಗಳು, ಚರ್ಚೆಗಳೂ ನಡೆಯುತ್ತಿರುತ್ತವೆ. ಗ್ರಂಥಾಲಯಗಳು ತಲೆ ಎತ್ತಿವೆ. ಯುವಕರಿಗಾಗಿ ಜಿಮ್ ಕೂಡಾ ಇದೆ. ಉಚಿತ ವೈದ್ಯಕೀಯ ವ್ಯವಸ್ಥೆ ಮತ್ತು ಆಹಾರ ಎಲ್ಲರಿಗೂ ದೊರೆಯುತ್ತದೆ. ಚಿತ್ರಕಲಾ ಶಿಬಿರಗಳು, ಪೋಸ್ಟರ್‌ಗಳ ನಿರ್ಮಾಣ ನಿರಂತರವಾಗಿ ನಡೆಯುತ್ತಿವೆ. ಹೀಗೆ ಜಾತಿ, ಮತ, ಪ್ರದೇಶ ಮತ್ತು ವಯಸ್ಸಿನ ಹಂಗಿಲ್ಲದೆ ಚಳುವಳಿ ನಿರತ ರೈತರ ಊರು ದೇಶದ ರಾಜಧಾನಿಯ ಪಕ್ಕದಲ್ಲಿ ನಿರ್ಮಾಣವಾಗಿರುವುದು ದೇಶ ವಿದೇಶಗಳಲ್ಲಿ ಸುದ್ದಿಯಾಗಿದೆ. ಇಲ್ಲಿರುವ ಎಲ್ಲಾ ರೈತರ ಮಕ್ಕಳು ಅಮೆರಿಕಾ, ಕೆನಡಾ, ಇಂಗ್ಲೆಂಡ್, ಆಸ್ಟ್ರೇಲಿಯಾ ಮತ್ತು ನ್ಯೂಜಿಲಾಂಡ್‌ಗಳಲ್ಲಿ ಕೆಲಸ ಮಾಡುತ್ತಿರುವುದರಿಂದ ಚಳುವಳಿಗೆ ಅಂತ್ರಾಷ್ಟ್ರೀಯ ಆಯಾಮ ತಾನಾಗಿಯೇ ಪ್ರಾಪ್ತವಾಗಿದೆ. ಭಾರತದ ಕೃಷಿ ಪದ್ಧತಿಯು ಕಾರ್ಪೊರೇಟ್ ಹಿಡಿತಕ್ಕೆ ಬರುವುದನ್ನು ವಿಶ್ವದಾದ್ಯಂತ ಜನರು ಖಂಡಿಸುತ್ತಿದ್ದಾರೆ. ಸಂವಿಧಾನದ ಪ್ರಕಾರ ಕೃಷಿಯು ರಾಜ್ಯ ಸರ್ಕಾರದ ಅಧೀನದಲ್ಲಿ ಬರುತ್ತದೆ. ಅದರ ಬಗ್ಗೆ ಕೇಂದ್ರ ಸರ್ಕಾರವು ಈ ಬಗೆಯ ತೀರ್ಮಾನ ತಗೊಂಡದ್ದು ಸಂವಿಧಾನ ಬಾಹಿರವಲ್ಲವೇ? ಎಂಬಿತ್ಯಾದಿ ಪ್ರಶ್ನೆಗಳನ್ನು ಸಂವಿಧಾನ ತಜ್ಞರೂ ಕೇಳುತ್ತಿದ್ದಾರೆ. ಸರ್ಕಾರವು ರೈತರೊಡನೆ ನಡೆಸಿದ 11 ಸಭೆಗಳೂ ವಿಫಲವಾಗಿವೆ. ಸಮಸ್ಯೆಯನ್ನು ಸುಪ್ರೀಂಕೋರ್ಟಿಗೆ ದಾಟಿಸಲಾಗಿದೆ.

ಅಲ್ಲಿ ಏನಾಗುವುದೋ ತಿಳಿಯದು. ಈ ನಡುವೆ ಚಳುವಳಿಯು ನಿಧಾನವಾಗಿ ಅನೇಕ ರಾಜ್ಯಗಳಿಗೆ ವ್ಯಾಪಿಸುತ್ತಿದೆ. ಸರ್ಕಾರವೂ ಚಳುವಳಿ ನಿರತ ರೈತರನ್ನು ಬಗ್ಗುಬಡಿಯಲು ತನ್ನೆಲ್ಲಾ ಶಕ್ತಿಯನ್ನು ಬಳಸುತ್ತಿದೆ. ದೆಹಲಿಯಿಂದ ಭೌಗೋಳಿಕವಾಗಿ ಸಾಕಷ್ಟು ದೂರದಲ್ಲಿರುವ ಕರ್ನಾಟಕವು ರೈತ ಚಳುವಳಿಗೆ ಗಂಭೀರವಾಗಿ ಸ್ಪಂದಿಸುತ್ತಿರುವುದು ಬಹಳ ಕುತೂಹಲವಾದ ಸಂಗತಿಯಾಗಿದೆ. ಬಹಳ ಜನ ಕನ್ನಡಿಗರು ರೈತರೊಡನೆ ಇದ್ದಾರೆ. ಹಾಗೆ ನೋಡಿದರೆ, ಸಾಮಾಜಿಕ ನ್ಯಾಯದ ಕರ್ನಾಟಕವು ದೇಶದ ಇತರೆ ರಾಜ್ಯಗಳಿಗಿಂತ ಒಂದು ಹೆಜ್ಜೆ ಮುಂದಿಡುತ್ತಲೇ ಬಂದಿದೆ. 2016 ರಲ್ಲಿ ಜೆಎನ್‌ಯು ವಿನಲ್ಲಿ ನಡೆದ ಕನ್ನಯ್ಯ ಕುಮಾರ್ ಪ್ರಕರಣಕ್ಕೆ ಸಂಬಂಧಿಸಿದಂತೆ ಕನ್ನಡದಲ್ಲಿ ಮೂರು ಪುಸ್ತಕಗಳು ಪ್ರಕಟವಾದವು.

ಜೊತೆಗೆ ಜೆಎನ್‌ಯು ಹೋರಾಟದ ಭಾಗವಾಗಿ ಪ್ರಕಟವಾದ ರಾಷ್ಟ್ರೀಯತೆ ಕುರಿತು ಮಹತ್ವದ ಪುಸ್ತಕವೂ ಕನ್ನಡಕ್ಕೆ ಅನುವಾದವಾಯಿತು. ಈಗ ರೈತ ಚಳುವಳಿಗೆ ಪೂರಕವಾದ ಪ್ರಸ್ತುತ ಪುಸ್ತಕ 'ಹೊನ್ನಾರು ಒಕ್ಕಲು' ಪ್ರಕಟವಾಗುತ್ತಿದೆ. ಖ್ಯಾತ ಲೇಖಕಿ ಮತ್ತು ಹೋರಾಟಗಾರ್ತಿ ಕೆ.ಷರೀಫಾ ಮತ್ತು ಯಮುನಾ ಗಾಂವ್ಕರ್ ಈ ಪುಸ್ತಕವನ್ನು ಆಸ್ಥೆಯಿಂದ ಸಂಪಾದಿಸಿಕೊಟ್ಟಿದ್ದಾರೆ.

ನಾನು ಈ ಪುಸ್ತಕವನ್ನು ಚಳುವಳಿಯ ಒಂದು ಚಾರಿತ್ರಿಕ ದಾಖಲಾತಿ ಎಂದು ಗುರುತಿಸುತ್ತೇನೆ. ಇದರಲ್ಲಿ ಕನ್ನಡದ ಹಿರಿಯ ಲೇಖಕರ ಕವಿತೆಗಳಿವೆ. ಹೋರಾಟಗಾರರ ಹಾಡುಗಳಿವೆ ಮತ್ತು ಹೊಸ ಕವಿಗಳ ಹೊಸ ಭಾವಗಳಿವೆ. ಇವುಗಳನ್ನು ಓದುವುದೆಂದರೆ ಕಳೆದ ಒಂದು ಶತಮಾನದ ರೈತರ ಬವಣೆಗಳಿಗೆ ಸಾಕ್ಷಿಯಾದಂತೆ. ಬೇಂದ್ರೆ, ಕುವೆಂಪು, ದಿನಕರ ದೇಸಾಯಿ, ಸವಿತಾ ನಾಗಭೂಷಣ , ವೈದೇಹಿ, ಬರಗೂರು ರಾಮಚಂದ್ರಪ್ಪ, ಎಸ್.ಜಿ.ಸಿದ್ದರಾಮಯ್ಯ, ಸಿದ್ದಲಿಂಗಯ್ಯ, ರಂಜಾನ್ ದರ್ಗಾ, ಮಾಲತಿ ಪಟ್ಟಣಶೆಟ್ಟಿ, ಬಿ.ಟಿ.ಲಲಿತಾನಾಯಕ್, ಆರ್.ಜಿ.ಹಳ್ಳಿ ನಾಗರಾಜ್, ವಸುಂಧರಾ ಭೂಪತಿ, ಎಸ್.ಮಂಜುನಾಥ್, ಕಾ.ವೆಂ.ಶ್ರೀನಿವಾಸಮೂರ್ತಿ, ಮೊದಲಾದವರ ಕವಿತೆಗಳು ಸಾಹಿತ್ಯಕವಾಗಿಯೂ ಮೌಲಿಕವಾದವು. ಶಾರದಾ ಗೋಪಾಲ, ಮಾಧವಿ ಭಂಡಾರಿ, ಯಮುನಾ ಗಾಂವ್ಕರ, ಮಂಜುಳಾ ಹುಲಿಕುಂಟೆ, ಗಿರೀಶ್ ಹಂದಲಗೆರೆ, ವಿಜಯಕಾಂತ್ ಪಾಟೀಲ್, ಶಶಿರಾಜ್ ಹರತಲೆ, ಪದ್ಮ ಟಿ.ಚಿನ್ಮಯಿ, ಅರುಣ್ ಜೋಳದಕೂಡ್ಲಿಗಿ, ಎಚ್.ಆರ್.ನವೀನ್‌ಕುಮಾರ್ ಮೊದಲಾದವರ ಹಾಡುಗಳು ಅವರ ನಿರಂತರ ಹೋರಾಟಗಳ ಭಾಗವಾಗಿ ಹುಟ್ಟಿಕೊಂಡಿವೆ. ಬೇಲೂರು ರಘುನಂದನ್, ಚಿದಾನಂದ ಸಾಲಿ, ಸೌಮ್ಯ ಕೆ.ಆರ್., ಚಂಸು, ರೇಣುಕಾ ಹೆಳವರ, ಕೊಟ್ರೇಶ್ ಕೊಟ್ಟೂರು, ಸಚಿನ್ ಅಂಕೋಲಾ, ವಿಲ್ಸನ್ ಕಟೀಲ್ ಮೊದಲಾದ ಹೊಸ ತಲೆಮಾರಿನ ಕವಿಗಳು ಹೋರಾಟದ ಹಾಡುಗಳಿಗೆ ಹೊಸ ಭಾಷೆಯನ್ನು ಹುಡುಕುತ್ತಾ ಹೊರಟಿದ್ದಾರೆ.

ಹೀಗಾಗಿ ಇಲ್ಲಿನ ಬಹುಬಗೆಯ ಕವಿತೆಗಳನ್ನು ಯಾವುದೋ ಒಂದು



ನಿರ್ದಿಷ್ಟ ಚೌಕಟ್ಟಿನೊಳಗೆ ಹಾಕಿ ವಿಮರ್ಶಿಸಲಾಗದು. ಎಲ್ಲ ರಚನೆಗಳ ಕೇಂದ್ರದಲ್ಲಿ ಇರುವುದು ರೈತನೇ ಹೌದಾದರೂ ಅವುಗಳ ಕಾರ್ಯ ಮಾತ್ರ ಬೇರೆ ಬೇರೆ. ಕೆಲವು ಕವಿತೆಗಳು ತಮ್ಮ ಸಾಹಿತ್ಯಿಕ ಮೌಲ್ಯಗಳಿಗೆ ಹೆಸರಾದರೆ, ಮತ್ತೆ ಕೆಲವನ್ನು ಚಳುವಳಿಗಳಲ್ಲಿ ಹಾಡಿಕೊಳ್ಳಬಹುದು. ಮತ್ತೆ ಕೆಲವು ಹೊಸ ಸಂಕೇತ – ಪ್ರತಿಮೆಗಳ ಮೂಲಕ ಕವಿತೆಗಳಾಡಿ ರೇಖೆಗಳನ್ನು ವಿಸ್ತರಿಸುತ್ತವೆ. ಇವುಗಳಲ್ಲಿ ಯಾವುದು ಶ್ರೇಷ್ಠ ಮತ್ತು ಯಾವುದು ಕನಿಷ್ಠ ಎಂದು ಹೇಳಲು ಸಾಧ್ಯವಿಲ್ಲ. ಎಲ್ಲವೂ ತಮ್ಮ ಕಾಲದಅಗತ್ಯಗಳಿಗನುಗುಣವಾಗಿ ಸೃಷ್ಟಿಯಾದವು.

ಇಲ್ಲಿನ ಎಲ್ಲಾ ಕವಿತೆಗಳಲ್ಲಿ ಕಂಡುಬರುವ ಸಾಮಾನ್ಯ ಅಂಶವೆಂದರೆ ಭಾರತೀಯ ರೈತ ನಿಜಕ್ಕೂ ಬಡವ ಮತ್ತು ಶೋಷಿತ. ಅವನಿಗೆ ತನ್ನದೇ ಜಮೀನಿಲ್ಲ. ಆದರೆ ಅವನ ಜೀವನವು ಜಮೀನಿನಲ್ಲಿಯೇ ಕಳೆದು ಹೋಗುತ್ತದೆ. ಈ ಕುರಿತು ಅವನಲ್ಲಿಯೂ ತಿಳುವಳಿಕೆ ಹುಟ್ಟಬೇಕು. ಇತರರಲ್ಲಿಯೂ ಅರಿವು ಮೂಡಬೇಕು. ಸದ್ಯಕ್ಕೆ ಅವನಲ್ಲಿ ಒಂದು ಎಚ್ಚರ ಮೂಡಿದೆ. ನ್ಯಾಯಕ್ಕಾಗಿ ಆತ ಹೋರಾಡುತ್ತಿದ್ದಾನೆ. ಅವನ ಜೊತೆ ನಿಲ್ಲಬೇಕಾದ್ದು ಎಲ್ಲ ಸಂವೇದನಾಶೀಲರ ಕರ್ತವ್ಯ. ಹಾಗೆ ನಿಲ್ಲದವರು ಬಿ. ಶ್ರೀನಿವಾಸ್ ಹೇಳುವ ಹಾಗೆ 'ಲೋಕದ ಸಾಲಿಯ ಮುಂದೆ ನಿಂತ ಬೆತ್ತಲೆ ಅಪರಾಧಿ'ಯಾಗುವುದಂತೂ ನಿಜ. ಅನ್ನದಾತನಿಲ್ಲದೇ ಲೋಕವಿಲ್ಲ. ಸಚಿನ್ ಅಂಕೋಲಾ ಹೇಳುವ ಹಾಗೆ ರೈತರು'ತಟ್ಟೆಗೆ ಅನ್ನ ಕೊಟ್ಟವರು ಜಗದ ಹೊಟ್ಟೆಗೆ ತುತ್ತನಿಟ್ಟವರು'. ವಿಲ್ಸನ್ ಕಟೀಲ್ ಹೊಸ ಪ್ರತಿಮೆಗಳಿಗಾಗಿ ಹುಡುಕಾಡುತ್ತಲೇ ಇರುವ ಕವಿ. ಈಗಾಗಲೇ ಸಾಮಾಜಿಕಮಾಧ್ಯಮಗಳಲ್ಲಿ ಜನಪ್ರಿಯವಾಗಿರುವ ಅವರ 'ಅನ್ನದ ಪ್ರತಿರೋಧ' ಕವಿತೆಯ ಮಾರ್ಮಿಕ ಸಾಲುಗಳಿವು :

'ಆತ ಆಜ್ಞಾಪಿಸಿದ  
ಇನ್ನು ಒಂದು ಶಬ್ದ ಹೆಚ್ಚು ಮಾತಾಡಿದರೆ  
ನನ್ನ ಕಾಲು ತೊಳೆದ ನೀರು ನೀನು ಕುಡಿಯಬೇಕಾದೀತು  
ರೈತ ತಣ್ಣಗೆ ಉತ್ತರಿಸಿದ  
ನಾನು ತುಳಿದ ಮಣ್ಣಲ್ಲಿ ಬೆಳೆದದ್ದನ್ನೇ ನೀನು ಉಣ್ಣುತ್ತಿದ್ದೀಯಾ'

ಇದೇ ರೀತಿ ರಂಗನಾಥ ಕಂಟನಕುಂಟೆಯವರ :

'ಮತ್ತೆ ಇಬ್ಬಾಯ ಖಡ್ಗಗಳ  
ಹಾದಿಯಲಿ ನೆಟ್ಟು  
ನಡೆವವರ ಪಾದಗಳ ಸೀಳಿ  
ನೆತ್ತರ ಚಿತ್ತಾರ ಬಿಡಿಸಿ ಸಂಭ್ರಮಿಸಬಹುದು' ಎಂಬ ಸಾಲುಗಳಾಗಲೀ

ದೀಪದ ಮಲ್ಲಿಯವರ

'ಸಾಲು ಸಾಲು ಹೆಣದ ರಾಶಿ  
ಒಂದಕೂನು ಇಲ್ಲ ಸಾಕ್ಷಿ  
ಸಾವಿದ್ದ ಮನೆಯಲ್ಲೂಸಾಸಿವೆಯೂ ದಕ್ಕದ  
ಕಾಲ ಇದೋ ಬರುತಿದೆ'

ಎಂಬ ಸಾಲುಗಳಾಗಲೀ ಹೋರಾಟವನ್ನು ಹೊಸ ಭಾಷೆಯಲ್ಲಿ ಕಟ್ಟುವ ಪ್ರಯತ್ನಗಳಾಗಿವೆ.

ಮಹಾಂತೇಶರ

'ಯಾವ ಗೋಡೆಗಳೂ ಬಂಧಿಸಲಾರವು

ನಮ್ಮನ್ನು ಯಾವ ಬಂದೂಕಿನ ನಳಿಕೆಗಳೂ ಬಗ್ಗಿಸಲಾರವು'ಎಂಬ ಘೋಷಣೆ, ಪಿ.ಆರ್. ವೆಂಕಟೇಶ್‌ರ 'ಇನ್ನು ದೇವಗಿಲ್ಲ ನಿದ್ದೆ ಬಡಬಡಿಸಿದೆ ಗೋಪುರ. ಬೆವರುಕ್ಕಿದ ಬಿರುಗಾಳಿಗೆ ತರಗೆಲೆ ಕಸ ಕಾಪುರ'ಎಂಬ ಸಿಟ್ಟು, ಗಣೇಶ್ ಹೊಸ್ಮನೆಯವರ 'ಯಾವುದಕ್ಕೂ ಗತಿಯಿಲ್ಲದವರು ಮೈ ಚರ್ಮವನ್ನೇ ಸುಟ್ಟು ರೊಟ್ಟಿ ಮಾಡಿಕೊಳ್ಳುತ್ತಾರೆ'ಎಂಬ ಆಕ್ರೋಶ ಬಹುಕಾಲ ನೆನಪಲ್ಲಿ ಉಳಿಯುವಂಥವು. ಹಿಂದಿಯಿಂದ ರವಿಕುಮಾರ ಟೆಲೆಕ್ಸ್ ಅನುವಾದಿಸಿದ ಕವಿಯ ಸಾಲುಗಳು ಯಾರನ್ನಾದರೂ ಚುಚ್ಚಿ ಎಬ್ಬಿಸುವ ಶಕ್ತಿ ಹೊಂದಿವೆ :

"ನೀವು ವಿದ್ಯಾರ್ಥಿಗಳ ಹೋರಾಟವನ್ನು  
ಬೆಂಬಲಿಸಲಿಲ್ಲ  
ಪರಾವಾಗಿಲ್ಲ ಬಿಡಿ  
ನಿಮಗದರಿಂದೇನೂ ಲಾಭವಿರಲಿಲ್ಲ  
ನೀವು ಎನ್.ಆರ್.ಸಿ. ವಿರೋಧಿಸಿ  
ಪ್ರಜಾತಾಂತ್ರಿಕ ಸತ್ಯಾಗ್ರಹಿಗಳಿಗೆ ಜೊತೆಯಾಗಲಿಲ್ಲ  
ಪರವಾಗಿಲ್ಲ ಬಿಡಿ  
ಅವರಿಂದ ನಿಮಗೇನೂ ಅನುಕೂಲವಿರಲಿಲ್ಲ  
ನೀವು ಗುಂಪು ಹತ್ಯೆಗೀಡಾದವರ  
ದುಃಖತಪ್ತ ಕುಟುಂಬಗಳ ಜೊತೆಗೂ ನಿಲ್ಲಲಿಲ್ಲ  
ಪರವಾಗಿಲ್ಲ ಬಿಡಿ  
ಅವರಿಗಾಗಿ ನಿಮ್ಮಲ್ಲಿ ಕರುಣೆ ಇರಲಿಲ್ಲ."

ಹೀಗೆ ಬೆಳೆಯುತ್ತಾ ಹೋಗುವ ಈ ಕವಿತೆಯು ನಿಜಕ್ಕೂ ಬೇಜವಾಬ್ದಾರಿ ಜನರನ್ನು ಅಣಕಿಸುತ್ತದೆ ಮತ್ತು ದೇಶದಾದ್ಯಂತ ಜನರ ಪ್ರತಿಭಟನೆಗಳು ಒಂದೇ ರೀತಿಯಲ್ಲಿ ನಡೆಯುತ್ತಿವೆ ಎಂಬ ಸೂಚನೆಯನ್ನೂ ನೀಡುತ್ತದೆ.

'ಅನ್ನದಾತರ ಬಿರಿದ ಪಾದಗಳಲ್ಲಿ ನಿಮ್ಮ ಪಾರ್ಲಿಮೆಂಟಿನ ಬೇರುಗಳಿವೆ' ಎಂದು ಮಂಜುಳಾ ಹುಲಿಕುಂಟೆ ಬರೆದರೆ 'ಕಾಡ್ಗಿಚ್ಚೇ ಕುಣಿದರು ಇಂದು ಮತ್ತೆ ಹುಟ್ಟುತ್ತಾನೆ ಸೂರ್ಯ. ಚಿಗುರುವುದು ನೆಲ ನಿತ್ಯ' ಎಂದು ಪೀರ್‌ಭಾಷಾ ಆಶಾವಾದಿಯಾಗುತ್ತಾರೆ. ಉಜ್ಜಜ್ಜಿ ರಾಜಣ್ಣ ಮತ್ತು ರಾಜೇಶ್ವರಿಯವರು ಜನಪದ ಹಾದಿಯನ್ನು ತುಳಿದರೆ,ದಸ್ತಗೀರ್ ದಿನ್ನಿ ಗಜಲ್ ಬರೆಯುತ್ತಾರೆ. ಹೋರಾಟವನ್ನೇ ಮೈಗೂಡಿಸಿಕೊಂಡು ಬೆಳೆದ ಯಮುನಾ ಗಾಂವ್ಕರ್ ಕರ್ನಾಟಕದ ಗಡಿ ರೇಖೆಗಳನ್ನು ದಾಟಿ ಮಹಾರಾಷ್ಟ್ರದ ನಾಸಿಕದ ರೈತ ಜಾತಾದ ಬಗ್ಗೆ ಬರೆಯುತ್ತಾರೆ.

ಅಲ್ಲಾಗಿರಿರಾಜ್ ಕನಕಗಿರಿ ಕೂಡಾ ನಮ್ಮಲ್ಲಿ ಅಚ್ಚರಿ ಹುಟ್ಟಬಲ್ಲ ಕವಿತೆಗಳನ್ನು ಬರೆಯುತ್ತಲೇ ಇರುವವರು. ಅವರು ಬರೆಯುವುದು ಹೀಗೆ:

"ಸರಕಾರ ರೊಕ್ಕ ಮುದ್ರಿಸಬಹುದೆ ಹೊರತು  
ತುಂಡು ರೊಟ್ಟಿಯನ್ನೆಲ್ಲ ನೆನಪಿರಲಿ  
ನೀವು ಜಲ ಫಿರಂಗಿ ಸಿಡಿಸಬಹುದು ನಮ್ಮ ಮೈ ಮೇಲೆ  
ನಾವು ಮುಂಗಾರು ಮಳೆಯ ಆರ್ಭಟವೆಂದು ಭಾವಿಸುತ್ತೇವ""

ಇಲ್ಲಿ ಕಂಡು ಬರುವ ಪ್ರತಿಭಟನೆಯ ಸ್ವರೂಪ ಅನ್ಯಾದೃಶ್ಯವಾದುದು ಬರಗೂರರ ಕೆಳಗಿನ ಹಾಡು ಈಗಾಗಲೇ ಕರ್ನಾಟಕದಾದ್ಯಂತ ಓಡಾಡಿದೆ:

ಕತ್ತಲೆಯ ಬಯಲಲ್ಲಿ ಬೆಳಕನ್ನು ಹುಡುಕಿದರು  
ಬೆತ್ತಲೆಯ ಭ್ರಷ್ಟತೆಗೆ ಕೂತಲ್ಲೆ ಕನಲಿದರು  
ಕೆಂಡಗಣ್ಣಿನ ಬೆವರು ಎದ್ದು ನಿಂತಿದೆ ಇಲ್ಲಿ  
ಕುರ್ಚಿಗಂಟಿದ ಪೊಂಗರು ನಾಶವಾಗುವುದಲ್ಲಿ

ಡಾ. ವಿನಯಾ ಒಕ್ಕುಂದ ಅವರು ತಮ್ಮ ಪುಟ್ಟ ಕವಿತೆಯಲ್ಲಿ ಇಡೀ ದೇಶದ ರೈತರನ್ನು 'ನರ ಉಬ್ಬಿದ ಮುಂಗೈ' ಚಿತ್ರದಲ್ಲಿ ಕಾಣುವ ಬಗೆಯ ಅಪೂರ್ವವಾದುದು :

'ಕಂಡ, ಒಮ್ಮೆ ಹರಿಯಾಲೀ ರುಮಾಲಿನಲಿ  
ಒಮ್ಮೆ ಧಾರವಾಡೀ ಹಳದಿ ಪಟಗಾದಲಿ  
ಒಮ್ಮೆ ಕಡೆಯ ಹಾಸಿಗೆಯಲ್ಲಿದ್ದ ಬೋಳುನೆತ್ತಿಯಲಿ  
ಅದೇ ಬರಲು ಬೆರಳು, ಚಪ್ಪಟೆ ಉಗುರು  
ನನ್ನ ಬೊಗಸೆಯಲ್ಲೇ ಮಿಡುಕಿ ತಣ್ಣಾಗಾಗಿದ್ದ ಅದೇ  
ನರ ಉಬ್ಬಿದ ಮುಂಗೈ, ನೆತ್ತಿ ಸವರಿದ

ಸಂಕಲನದಲ್ಲಿ ನನಗೆ ಇಷ್ಟವಾದ ಎಲ್ಲ ಕವಿತೆಗಳನ್ನು ಹೀಗೆ ಉದ್ಧರಿಸುತ್ತಾ ಹೋದರೆ ಮುನ್ನುಡಿ ಉದ್ದವಾಗುತ್ತದೆಯೆಂದು ನಾನು ಬಲ್ಲೆ. ಡಾ. ಕೆ. ಷರಿಫಾ, ಡಾ. ಆರ್.ತಾರಿಣಿ ಶುಭದಾಯಿನಿ, ವೈದೇಹಿ, ಸುಬ್ರಾಯ ಮತ್ತಿಹಳ್ಳಿ, ಶಾಂತರಾಮ ನಾಯಕ ಹಿಚಕಡ, ಗುರುಬಸವರಾಜ, ಹೆಚ್.ಆರ್.ಸುಜಾತ, ಕೆ.ನೀಲಾ, ಎಂ.ಇಕ್ಬಾಲ್ ಹುಸೇನ್, ಎ.ಎಸ್. ಮಕಾನದಾರ, ಬಿ.ಎಂ.ಬಶೀರ್, ಶಿವಸುಂದರ್, ನಾ. ದಿವಾಕರ ಮೊದಲಾದ ಪ್ರಸಿದ್ಧರ ಕವಿತೆಗಳನ್ನು ಇಲ್ಲಿ ಓದುವುದೇ ಒಂದು ವಿಶಿಷ್ಟ ಅನುಭವ.

ಕರ್ನಾಟಕದಿಂದ ಎಷ್ಟೋ ದೂರದಲ್ಲಿ ನಡೆಯುತ್ತಿರುವ ರೈತ ಚಳುವಳಿಯನ್ನು ತಮ್ಮದೆಂಬಂತೆ ಪರಿಭಾವಿಸಿ, ಅದನ್ನು ಕವಿತೆಯ ರೂಪದಲ್ಲಿ ಅಭಿವ್ಯಕ್ತಿಸಿದ ಇಲ್ಲಿನ ಕವಿಗಳ ಸಾಮಾಜಿಕ ಬದ್ಧತೆ ಮತ್ತು ಕಳಕಳಿ ಚಾರಿತ್ರಿಕವಾದುದು. ಕಾಲದ ಅಗತ್ಯಕ್ಕೆ ಧ್ವನಿಯಾದ ಅವರೆಲ್ಲರಿಗೂ ಅಭಿನಂದನೆಗಳು. ಕವಿತೆಗಳನ್ನು ಸಂಪಾದಿಸಿಕೊಟ್ಟ ಕೆ.ಷರೀಫಾ ಹಾಗೂ ಯಮುನಾ ಗಾಂವ್ಕರ್‌ರವರಿಗೆ ಕೃತಜ್ಞತೆಗಳು.

**ಪ್ರೊ. ಪುರುಷೋತ್ತಮ ಬಿಳಿಮಲೆ**  
ಟಿಕ್ರಿ ಗಡಿ ಜನವರಿ 30  
ಮಹಾತ್ಮ ಹುತಾತ್ಮ ದಿನ

JANASHAKTHI KANNADA VARA PATRIKE MARCH 1-7, 2021 Price: Rs. 10/- Date of Publication: 26 February 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

# ಕೃಷಿ ಕಾರ್ಮಿಕರಿಗೂ ಕಲ್ಯಾಣ ನಿಧಿಯನ್ನು ಸ್ಥಾಪನೆ ಮಾಡುವ ನಿರ್ಧಾರವನ್ನು ಬಜೆಟ್‌ನಲ್ಲಿ ಘೋಷಿಸಲು ಆಗ್ರಹ




























# ರೈತರ ಹೋರಾಟದ ಬಗ್ಗೆ ಬರಹಗಾರರು ಮೌನ ಮುರಿಯಬೇಕಿದೆ – ಬಿಳಿಮಲೆ



ಕೇಂದ್ರದ ಮೂರು ಕೃಷಿ ಕಾಯ್ದೆ ವಿರೋಧಿಸಿ ದೆಹಲಿಯಲ್ಲಿ ನಡೆಯುತ್ತಿರುವ ರೈತ ಹೋರಾಟದ ಬಗ್ಗೆ ಬರಹಗಾರರು ಮೌನ ಮುರಿಯಬೇಕು ಎಂದು ಹಿರಿಯ ಚಿಂತಕ ಡಾ. ಪುರುಷೋತ್ತಮ ಬಿಳಿಮಲೆಯವರು ಆಗ್ರಹಿಸಿದರು.

ಅವರು ನೂತನ ಕೃಷಿ ಕಾಯ್ದೆಗಳನ್ನು ವಿರೋಧಿಸಿ ಕೇಂದ್ರ ಸರ್ಕಾರದ ಧೋರಣೆ ಪ್ರತಿಭಟಿಸಿ ದೆಹಲಿಯಲ್ಲಿ ನಡೆಯುತ್ತಿರುವ ರೈತರ ಹೋರಾಟ ಕುರಿತಾದ ಕೆ. ಷರೀಫಾ ಹಾಗೂ ಯಮುನಾ ಗಾಂವ್ಕರ್ ಸಂಪಾದಿತ 'ಹೊನ್ನಾರು ಒಕ್ಕಲು' ಮತ್ತು ಹೆಚ್.ಆರ್. ನವೀನಕುಮಾರ ಅವರ 'ಕದನ ಕಣ' ಕೃತಿಗಳನ್ನು ಬಿಡುಗಡೆಗೊಳಿಸಿ ಮಾತನಾಡಿದರು.



ಕೃಷಿಕಾಯ್ದೆ ರದ್ದುಗೊಳಿಸುವಂತೆ ಆಗ್ರಹಿಸಿ ಕಳೆದ 84 ದಿನಗಳಿಂದ ದೆಹಲಿಯಲ್ಲಿ ಹೋರಾಟ ನಡೆಸುತ್ತಿದ್ದರೂ ಸೌಜನ್ಯಕ್ಕಾಗಿ ಕೇಂದ್ರ ಸರ್ಕಾರ ಮಾತನಾಡಿಸುವ ಹೊಣೆಗಾರಿಕೆ ಪ್ರದರ್ಶಿಸುತ್ತಿಲ್ಲ. ಈ ಬಗ್ಗೆ ಕೇಂದ್ರ ಸರ್ಕಾರದ ಆಡಳಿತ ಕ್ರೌರ್ಯದ ವಿರುದ್ಧ ಬರಹಗಾರರು, ಸಾಹಿತಿಗಳು ಮಾತನಾಡುತ್ತಿಲ್ಲ.ಮೌನ ವಹಿಸಿರುವುದು ಏಕೆ ಎಂದು ಪ್ರಶ್ನಿಸಿದರು.?

ತಮ್ಮನ್ನು ನಿರ್ಲಕ್ಷಿಸುತ್ತಿರುವ ಕೇಂದ್ರ ಸರ್ಕಾರವನ್ನು ರೈತರು ಅತ್ಯಂತ ಸಹನೆಯಿಂದಲೇ ಕಾಣುತ್ತಿದ್ದಾರೆ. ಇದು ರೈತರ ದೊಡ್ಡ ಗುಣ. ಯುವ ಬರಹಗಾರರು ರೈತರ ಹೋರಾಟ ಬೆಂಬಲಿಸಿ ಸಾಹಿತ್ಯ ರಚನೆ ಮಾಡುತ್ತಿದ್ದರೆ ಹಿರಿಯ ಬರಹಗಾರರು ಮೌನವಹಿಸಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು. ಪ್ರಜಾಸತಾತ್ಮಕ ನೆಲೆಯಲ್ಲಿ ಹೋರಾಟ ನಡೆಸುತ್ತಿರುವ ರೈತರ ವಿರುದ್ಧ ಕೇಂದ್ರ ಸರ್ಕಾರ ಕೆಟ್ಟದ್ದಾಗಿ ನಡೆದುಕೊಳ್ಳುತ್ತಿದೆ. ರೈತ ಪರ ಘೋಷಣೆ ಕೂಗಿದವರನ್ನು ಜೈಲಿಗಟ್ಟುವ ಕೆಲಸ ಮಾಡುತ್ತಿದೆ. ಕೇಂದ್ರ ಸರ್ಕಾರದ ಇಂತಹ ಯಾವ ಕ್ರಮವೂ ರೈತರನ್ನು ಹಿಮ್ಮೆಟ್ಟಿಸಲಾಗದು ಎಂದು ಎಚ್ಚರಿಸಿದರು.

ಬ್ರಿಟಿಷರ ಕಾಲದ ವಸಾಹತುಶಾಹಿ ವ್ಯವಸ್ಥೆಗೂ ನವ ವಸಾಹತುಶಾಹಿ ಪದ್ಧತಿಗೂ ವ್ಯತ್ಯಾಸ ಇದೆ. ವೈರಿಗಳು (ಬ್ರಿಟಿಷರು) ಯಾರು ಎಂಬುದು ಅವರ ಮುಖ ಮತ್ತು ವೇಷಭೂಷಣದ ಮೂಲಕವೇ ಅಂದು ತಿಳಿಯಬಹುದಿತ್ತು. ನವ ವಸಾಹತುಶಾಹಿ ವ್ಯವಸ್ಥೆಯಲ್ಲಿ ವೈರಿಗಳನ್ನು ಆ ರೀತಿ ಗುರುತಿಸಲು ಆಗುವುದಿಲ್ಲ. ಹೀಗಾಗಿ, ಹೋರಾಟ ನಡೆಸುವುದು ಕಷ್ಟವಾಗಲಿದೆ. ಕೃಷಿಗೆ ಸಂಬಂಧಿಸಿದ ವಿಷಯಗಳನ್ನು ತೀರ್ಮಾನಿಸುವ ಅಧಿಕಾರ ಸಂವಿಧಾನದ ಪ್ರಕಾರ ರಾಜ್ಯಗಳಿಗೆ ಇದೆ. ವಿದ್ಯುತ್ ಸಂಬಂಧಿಸಿದ ವಿಷಯದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರ ಜಂಟಿಯಾಗಿ ತೀರ್ಮಾನ ಕೈಗೊಳ್ಳಬೇಕು. ಆದರೆ, ರಾಜ್ಯಗಳ ಅಧಿಕಾರ ಪರಿಗಣಿಸದೆ ಕೇಂದ್ರ ಸರ್ಕಾರವೇ ನಿರ್ಧಾರ ಕೈಗೊಂಡು ಕಾಯ್ದೆಗಳನ್ನು ರೂಪಿಸುತ್ತಿರುವುದು ಸಂವಿಧಾನಕ್ಕೆ ವಿರುದ್ಧವಾದ ನಡೆ' ಎಂದು ಬಿಳಿಮಲೆ ಹೇಳಿದರು.

ಕಾರ್ಯಕ್ರಮಕ್ಕೂ ಮುನ್ನ ನಿರ್ದೇಶಕ ಕೇಸರಿ ಹರವೂ ಅವರ ಸಾಕ್ಷಿ ಚಿತ್ರವನ್ನು ಪ್ರದರ್ಶಿಸಲಾಯಿತು. ಅಖಿಲ ಭಾರತ ಕಿಸಾನ್ ಸಭಾದ ಜಂಟಿ ಕಾರ್ಯದರ್ಶಿಯಾದ ವಿಜೂ ಕೃಷ್ಣನ್, ಚಲನ ಚಿತ್ರ ನಿರ್ದೇಶಕ ಕೇಸರಿ ಹರವೂ, ಲೇಖಕರಾದ ಕೆ. ಷರೀಫಾ, ಹೆಚ್. ಆರ್. ನವೀನ್ ಕುಮಾರ್ ಮಾತನಾಡಿದರು. ಯಮುನಾ ಗಾಂವ್ಕರ್ ಕಾರ್ಯಕ್ರಮವನ್ನು ನಿರ್ವಹಿಸಿದರು. ವೇದಿಕೆಯ ಮೇಲೆ ಕ್ರೀಯಾ ಮಾಧ್ಯಮದ ಎನ್. ಕೆ. ವಸಂತರಾಜ್, ಚಂದ್ರಶೇಖರ್ ಗಂಗಾಧರ್ ಉಪಸ್ಥಿತರಿದ್ದರು.

**JANASHAKTHI KANNADA VARA PATRIKE:** Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**